ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 46

ನವೆಂಬರ್ 15, 2009

ರೂ. 5/-

ಕನ್ನಡ ವಾರಪತ್ರಿಕೆ



ಎಲ್ಲಿದೆ ಅನ್ನ? ಎಲ್ಲವೂ ಚಿನ್ನ!



ಕರ್ನಾಟಕದಲ್ಲಿ ಹೆಚ್ಚುತ್ತಿದೆ ಹಸಿವು

ರೆಡ್ಡಿ - ಯಡ್ಡಿ ಜಗಳದಲ್ಲಿ ರಾಜ್ಯದ ಹಿತ ಬಲಿ





'ಸರ್ಕಾರಿ ಆಸ್ಪತ್ರೆಯ ಕೊಲ್ಲದಿರಿ'
ಮಂಗಳೂರಿನಲ್ಲಿ ಚಳುವಳಿ

ಇಂದಿಗೂ ಪ್ರಸ್ತುತ ಅಕ್ಟೋಬರ್ ಕ್ರಾಂತಿ ಸಂದೇಶ

ಭೂಮಿಯು ಬಿಸಿಯೇರುವುದರ ಅಪಾಯಗಳು ಹಲವು. ಅಕಾಲಿಕ ಮಳೆ, ಪ್ರವಾಹ, ಬರ ಇತ್ಯಾದಿ. ಇದರ ಪ್ರಧಾನ ಹೊಣೆ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳು - ಮುಖ್ಯವಾಗಿ ಅಮೇರಿಕ. ಆದರೆ ಅವುಗಳು ಈ ಹೊಣೆಯನ್ನು ಹೊರಲು ಸಿದ್ಧವಿಲ್ಲ.



ಬಿಸಿಯೇರುತ್ತಿರುವ ಭೂಮಿಯ ಅಪಾಯ
ಅಮೆರಿಕ ಅಪರಾಧಿ ನಂ. 1

ಹವಾಮಾನ ಬದಲಾವಣೆ ಕುರಿತು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಣಯ

ಹವಾಮಾನ ಬದಲಾವಣೆ ಸಮಸ್ಯೆಯು ಬಿಕ್ಕಟ್ಟಿನ ಸ್ಥಿತಿಯನ್ನು ತಲುಪಿದೆ. ಹವಾಮಾನ ಬದಲಾವಣೆ ಕುರಿತ ಅಂತರ-ಸರ್ಕಾರಿ ಸಮಿತಿ (ಐಪಿಸಿಸಿ)ಯ ವರದಿಯಲ್ಲಿರುವ ವಿಜ್ಞಾನಿಗಳ ಒಮ್ಮತದ ಅಭಿಪ್ರಾಯವೇನೆಂದರೆ ವಾತಾವರಣದಲ್ಲಿರುವ ಹಸಿರುಮನೆ ಅನಿಲಗಳ ಸಾಂದ್ರತೆಯ ಮಟ್ಟವು ಕ್ಷಿಪ್ರಗತಿಯಲ್ಲಿ ಏರುತ್ತಿದ್ದು, ಇದರಾಚೆಗೆ ಸರಿಪಡಿಸಲಾಗದಂತಹ, ಪ್ರಳಯೋಪಾದಿಯ ಜಾಗತಿಕ ತಾಪಮಾನ ಮತ್ತು ವಾತಾವರಣದಲ್ಲಿ ಇತರೆ ಬದಲಾವಣೆಗಳು ಉಂಟಾಗುತ್ತವೆ (ಭೂಮಿಯ ವಾತಾವರಣವನ್ನು ಬಿಸಿಗೊಳಿಸುವ ಅನಿಲಗಳು ಕೈಗಾರಿಕೆ ಮತ್ತು ಇಂಧನ ಉರುವಲುಗಳಿಂದ ಹೊರಸೂಸುತ್ತವೆ, ಈ ಅನಿಲಗಳನ್ನು ಹಸಿರುಮನೆ ಅನಿಲಗಳು ಎಂದು ಕರೆಯಲಾಗುತ್ತದೆ). ಈ ಬದಲಾವಣೆಗಳು ಇಡೀ ಮನುಕುಲವನ್ನು ಸಂಕಷ್ಟಕ್ಕೆ ತಳ್ಳುತ್ತವಾದರೂ, ಅದರ ಅತಿಕೆಟ್ಟ ಪರಿಣಾಮಗಳನ್ನು ವಿಶೇಷವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಬಡಜನತೆಯು ಅನುಭವಿಸಬೇಕಾಗುತ್ತದೆಂಬುದು ಸ್ಪಷ್ಟವಾಗಿದೆ. ಅಕಾಲಿಕ ಮಳೆ ವೈಪರೀತ್ಯಗಳು, ಹಿಮಾಲಯ ಮಂಜುಗಡ್ಡೆಗಳ ಕರಗುವಿಕೆ, ನೆರೆಹಾವಳಿ ಮತ್ತು ಬರ, ದವಸಧಾನ್ಯಗಳ ಉತ್ಪಾದನೆಯು ಕುಂಠಿತವಾಗುವುದು ಒಳಗೊಂಡಂತೆ ಬೆಳೆಗಳ ಸ್ವಭಾವದಲ್ಲಿ ಬದಲಾವಣೆ, ಮತ್ತು ಏರುತ್ತಿರುವ ಸಮುದ್ರ ಮಟ್ಟವು ಬೃಹತ್ ನಗರಗಳನ್ನು ಒಳಗೊಂಡು ತೀರ ಪ್ರದೇಶಗಳನ್ನು ಮುಳುಗಿಸುವಂತಹ ಬೆಳವಣಿಗೆಗಳಿಂದಾಗಿ ಭಾರತವೂ ಕೂಡ ತೀವ್ರವಾಗಿ ಸಂಕಷ್ಟಕ್ಕೆ ಸಿಲುಕುವ ಪ್ರದೇಶಗಳಲ್ಲೊಂದಾಗಿದೆ.

ಭಾರತ, ಚೀನಾಗಳ ಹೆಗಲಿಗೆ

2009 ಡಿಸೆಂಬರಿನಲ್ಲಿ ಕೋಪನ್‌ಹೇಗನ್‌ನಲ್ಲಿ ಜರುಗುವ ಮುಂಬರುವ ಜಾಗತಿಕ ಸಮಾವೇಶದಲ್ಲಿ ಜಾಗತಿಕ ವಾಯು ಮಲಿನಕಾರಕಗಳ ಹೊರಸೂಸುವಿಕೆಯನ್ನು ಕಡಿತಗೊಳಿಸಲು ಮತ್ತು ವಾತಾವರಣದಲ್ಲಿ ಹಸಿರುಮನೆ ಅನಿಲಗಳ ಸಾಂದ್ರತೆಯ ಮಟ್ಟವನ್ನು ಕಡಿಮೆಗೊಳಿಸಲು ವಿಶ್ವ ಸಂಸ್ಥೆಯ ಹವಾಮಾನ ಬದಲಾವಣೆ ಕುರಿತ ರಚನಾತ್ಮಕ ಸಮಾವೇಶದ (ಯುಎನ್‌ಎಫ್‌ಸಿಸಿ) ಅಡಿಯಲ್ಲಿ ಅಂತರಾಷ್ಟ್ರೀಯ ಒಪ್ಪಂದವನ್ನು ಅಂತಿಮಗೊಳಿಸುವ ನಿರೀಕ್ಷೆಯಿದೆ. ಹವಾಮಾನ ಬದಲಾವಣೆಯಿಂದುಂಟಾಗುವ ಅಪಾಯಗಳ ಕುರಿತು ಬೆಟ್ಟದಷ್ಟು ಸಾಕ್ಷ್ಯವಿದ್ದಾಗ್ಯೂ ಸಹ ಅಮೇರಿಕಾ ಮತ್ತು ಇತರೆ ಕೈಗಾರಿಕಾ ರಾಷ್ಟ್ರಗಳು ಈ ಪ್ರಯತ್ನಗಳನ್ನು ಹಾಳುಗೆಡವಿಯೇ ತೀರುವುದಾಗಿ ಕಂಡುಬರುತ್ತಿದೆ. ಈ ರಾಷ್ಟ್ರಗಳು ಯುಎನ್‌ಎಫ್‌ಸಿಸಿ ಯು ಅಭಿವೃದ್ಧಿ ಹೊಂದಿರುವ ಮತ್ತು ಹೊಂದುತ್ತಿರುವ ರಾಷ್ಟ್ರಗಳಿಗೆ ವಿಧಿಸುವ "ಎಲ್ಲರೂ ಹೊರಲೇಬೇಕಾದ ಆದರೆ ವಿವಿಧ ಪ್ರಮಾಣದ ಜವಾಬ್ದಾರಿಗಳು" ಎಂಬ ನೀತಿಯನ್ನು ಧಿಕ್ಕರಿಸುತ್ತಿವೆ. ಈ ನೀತಿಯ ಪ್ರಕಾರ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ವಾಯು ಮಲಿನಕಾರಕಗಳ ಹೊರಸೂಸುವಿಕೆಯನ್ನು ಕಡಿತ ಮಾಡಲೇಬೇಕಾದ ಕಟ್ಟುನಿಟ್ಟಿಗೆ ಒಳಪಟ್ಟು, ಹವಾಮಾನ ಬದಲಾವಣೆಗಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಹಣಕಾಸು ಮತ್ತು ತಂತ್ರಜ್ಞಾನ ವರ್ಗಾವಣೆ ಹಾಗೂ ಕಡಿಮೆ-ಇಂಗಾಲ ಅಭಿವೃದ್ಧಿ ಪದ್ಧತಿಗಳ ನೆರವು ಒದಗಿಸಬೇಕು. ಅಮೇರಿಕಾದ ನೇತೃತ್ವದಲ್ಲಿ ಮುಂದುವರೆದ ರಾಷ್ಟ್ರಗಳು ಈ ಬಿಕ್ಕಟ್ಟಿನ ಹೊರೆಯನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ, ವಿಶೇಷವಾಗಿ ಭಾರತ, ಚೀನಾ ಮತ್ತು ಇತರೆ "ಬೆಳೆಯುತ್ತಿರುವ ಆರ್ಥಿಕಗಳು" ಎಂದು ಕರೆಯಲ್ಪಡುವ ರಾಷ್ಟ್ರಗಳಿಗೆ ವರ್ಗಾಯಿಸಲು ಯತ್ನಿಸುತ್ತಿವೆ.

ಹವಾಮಾನ ಬದಲಾವಣೆ ಮತ್ತು ಜಾಗತಿಕವಾದ ಹವಾಮಾನ ಮಾತುಕತೆಯಲ್ಲಿ ಉಂಟಾಗುತ್ತಿರುವ ಬೆಳವಣಿಗೆಯು ಬಂಡವಾಳಶಾಹಿಯ ಆಕ್ರಮಣಕಾರಿ ಸ್ವಭಾವದ ಸ್ಪಷ್ಟ ಅಭಿವ್ಯಕ್ತಿಯಾಗಿದೆ. ಹವಾಮಾನ ಬದಲಾವಣೆಯು ಕೈಗಾರಿಕಾ ರಾಷ್ಟ್ರಗಳು ಇಡೀ ವಿಶ್ವ ಜನತೆಗೆ ಸೇರಿದ ಜಾಗತಿಕ ವಾತಾವರಣವನ್ನು ಆಕ್ರಮವಾಗಿ ಸೂರೆಗೈದು ಅತಿಕ್ರಮಿಸುತ್ತಿರುವುದರಿಂದ ಉಂಟಾಗಿರುವಂಥದ್ದು. ಅಮೇರಿಕಾ ಮತ್ತು ಅದರ ಮೈತ್ರಿಕೂಟವು ಇಂತಹ ಅಸಮಾನತೆಗಳನ್ನು ಜಾಗತಿಕ ಹವಾಮಾನ ಒಪ್ಪಂದದೊಳಕ್ಕೆ ರಚನಾತ್ಮಕವಾಗಿ ಒಳತೂರಲು ಈಗ ಯತ್ನಿಸುತ್ತಿವೆ. ಮುಂದುವರೆದ ರಾಷ್ಟ್ರಗಳು ಪರಿಸರಕ್ಕೆ ಉಂಟಾಗಿರುವ ಹಾನಿಗೆ ಪರಿಹಾರವಾಗಿ ಹಣಕಾಸು ಒದಗಿಸಲು ನಿರಾಕರಿಸುತ್ತಿರುವುದು ಮತ್ತು ತಂತ್ರಜ್ಞಾನ ವರ್ಗಾವಣೆಯ ಮೇಲೆ ಬೌದ್ಧಿಕ ಆಸ್ತಿ ಹಕ್ಕುಗಳ (ಐಪಿಆರ್) ನಿರ್ಬಂಧಗಳನ್ನು ಹೇರುತ್ತಿರುವುದು, ಜಾಗತಿಕ ವ್ಯವಸ್ಥೆಯಲ್ಲಿ ಅಸಮಾನತೆಗಳನ್ನು ಬೆಳೆಸುವ ಒಟ್ಟಾರೆ ಪ್ರಯತ್ನಗಳ ಭಾಗವಾಗಿವೆ.

ಒಪ್ಪಂದ ಉಲ್ಲಂಘನೆ - ಮಾಲಿನ್ಯ ಏರಿಕೆ

ಇಂತಹ ಅಸಮಾನತೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ, ಕ್ಯೋಟೋ ಒಪ್ಪಂದವು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೆ ಮಾಲಿನ್ಯ ಹೊರಸೂಸುವಿಕೆಯ ಕಡಿತದ ಗುರಿಯನ್ನು ವಿಧಿಸಿದ್ದರೆ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳನ್ನು ಅಂತಹ ಕಟ್ಟಳೆಗಳಿಂದ ವಿನಾಯಿತಿ ನೀಡಿ, ಅದರ ಬದಲು ಅವುಗಳು ತಮ್ಮ ರಾಷ್ಟ್ರದ ಸಾಮರ್ಥ್ಯಕ್ಕನುಗುಣವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕರೆ ನೀಡಲಾಗಿತ್ತು. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ವಾಯುಮಲಿನಕಾರಕಗಳ ಮಟ್ಟವನ್ನು ತಾವು 1990ರಲ್ಲಿ ಹೊರಸೂಸುತ್ತಿದ್ದಕ್ಕಿಂತ ಈಗ ಶೇ. 5ರಷ್ಟು ಕಡಿಮೆ ಹೊರಸೂಸುವ ತಮ್ಮದೇ ಒಪ್ಪಂದವನ್ನು ಉಲ್ಲಂಘಿಸಿವೆ. ಇದಕ್ಕೆ ತದ್ವಿರುದ್ಧವಾಗಿ, ಅವುಗಳ ಒಟ್ಟಾರೆ ಹೊರಸೂಸುವಿಕೆಯು ಶೇ. 10ರಷ್ಟು ಹೆಚ್ಚಾಗಿದ್ದರೆ, ಒಪ್ಪಂದಕ್ಕೆ ಸಹಿ ಹಾಕಲು ನಿರಾಕರಿಸಿದ ಅಮೇರಿಕಾ ಮಲಿನಕಾರಕಗಳ ಹೊರಸೂಸುವಿಕೆಯನ್ನು ಶೇ. 17ರಷ್ಟು ಹೆಚ್ಚಿಸಿದೆ. ಬಿಕ್ಕಟ್ಟು ಅಪಾಯಕಾರಿ ಮಟ್ಟವನ್ನು ಮೀರುತ್ತಿದ್ದು, 2020 ನೇ ಇಸವಿ ವೇಳೆಗೆ ಶೇ. 40ರಷ್ಟು ಕಡಿತವನ್ನು ಮತ್ತು 2050ರ ವೇಳೆಗೆ ಶೇ. 90ರಷ್ಟು ಮಲಿನಕಾರಕ ಹೊರಸೂಸುವಿಕೆಯ ಕಡಿತವನ್ನು ಮಾಡಲೇಬೇಕೆಂದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಐಪಿಸಿಸಿ ಈಗ ಕರೆ ನೀಡಿದೆ. ಇದರ ಬದಲಿಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತಮ್ಮ ಈ ಮೊದಲಿನ ಒಪ್ಪಂದಕ್ಕೇ ಇನ್ನಷ್ಟು ಎಳ್ಳುನೀರು ಬಿಡುತ್ತಾ, 1990ರ ಮಟ್ಟಕ್ಕೆ ಹೋಲಿಸಿದಲ್ಲಿ ಯೂರೋಪಿಯನ್ ಒಕ್ಕೂಟವು ಕೇವಲ ಶೇ. 20ರಷ್ಟು ಕಡಿತವನ್ನು ಮತ್ತು ಅಮೇರಿಕಾ ಕೇವಲ ಶೇ. 3ರಷ್ಟು ಕಡಿತವನ್ನು ಮಾಡುವುದಾಗಿ ಹೇಳುತ್ತಿವೆ. ಇನ್ನೂ ಆಘಾತಕಾರಿಯೆಂದರೆ, ಕೋಪನ್‌ಹೇಗನ್ ಸಮಾವೇಶ ಹತ್ತಿರ ಬರುತ್ತಿರುವಂತೆಯೇ ಅಭಿವೃದ್ಧಿ ಹೊಂದಿರುವ ಮತ್ತು ಹೊಂದುತ್ತಿರುವ ರಾಷ್ಟ್ರಗಳಿಗೆ ಯುಎನ್‌ಎಫ್‌ಸಿಸಿ ಮತ್ತು ಕ್ಯೋಟೋ ತತ್ವಗಳು ಪ್ರತಿಪಾದಿಸುವ 'ವಿವಿಧ ಪ್ರಮಾಣದ ಜವಾಬ್ದಾರಿಗಳಿಗೆ' ಬದಲಾಗಿ ಎಲ್ಲ ರಾಷ್ಟ್ರಗಳನ್ನು ಒಂದೇ ಗುಂಪಿನಲ್ಲಿ ಸೇರಿಸಲು ಅಮೇರಿಕಾ ಮತ್ತು ಅದರ ಮುಖ್ಯ ಮೈತ್ರಿ ರಾಷ್ಟ್ರಗಳು ಯತ್ನಿಸುತ್ತಿವೆ.


ಅಂತರಾಷ್ಟ್ರೀಯ ಮಾತುಕತೆ ಹಿನ್ನೆಲೆಯಲ್ಲಿ ಭಾರತದ ಅಧಿಕೃತ ಧೋರಣೆ, ಮತ್ತು ದೇಶದೊಳಗಿನ ಕ್ರಮಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಅಮೇರಿಕಾ ನೇತೃತ್ವದ ಈ ಪ್ರಯತ್ನಗಳನ್ನು ಗಂಭೀರವಾಗಿ ಪ್ರತಿರೋಧಿಸುವ ಬದಲು, ತಾನು ಕ್ಯೋಟೋ ತತ್ವಗಳಿಗೆ ಬದ್ಧವಿರುವುದಾಗಿ ಭಾರತ ಸರ್ಕಾರವು ಹೊರಗಡೆ ಹೇಳಿಕೊಂಡರೂ, ಹಲವು ರೀತಿಯಲ್ಲಿ ಅಮೇರಿಕಾದ ಧೋರಣೆಗೆ ರಹಸ್ಯವಾಗಿಯೂ ಮತ್ತು ಬಾಹ್ಯವಾಗಿಯೂ ಬೆಂಬಲ ನೀಡುತ್ತಿದೆ. ಸಾಮಾನ್ಯ ಗುರಿಗಳಿಗೆ ಮತ್ತು ಕೆಲವು ಅಸಮಾನ ತಂತ್ರಜ್ಞಾನ ಸಹಯೋಗಕ್ಕೆ ಮಾತ್ರವೇ ಒತ್ತು ನೀಡುತ್ತಾ ಮತ್ತು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೆ ಅವಶ್ಯವಾಗಿ ವಿಧಿಸಬೇಕಾದ ಕಠಿಣ ಕಡಿತಗಳ ಗುರಿಗಳಿಗೆ ಪೂರ್ತಿ ಎಳ್ಳುನೀರು ಬಿಡದಿದ್ದರೂ ಅದನ್ನು ಮುಂದೂಡುವ ಮೂಲಕ ಅಮೇರಿಕಾದ ಪ್ರಯತ್ನಗಳಿಗೆ ಬೆಂಬಲ ನೀಡುತ್ತಾ ಕೋಪನ್‌ಹೇಗನ್ ನಿರ್ಣಯಗಳಿಗೆ ನೀರೆರೆಯು… ಸ್ಪಷ್ಟ ಸೂಚನೆಗಳನ್ನು ಭಾರತ ನೀಡುತ್ತಿದ… ಮಾತುಕತೆಯ ನಿಲುಮೆಗಳನ್ನು ಕುರಿತಂತೆ ಸರ್ಕಾರ… ವಿಭಾಗಗಳೊಳಗೆ ಇರುವ ಇತ್ತೀಚಿ… ಭಿನ್ನಾಭಿಪ್ರಾಯಗಳ ಹೊರತಾಗಿಯೂ ಪರಿಸ… ಮತ್ತು ಅರಣ್ಯ ಸಚಿವರು ಅಮೇರಿಕಾ-ಪ… ಧೋರಣೆಯನ್ನು ಪ್ರತಿಪಾದಿಸುತ್ತಿದ್ದು, ಒಟ್ಟಾರೆ ನ… ಭಾರತ-ಅಮೇರಿಕಾ (ಮಿಲಿಟರಿ) ವ್ಯೂಹಾತ್… ಪಾಲುದಾರಿಕೆಯ ಅಂಗವಾಗಿ ಭಾರತ… ಅಮೇರಿಕಾದೊಂದಿಗೆ ಸಹಯೋಗ ಸಾಧಿಸುವ… ಸಾಗಿದೆ. ಮನುಕುಲದ ವಿಶೇಷವಾಗಿ ಬಡಜನತೆ… ಹಿತದೃಷ್ಟಿಯಿಂದ ಮತ್ತು ಬಂಡವಾಳಶಾ… ಜಾಗತೀಕರಣ ವಿರುದ್ಧದ ಹೋರಾಟದ ಭಾಗವಾ… ಇಂತಹ ನಡೆಗಳನ್ನು ಎಲ್ಲ ಪ್ರಗತಿಪರ ವಿಭಾಗಗ… ವಿರೋಧಿಸಬೇಕು.

ರಾಷ್ಟ್ರೀಯ ಕ್ರಿಯಾಯೋಜನೆ


ಭಾರತವು ಹವಾಮಾನ ಬದಲಾವಣೆ ಕುರಿತ… ರಾಷ್ಟ್ರೀಯ ಕ್ರಿಯಾ ಯೋಜನೆ ಅಳವಡಿಸಿಕೊಂಡಿ… ಮತ್ತು ಇಂಧನ ಸಂರಕ್ಷಣೆಗಾಗಿ ಹಾಗೂ ವಾಯ… ಮಾಲಿನ್ಯ ಕಡಿತಗೊಳಿಸಲು ಸರಣಿಯೋಪಾದಿ… ಕ್ರಮಗಳನ್ನು ಇತ್ತೀಚೆಗೆ ಘೋಷಿಸಿದ… ವಾಯುಮಾಲಿನ್ಯ ಕಡಿಮೆಗೊಳಿಸ… ಭಾರತವೊಂದರ ಏಕಪಕ್ಷೀಯ ಕ್ರಮಗ… ಮಾತ್ರವಷ್ಟೆ ಭಾರತದ ಮೇಲಿನ ದುಷ್ಪರಿಣಾಮ… ಕಡಿಮೆಗೊಳಿಸುವುದಿಲ್ಲ, ಏಕೆಂದರೆ ಹವಾಮಾ… ಬದಲಾವಣೆ ರಾಷ್ಟ್ರೀಯ ಪ್ರಕ್ರಿಯೆಯಾಗಿರ… ಜಾಗತಿಕ ಪ್ರಕ್ರಿಯೆಯಾಗಿದೆ. ಮತ್ತೊಂದೆಡ… ಭಾರತವು ವಾಯುಮಾಲಿನ್ಯಕಾರಕಗಳ ಬೆಳವಣ… ದರ ಕಡಿತಗೊಳಿಸಲು ಏಕಪಕ್ಷೀಯ ಕ್ರಮಕೈಗೊಳ್ಳ… ಕೊಡುಕೊಳ್ಳುವಿಕೆಯ ಆಧಾರದ ಮೇಲ… ಕ್ರಮಕೈಗೊಳ್ಳಬೇಕು. ಅಂದರೆ, ಅಮೇರಿಕಾ ಮ… ಇತರೆ ಅಭಿವೃದ್ಧಿ ಹೊಂದಿರುವ ದೇಶಗಳು ಐಪಿಸಿ… ಶಿಫಾರಸು ಮಾಡಿರುವ ಗುರಿಯನ್ನ… ಹೊರಸೂಸುವಿಕೆಯ ತೀವ್ರತರ ಕಡಿತವ… ಅನುಸರಿಸುವ ಷರತ್ತಿನ ಮೇರೆಗೆ ಭಾರ… ಕ್ರಮಕೈಗೊಳ್ಳಬೇಕು. ಇದು ಮನುಕುಲ… ಎದುರಿಸುತ್ತಿರುವ ಗಂಭೀರ ಬಿಕ್ಕಟ್ಟಿಗೆ ಸೂಕ್ತ ಉತ್ತ… ಮಾತ್ರವೇ ಅಲ್ಲ, ಹವಾಮಾನ ಚೌಕಾಸಿ…

ಪುಟ 1…

ರೆಡ್ಡಿ - ಯಡ್ಡಿ ಜಗಳದಲ್ಲಿ ರಾಜ್ಯದ ಹಿತ ಬಲಿ



ಬಿಜೆಪಿಯೊಳಗಿನ ಕಿತ್ತಾಟ ದೆಹಲಿಯ ನಾಯಕರ ಅಂಗಳವನ್ನು ತಲುಪಿದೆ. ಸಮಸ್ಯೆಯೆಲ್ಲಾ ಇತ್ಯರ್ಥವಾಗಿದೆ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದೇನೆ. ಇರುವ ಇತರೆ ಸಮಸ್ಯೆಗಳನ್ನು ಕಾಲಾನುಕ್ರಮದಲ್ಲಿ ಬಗೆಹರಿಸಿಕೊಳ್ಳಲಾಗುವುದು ಎಂದು ಸ್ವತ: ಯಡಿಯೂರಪ್ಪ ಗುರುವಾರ ಹೇಳಿಕೊಂಡಿದ್ದಾರೆ. ಒಡನೆಯು ಅದರ 'ಕರ್ನಾಟಕ' ಜನರ ಹಿತಗಳಿಗಾಗಿ ನಾಯಕತ್ವದ ಬದಲಾವಣೆ ಅತ್ಯಗತ್ಯ ಅನಿವಾರ್ಯ ಎಂದು ಬಂಡಾಯ ಬಣದ ಜನಾರ್ಧನ ರೆಡ್ಡಿ 41 ಶಾಸಕರ ರಾಜೀನಾಮೆ ಪತ್ರಗಳನ್ನು ರಾಜನಾಥ್‌ಸಿಂಗ್ ಕೈಗಿಡುವ ಮೂಲಕ ಯಡಿಯೂರಪ್ಪ ಊದಿದ ಬಲೂನು ಒಡೆದುಹೋಗಿದೆ. ಏನೇ ಇತ್ಯರ್ಥಕ್ಕೆ ಬಂದರೂ ಕದನ ನಿಲ್ಲಲಾರದು. ಅಂತಹ ಯಾವುದೇ ಇತ್ಯರ್ಥಗಳು ಖಂಡಿತ ರಾಜ್ಯದ, ದೇಶದ ಜನತೆಯ ಹಿತಾಸಕ್ತಿಗಳನ್ನು ಕಾಯಲಾರವು. ಯಾಕೆಂದರೆ ಈಗ ನಡೆಸಲಾಗುತ್ತಿರುವ 'ರಾಜೀಸೂತ್ರ'ದ ಕಸರತ್ತುಗಳು ರಾಜ್ಯದ ಸಂಪತ್ತು ಹಣವನ್ನು ಮನಸೋ ಇಚ್ಛೆ ಲೂಟಿ ಹೊಡೆಯುವ ದುರಾಸೆಯ ದಿಕ್ಕಿನಲ್ಲಿದೆ. ಇಡೀ ಕರ್ನಾಟಕ ಸರ್ಕಾರವೇ ತಮ್ಮ ಕೈಗೆ ಸಿಗಬೇಕು. ಕರ್ನಾಟಕವು ರೆಡ್ಡಿಗಳ ಬಳ್ಳಾರಿಯಂತೆ ಆಗಬೇಕು ಎಂಬುದು ಗಣಿಗಳ್ಳರ ಹಂಚಿಕೆ. ಅಧಿಕಾರ ಉಳಿಸಿಕೊಳ್ಳಲು ಯಾವುದೇ ಮಟ್ಟಕ್ಕೂ ಇಳಿಯಲು ಸಿದ್ಧವೆಂಬ ಹಿಂದಿನ ಸೂತ್ರದ ಮುಂದುವರಿಕೆಯೇ ಆಗಿದೆ.



ನಿಯಂತ್ರಣವೆಲ್ಲಿ?

ಸ್ವಾರ್ಥಕ್ಕಾಗಿ ನಡೆಯುವ ಈ ಕಿತ್ತಾಟವನ್ನು ಅಥವಾ ಬಂಡಾಯವನ್ನು ದೃಢವಾಗಿ ನಿಭಾಯಿಸುವ ಶಾತಿಯೂ ಬಿಜೆಪಿಯ ರಾಷ್ಟ್ರ ಹೈಕಮಾಂಡ್‌ಗೂ ಇಲ್ಲದಾಗಿದೆ. ಅದೇ ಕಿತ್ತಾಟದಲ್ಲಿ ಮುಳುಗಿದೆ. ಇತರೆಡೆ ವಿಸ್ತರಿಸುತ್ತಿದೆ. ಕರ್ನಾಟಕದಲ್ಲಿ ಸ್ಫೋಟಕ ಸನ್ನಿವೇಶ ಇರುವಾಗಲೇ ಬಿಹಾರದಲ್ಲಿಯೂ ಭಿನ್ನಮತ ಬಂಡಾಯ ಎದ್ದಿದೆ. 'ಶಿಸ್ತುಬದ್ಧ, ತತ್ವಬದ್ಧ'ವೆಂಬ ಈ ಪಕ್ಷ ತಲುಪಿರುವ ಅಧೋಗತಿಯಿದು. ಜನ ನೆರೆಹಾವಳಿಯಿಂದ ತತ್ತರದಲ್ಲಿದ್ದರೂ ತಿರುಗಿ ನೋಡದ, ಆಡಳಿತವೇ ಇಲ್ಲವೆಂಬಂತಾಗಿರುವ ಸ್ಥಿತಿಯಲ್ಲಿ ರಾಜ್ಯದ ಶಾಸಕರು ಸಚಿವರನ್ನು ರೆಸಾರ್ಟ್‌ಗಳಲ್ಲಿ ಮೋಜು ಮಾಡಲು ಬಿಡುತ್ತಿದ್ದರೆ? ಅವರ ಮೇಲೆ ನಿಯಂತ್ರಣವಿದ್ದರೆ ಜನರ ನಡುವೆ ಹೋಗಿ ಎಂದು ಹೇಳಬಾರದಿತ್ತೆ?

ಸ್ವಾರ್ಥಸಾಧನೆ

ಉಭಯ ಬಣಗಳೂ ಅವರವರ ಅಹವಾಲು, ಅಭಿಪ್ರಾಯಗಳನ್ನು ಹೈಕಮಾಂಡ್‌ನ ಎಲ್ಲಾ ನಾಯಕರ ಮನೆ ತಿರುಗಿ ಹೇಳಿಕೊಂಡಿದ್ದರೂ 'ರಾಜ್ಯಕ್ಕೆ ಒಳ್ಳೆಯದನ್ನು ಮಾಡುವುದೇ ಉದ್ದೇಶವೆಂದು ಸಾರಿದ್ದರೂ ಸಿ.ಎಂ. ಬದಲಾವಣೆ ಎಂಬುದು ಬಿಟ್ಟು ರೆಡ್ಡಿ ಬಣದ ನಿಜ ಬೇಡಿಕೆಗಳೇನು ಎಂಬುದು ನಿರ್ದಿಷ್ಟವಾಗಿ ಹೊರಗೆ ಬಂದಿಲ್ಲ. ಜನರಿಗೆ ಅವರು ನಿಷ್ಟವಾಗಿದ್ದರೆ ಅವೆಲ್ಲ ತಿಳಿಯಬೇಕಿತ್ತು. ಮುಖ್ಯಮಂತ್ರಿ ಬದಲಾವಣೆಯೇ ಸರ್ವಕ್ಕೂ ಔಷಧಿ ಎಂದು ರೆಡ್ಡಿ ಬಣ ಹೇಳುತ್ತದೆ. ಆದರೆ ಈ ಕಿತ್ತಾಟಕ್ಕೆ ಕಾರಣ ಅಕ್ರಮ ಗಣಿಗಾರಿಕೆ. ಅದೇ ಪ್ರಮುಖ ಅಂಶವಾಗಿದೆ. ಸಾವಿರಾರು ಕೋಟಿ ರೂಪಾಯಿಗಳ ನೆರೆಪರಿಹಾರ ನಿರ್ಮಾಣ ಕಾರ್ಯದ ಕಂಟ್ರಾಕ್ಟ್ ಹೊಡೆಯುವುದು ರೆಡ್ಡಿ ಸಹೋದರರ ಇನ್ನೊಂದು ಹಂಚಿಕೆ. ಗಣಿ ಸಾಗಣೆ ಲಾರಿಗೆ ಒಂದು ಸಾವಿರ ರೂಪಾಯಿಗಳು ಶುಲ್ಕ ಸಂಗ್ರಹ ಮತ್ತೊಂದು. ಇಡೀ ಬಳ್ಳಾರಿ ಹಾಗೂ ಉತ್ತರಕರ್ನಾಟಕದಲ್ಲಿ, ಅದೇ ರೀತಿ ಸರ್ಕಾರದಲ್ಲಿ ತಮ್ಮದೇ ಸಾರ್ವಭೌಮತ್ವವಿರಬೇಕೆಂಬುದು ಮಗದೊಂದು.

ರೆಡ್ಡಿಗಳ ಅಕ್ರಮ ಸಾಮ್ರಾಜ್ಯ ಬಯಲು, ಆದರೂ...

ಈ ನಡುವೆ ಹಲವು ಆತಂಕದ ಮಾಹಿತಿಗಳೇ ಹೊರಬಂದಿವೆ. ಆಂದ್ರ ಮತ್ತು ಕರ್ನಾಟಕದ ಗಡಿಗೆ ಹೊಂದಿರುವ ಅನಂತಪುರ ಜಿಲ್ಲೆಯಲ್ಲಿ ಜನಾರ್ದನರೆಡ್ಡಿಯವರ ಓಬಳಾಪುರಂ ಮೈನಿಂಗ್ ಕಂಪನಿಯು ಎಲ್ಲಾ ಕಾನೂನು ನಿಯಮಗಳನ್ನು ಗಾಳಿಗೆ ತೂರಿ ಅಕ್ರಮ ಗಣಿಗಾರಿಕೆ ನಡೆಸುತ್ತಾ ಬಂದಿದೆ. ತಮ್ಮ ಪ್ರದೇಶದ ಆಚೆ ಇನ್ನೊಬ್ಬರ ಅರಣ್ಯ ಪ್ರದೇಶದಲ್ಲಿ ಒತ್ತುವರಿ ಮಾಡಲಾಗಿದೆ. ಮಾತ್ರವಲ್ಲ, ಕರ್ನಾಟಕದ ಬಳ್ಳಾರಿ ಜಿಲ್ಲೆಯಿಂದ ಯಥೇಚ್ಛವಾಗಿ ಲಕ್ಷಾಂತರ ಟನ್ ಅದಿರನ್ನು ಆಂದ್ರದ ಗಡಿಯೊಳಗೆ ಸಾಗಿಸಿ ಅಲ್ಲಿಂದ ಮೈನಿಂಗ್ ಸಾಗಣೆ ಮಾಡಲಾಗುತ್ತಿತ್ತು. ಜನಾರ್ಧನರೆಡ್ಡಿ ಬಿಸಿನೆಸ್ ಪಾರ್ಟನರ್ ಆಗಿರುವ ಹಿಂದಿನ ಕಾಂಗ್ರೆಸ್‌ನ ಸಿ.ಎಂ.ದಿ: ವೈ.ಎಸ್.ರಾಜಶೇಖರ ರೆಡ್ಡಿಯವರ ಪೂರ್ಣ ಬೆಂಬಲ ಎಲ್ಲಾ ಕಾನೂನುಗಳನ್ನು ತಿರುಚಿ ಅಂತಹಗಳಿಗೆ ಪೂರ್ಣ ಅಕ್ರಮ ಅವಕಾಶ ಕಲ್ಪಿಸಿತ್ತು ಎಂಬುದು. ಇದು ಈಗ ತನಿಖೆಯಿಂದ ಹೊರಬಂದಿದೆ. ರಾಜಶೇಖರ ರೆಡ್ಡಿಯ ಅಕಾಲಿಕ ನಿಧನದ ಬಳಿಕೆ ಆಂಧ್ರದಲ್ಲಿ ರೋಸಯ್ಯ ಸಿ.ಎಂ. ಆಗುವ ಮೂಲಕ ರಾಜಕೀಯ ಕ್ಷೇತ್ರದಲ್ಲಿ ಕೆಲವು ಬದಲಾವಣೆ ಆಗಿದೆ. ಇವರು ಜನಾರ್ಧನ ಜಗನ್ ಈ ಇಬ್ಬರೂ ರೆಡ್ಡಿಗಳನ್ನು ಬೆಂಬಲಿಸುತ್ತಿಲ್ಲ. ರೋಸಯ್ಯ ಬದಲಿಗೆ ರಾಜಶೇಖರರೆಡ್ಡಿ ಅಕಾಲಿಕ ನಿಧನದ ಬಳಿಕ ಜಗನ್‌ನನ್ನು ಮುಖ್ಯಮಂತ್ರಿ ಮಾಡಬೇಕೆಂಬ ಒತ್ತಾಯವನ್ನು ಹೈಕಮಾಂಡ್ ಒಪ್ಪಿಲ್ಲ. ಜಗನ್ ಮತ್ತು ಜನಾರ್ಧನ ರೆಡ್ಡಿ ಗುಂಪಿನ ಕಾರ್ಪೊರೇಟ್ ಶೈಲಿ ರಾಜಕಾರಣ ಹಣದ ಮದವು ಹೈಕಮಾಂಡ್‌ನ್ನು ವಿಚಲಿತಗೊಳಿಸಿದೆಯಂತೆ. ಹೀಗಾಗಿ ಇದನ್ನು ನಿಯಂತ್ರಿಸಬ್ಬೇಕೆಂಬ ಒಂದು ಕಾರ್ಯಯೋಜನೆ ಇದೆಯಂತೆ. ವ್ಯಕ್ತಿಗತ ಹಿತಗಳೇ ಪ್ರಧಾನ, ಇತ್ತ ಜನಾರ್ಧನ ರೆಡ್ಡಿಯವರ ಎಲ್ಲಾ ನೀಚ ತಂತ್ರಗಳನ್ನು ಒಪ್ಪಿ ಪ್ರೋತ್ಸಾಹಿಸಿ ಬೆಳೆಸಿದ ಬಿಜೆಪಿಯೊಳಗೆ ಹಾಗೂ ಸರ್ಕಾರದಲ್ಲಿ ಹೆಚ್ಚಿನ ಬಲ, ಅನುಕೂಲ ಪಡೆಯಲು ರೆಡ್ಡಿ ಗುಂಪು ಹಾತೊರೆಯುತ್ತಿದೆ. ರೆಡ್ಡಿಯ ಅಕ್ರಮ ಗಣಿಗಾರಿಕೆ ಬಗ್ಗೆ ಕೆಲವರು ವ್ಯಾಜ್ಯ ಹೂಡಿದ್ದು, ಅವುಗಳ ವಿಚಾರಣೆಗೆ ಕೇಂದ್ರ ಸರ್ಕಾರಕ್ಕೆ ಸುಪ್ರಿಂಕೋರ್ಟ್ ಆದೇಶಿಸಿದೆ. ಹೀಗಾಗಿ ಆಂದ್ರದ ಆಡಳಿತವೂ ಅಕ್ರಮಗಳ ತನಿಖೆಗೆ ನೋಟೀಸು ನೀಡಿದೆ. ಈಗ ಸೃಷ್ಟಿಸಲಾಗಿರುವ ಬಿಕ್ಕಟ್ಟಿನಲ್ಲಿ ಈ ಅಂಶವೂ ಇದೆಯೆಂಬುದು ಒಂದು ವಿಶ್ಲೇಷಣೆ. ನೆರೆ ಕಾಮಗಾರಿ ವಿಷಯದಿಂದ ಸ್ಫೋಟಗೊಂಡ ಈ ಬಿಕ್ಕಟ್ಟು, ಘರ್ಷಣೆಗಳು ಏಟಿಗೆ ಪ್ರತಿ ಏಟು ಎಂಬಂತೆ ಕಳೆದ ವಾರ ತೋರಿದ್ದು, ಈ ವಾರ ರಾಜೀಸೂತ್ರದ ಹುಡುಕಾಟದಲ್ಲಿ ಬಿಜೆಪಿ ನಿರತವಾಗಿದೆ. ಆದರೆ ಅಲ್ಲಿರುವುದು ಯಾವುದೇ ನಿರ್ಧಾರ ಕೈಗೊಳ್ಳಲಾಗದ ಗೊಂದಲ.

ಒಂದು ಹಂತದಲ್ಲಿ ಆಂಧ್ರದ ಸರ್ಕಾರ ಓಬಳಾಪುರಂ ಮೈನಿಂಗ್ ಕಂಪನಿಯ ಮೇಲೆ ಕ್ರಮ ಜರುಗಿಸಲು ಮುಂದಾಗಿದ್ದರೆ, ಇತ್ತ ರೆಡ್ಡಿಯ ಹುಕುಂಗಳನ್ನೆಲ್ಲಾ ಜಾರಿ ಮಾಡುತ್ತಿದ್ದ ಬಳ್ಳಾರಿ ಜಿಲ್ಲೆಯ ಅಧಿಕಾರಿಗಳನ್ನು ಎತ್ತಂಗಡಿ ಮಾಡಿ 'ಶೌರ್ಯ' ತೋರಿಸಿದ ಯಡಿಯೂರಪ್ಪ ಅಕ್ರಮಗಳು ಕಣ್ಣೆದುರಿದ್ದರೂ ಏನೊಂದೂ ಮಾಡದೇ ಈಗ ಮೆತ್ತಗಾಗಿದ್ದಾರೆ. ರೆಡ್ಡಿಗಳ ಅಕ್ರಮಗಳ ಬಗ್ಗೆ ಗುಟುರು ಹಾಕುವ ಅಥವಾ ಅಧಿಕಾರಿಗಳಿಂದ ಅದನ್ನು ತಡೆಯುವುದಾಗಿ ಹೇಳಿದ ಯಡಿಯೂರಪ್ಪನವರು ಎಲ್ಲಾ ಗೊತ್ತಿದ್ದೂ ಈ ಹಿಂದೆ ಯಾಕೆ ಕ್ರಮ ವಹಿಸಲಿಲ್ಲ? ಅಂದರೆ ಗಣಿಗಳ್ಳರಿಗೆ ಪೂರ್ಣ ಶರಣಾದದ್ದನ್ನು ಈಗ ಬಹಿರಂಗವಾಗಿ ಒಪ್ಪಿಕೊಂಡಂತಾಗಿದೆ. ರಾಜೀಸೂತ್ರದಲ್ಲಿ ಸಚಿವೆ ಶೋಬಾ ಕರಂದ್ಲಾಜೆ, ಸಿ.ಎಂ. ಪ್ರಧಾನ ಕಾರ್ಯದರ್ಶಿ ಬಳಿಗಾರ್‌ರನ್ನು ಎತ್ತಂಗಡಿ ಮಾಡಲು ಸಿದ್ಧರಿರುವುದಾಗಿ ಇಂಗಿತ ನೀಡಿರುವ ಯಡಿಯೂರಪ್ಪ ಬಳ್ಳಾರಿ ರೆಡ್ಡಿಯ ಗಣಿಗಳಿಗೆ ಅಕ್ರಮಗಳಿಗೆ ಹಸಿರುನಿಶಾನೆ ತೋರಿಸಿ ಕುರ್ಚಿ ಉಳಿಸಿಕೊಳ್ಳುವ ಸೂಚನೆಯನ್ನು ನೀಡುತ್ತಿದ್ದಾರೆ.

ಚೆಡ್ಡಿ ಲೆಕ್ಕಾಚಾರ

ಯಡಿಯೂರಪ್ಪನವರ ಹಿಂದೆ ಆರ್.ಎಸ್.ಎಸ್. ಇದೆಯೆಂಬುದು ಒಂದು ಸುದ್ದಿ. ಅಂದರೆ ಜನಾರ್ದನ ರೆಡ್ಡಿ ಗುಂಪು ಪ್ರಬಲವಾಗುತ್ತ ಹೋದರೆ ಅಧಿಕಾರ ಅವರ ಕೈಗೆ ಹೋದೀತು ಎಂಬ ಭಯವೂ ಅಲ್ಲಿದೆಯಂತೆ. ಎಲ್ಲದಕ್ಕೂ ಆಶೀರ್ವದಿಸಿದವರು ಇವರೇ. ಹೀಗಾಗಿ ರೆಡ್ಡಿ ಹೋದರೆ 'ಜಾತ್ಯಾತೀತ' ಪಕ್ಷವೊಂದರ ಬೆಂಬಲ ಪಡೆದು ಅಧಿಕಾರ ಉಳಿಸಿಕೊಳ್ಳಬಹುದೇ, ಅಥವಾ ನೆರೆ-ರೆಡ್ಡಿ ಅನುಕಂಪ ಹಿಡಿದು ಚುನಾವಣೆಗೆ ಹೋಗಬಹುದೇ? ಅಥವಾ ರಾಜಿಸಂಧಾನಕ್ಕೆ ಬರಬಹುದೇ? ಹೀಗೆಲ್ಲಾ ಲೆಕ್ಕಾಚಾರ ಓಡುತ್ತಿದೆಯಂತೆ. ಕರ್ನಾಟಕವನ್ನು 'ಗುಜರಾತ್'ನ್ನಾಗಿಸಲು ತೊಡಗಿರುವ ಸಂಘ ಪರಿವಾರವು ತನ್ನ ಅಜೆಂಡಾ ಜಾರಿಗೊಳಿಸಲು 'ಚೆಡ್ಡಿ' ನಾಯಕತ್ವದ ಸುತ್ತ ಬಲ ಕ್ರೋಢೀಕರಿಸಲು ಬಯಸುತ್ತಿರುವುದು ಆರ್‌ಎಸ್‌ಎಸ್ಸೇತರರ ಬಗ್ಗೆ ಎಚ್ಚರವಿರಬೇಕೆಂಬುದು ಈ ಹಿನ್ನೆಲೆಯಲ್ಲಿಯೇ. ಆರ್.ಎಸ್‌ಎಸ್ ತನ್ನ ನೆಲೆಯನ್ನು ಉತ್ತರ ಕರ್ನಾಟಕದ ಲಿಂಗಾಯತರ ನಡುವೆ ಇನ್ನೂ ಗಟ್ಟಿಗೊಳಿಸಿ ವಿಸ್ತರಿಸಿಕೊಳ್ಳಲು ಯಡಿಯೂರಪ್ಪನವರನ್ನು ನೆಚ್ಚಿಕೊಂಡಿದೆ ಎಂಬುದು ಮತ್ತೊಂದು ಸುದ್ದಿ.

ಪುಟ 4ಕ್ಕೆ



ಕೃಪೆ: ಪ್ರಜಾವಾಣಿ

ತಮಿಳುನಾಡು : ಶಿವನ ದೇಗುಲಕ್ಕೆ ದಲಿತರ ಪ್ರವೇಶ

ತಮಿಳುನಾಡು ಚಿಟ್ಟಿಪುಲಂನ ದಲಿತರು ಕಳೆದ ಅಕ್ಟೋಬರ್ 27ರಂದು ಬಿಗಿ ಪೊಲೀಸ್ ಬಂದೋಬಸ್ತ್ ನಡುವೆ ಏಕಾಂಬರೇಶ್ವರ ದೇವಾಲಯ ಪ್ರವೇಶಿಸಿ ಪೂಜೆ ಸಲ್ಲಿಸಿದರು. ಇದು ಒಮ್ಮೆಗೆ ಸವರ್ಣೀಯರು ಒಪ್ಪಿಕೊಂಡು ಅನುವು ಮಾಡಿಕೊಟ್ಟಿದ್ದರಿಂದಾಗಿ ಪ್ರವೇಶ ಸಾಧ್ಯವಾಗಿದ್ದಲ್ಲ. ಆದರೆ ಒಂದು ತಿಂಗಳಿಂದ ಸತತವಾಗಿ ಹೋರಾಟ ನಡೆಸಿದ್ದರಿಂದಾಗಿ ಅಂತಿಮವಾಗಿ ದಲಿತರು ದೇವಾಲಯ ಪ್ರವೇಶ ಮಾಡುವಲ್ಲಿ ಯಶಸ್ವಿಯಾದರು. ಚಿಟ್ಟಿಪುಲಂ ನಾಗಪಟ್ಟಣಂ ಜಿಲ್ಲೆಯ ವೇದರಣ್ಯಂ ತಾಲೂಕಿನಲ್ಲಿನ ಸಣ್ಣ ಗ್ರಾಮ. ತಮಿಳುನಾಡು ಅಸ್ಪೃಶ್ಯ ನಿರ್ಮೂಲನೆ ರಂಗ (ಟಿಎನ್‌ಯುಇಎಫ್) ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಒಂದು ತಿಂಗಳು ಸತತ ಚಳವಳಿ ನಡೆಸಲಾಯಿತು.

ಒಂದು ತಿಂಗಳ ಹಿಂದೆ ಅಂದರೆ ಸೆಪ್ಟೆಂಬರ್ 30ರಂದು ಟಿಎನ್‌ಯುಇಎಫ್ ರಾಜ್ಯ ಸಂಚಾಲಕ ಪಿ. ಸಂಪತ್ ಮತ್ತು ಸಿಪಿಎಂ ಪಕ್ಷದ ಶಾಸಕರಾದ ವಿ. ಮಾರಿಮುತ್ತು ನೇತೃತ್ವದಲ್ಲಿ ನೂರಾರು ದಲಿತರು ದೇವಾಲಯ ಪ್ರವೇಶಕ್ಕೆ ಮುಂದಾದರು. ಆದರೆ ಪೊಲೀಸರು ಒಂದು ಕಿಲೋ ಮೀಟರ್ ಇರುವಂತೆಯೇ ತಡೆದರು. ಪ್ರತಿಭಟನಾಕಾರರು ಆಗ ಪೊಲೀಸ್ ಬ್ಯಾರಿಕೇಡ್‌ಗಳನ್ನು ಮೆಟ್ಟಿ ಮುನ್ನಡೆದಿದ್ದರು. ಆದರೆ ದೇವಾಲಯದ ಮುಖ್ಯ ದ್ವಾರಕ್ಕೆ ಸಲ್ಪ ಮುಂದೆ ಪೊಲೀಸರು ಪ್ರತಿಭಟನಕಾರರನ್ನು ತಡೆದರು. ಇದಕ್ಕಿಂತಲೂ ಹೆಚ್ಚಾಗಿ ಹಿಂದೂ ಮೇಲ್ಜಾತಿ ಜನ ದಲಿತರು ದೇವಾಲಯ ಪ್ರವೇಶಿಸದಂತೆ ಅನಕೃತವಾಗಿ ಬಾಗಿಲಿಗೆ ಬೀಗ ಹಾಕಿದ್ದರು. ಆದರೂ ಪೊಲೀಸರು ಬಾಗಿಲು ಮುರಿದು ಪೂಜೆ ಸಲ್ಲಿಸಲು ಅವಕಾಶ ನೀಡಬೇಕೆಂದು ದಲಿತರು ಒತ್ತಾಯಿಸಿದ್ದರು. ಆದರೆ ಹಾಗೆ ಮಾಡಲು ಪೊಲೀಸರು ನಿರಾಕರಿಸಿದ್ದರು. ಆಗ ಅಲ್ಲೇ ಇದ್ದ ವಿಭಾಗೀಯ ಕಂದಾಯ ಅಧಿಕಾರಿ ಕೂಡಲೆ ಬೀಗವನ್ನು ಸೀಲ್ ಮಾಡಿ ಯಾವುದೇ ಜನಾಂಗವೂ ದೇವಾಲಯ ಪ್ರವೇಶಿಸುವುದಕ್ಕೆ ತಡೆಯೊಡ್ಡಿದರು. ನಂತರ ಶಾಂತಿ ಮಾತುಕತೆ ನಡೆಸಿದ ನಂತರ ಆದಷ್ಟು ಬೇಗನೆ ದಲಿತರ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದ್ದರು. ಹಾಗಿದ್ದರೂ ಆ ಸಂದರ್ಭದಲ್ಲಿ ಎಲ್ಲ ಪ್ರತಿಭಟನಾಕಾರರನ್ನು ಬಂಧಿಸಲಾಗಿತ್ತು.

ಮರು ದಿನವೇ ಗ್ರಾಮ ಪಂಚಾಯತಿ ಅಧ್ಯಕ್ಷರ ನಾಯಕತ್ವದಲ್ಲಿ ಸವರ್ಣೀಯರು ಬೀಗವನ್ನು ಮುರಿದು ದೇವಾಲಯ ಪ್ರವೇಶಿಸಿದರು. ಏನೇ ಆದರೂ ದಲಿತರು ಈ ದೇವಾಲಯ ಪ್ರವೇಶಿಸಲು ಅವಕಾಶ ನೀಡುವುದಿಲ್ಲ ಎಂದೂ ಅದೇ ದಿನ ಘೋಷಿಸಿದರು. ಟಿಎನ್‌ಯುಇಎಫ್ ಮತ್ತು ಸಿಪಿಎಂ ಮುಖಂಡರು ಜಿಲ್ಲಾಧಿಕಾರಿ ಮತ್ತು ಇತರ ಸರ್ಕಾರಿ ಅಧಿಕಾರಿಗಳನ್ನು ಭೇಟಿ ಮಾಡಿ ಈ ವಿವಾದದಲ್ಲಿ ಮಧ್ಯ ಪ್ರವೇಶಿಸಲು ಮನವಿ ಮಾಡಿದರು. ಇಲ್ಲದಿದ್ದಲ್ಲಿ ಮತ್ತೆ ಪ್ರತಿಭಟನೆ ಮೂಲಕ ದೇವಾಲಯ ಪ್ರವೇಶಿಸಲಾಗುವುದು ಎಂದು ಎಚ್ಚರಿಸಿದರು.



ಇದರಿಂದಾಗಿ ಜಿಲ್ಲಾ ಆಡಳಿತ ಮಧ್ಯ ಪ್ರವೇಶಿಸಿ ದಲಿತರ ಗುಂಪನ್ನು ಪೊಲೀಸ್ ವ್ಯಾನಿನಲ್ಲಿ ಕೂರಿಸಿಕೊಂಡು ಅಕ್ಟೋಬರ್ 14ರಂದು ದೇವಾಲಯ ಪ್ರವೇಶಿಸಿಸಲು ಮುಂದಾದರು. ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿದ ಸವರ್ಣೀಯರು ಮತ್ತು ಅವರ ಗೂಂಡಾಗಳು ದೇವಾಲಯ ಪ್ರವೇಶಕ್ಕೆ ತಡೆಯೊಡ್ಡಿದರು. ಪೊಲೀಸರು ಮತ್ತು ಅವರ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದ ಕಬ್ಬಿಣದ ಸರಳುಗಳಿಂದ ನಡೆಸಿದ ದಾಳಿಗೆ ಹಲವಾ ಪೊಲೀಸರು ಗಾಯಗೊಂಡರು. ಜಿಲ್ಲಾ ಕಂದಾ ಅಧಿಕಾರಿಯ ವಾಹನ ಹೆಚ್ಚಿನ ಪ್ರಮಾಣದ ಹಾನಿಗೊಳಗಾಯಿತು. ಪರಿಸ್ಥಿತಿ ಇನ್ನಷ್ಟು ವಿಕೋಪ ತೆರಳುವುದನ್ನು ನಿಯಂತ್ರಿಸಲು ಪೊಲೀಸರು ಲಾ ಚಾರ್ಜ್ ಮಾಡಲು ಮುಂದಾದರು. ಸವರ್ಣೀಯ ಗುಂಪನ್ನು ಚದುರಿಸಲು ಅಶ್ರುವಾಯು ಶೆ ಸಿಡಿಸಲಾಯಿತು. ಪೊಲೀಸ್ ವ್ಯಾನ್‌ಗಳಲ್ಲಿ ದಲಿತರು ದೇವಾಲಯ ಪ್ರವೇಶಿಸ ಹಿಂತಿರುಗುವಂತಾಯಿತು. ಪೊಲೀಸರು ಮಂದಿಯನ್ನು ಬಂಧಿಸಿ 250 ಮಂದಿ ವಿರು ಮೊಕದ್ದಮೆಗಳನ್ನು ದಾಖಲಿಸಿದರು. ಇದಿ ಪ್ರದೇಶದಲ್ಲಿ ಪ್ರಕ್ಷುಬ್ಧ ವಾತಾವರಣ ನೆಲೆಸಿತು.

ಈ ಘಟನೆಯನ್ನು ಟೀಕಿಸಿದ ಟಿಎನ್‌ಯುಇಎ ಮತ್ತು ಸಿಪಿಎಂ ಪಕ್ಷಗಳು ದಲಿತರ ಮೇಲೆ ಹ ನಡೆಸಿದ ಅಪರಾಧಿಗಳನ್ನು ಬಂಧಿಸಲು ಆಗ್ರಹಿಸಿದರು ಪಿಸಿಆರ್ ಕಾಯ್ದೆ ಅಡಿಯಲ್ಲಿ ಮೊಕದ್ದ ದಾಖಲಿಸಬೇಕೆಂದು ಒತ್ತಾಯಿಸಿದರು. ಇಷ ಮಾತ್ರವಲ್ಲದೆ ದಲಿತರು ದೇವಾಲಯ ಪ್ರವೇಶ ಅಗತ್ಯವಾದ ವ್ಯವಸ್ಥೆ ಮತ್ತು ಕ್ರಮಗಳನ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಈ ಘಟನೆಯ ವಿರೋಧಿಸಿ ವೇದರಣ್ಯಂನಲ್ಲಿ ಅಕ್ಟೋಬರ್ 20ರಂ ಪ್ರತಿಭಟನೆ ನಡೆಸಲಾಯಿತು.

ನಂತರ ಚಿಟ್ಟಿಪಾಳ್ಯಂ ದಲಿತರಿಗೆ ದೇವಾ ಪ್ರವೇಶಿಸಲು ಅನುಮತಿ ನೀಡಿರುವುದಾ ಜಿಲ್ಲಾಡಳಿತ ಘೋಷಿಸಿತು. ಈ ಪ್ರಕಟಣೆ ದಲಿತರ ವಿಶ್ವಾಸ ಮೂಡಿಸಿತು. ಹೋರಾಟದ ಜಯಗಳಿಸಿರುವ ಸಂತೋಷವನ್ನು ಉಂಟು ಮಾಡಿತು.

ಸಂಗಾತಿ ಪಿ. ಮೋಹನ್ ಅವರ ಅಕಾಲಿಕ ನಿಧನ

ಚೆನ್ನೈ ಆಸ್ಪತ್ರೆಯಲ್ಲಿ ನಿಧನರಾದ ಮಾಜಿ ಲೋಕಸಭಾಸದಸ್ಯರು ಹಾಗೂ ಸಿಪಿಐ(ಎಂ) ಪಕ್ಷದ ತಮಿಳುನಾಡು ರಾಜ್ಯ ಸಮಿತಿಯ ಸದಸ್ಯರಾದ ಸಂಗಾತಿ ಪಿ. ಮೋಹನ್ ರವರ ನಿಧನಕ್ಕೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಅವರಿಗೆ 60 ವರ್ಷ ವಯಸ್ಸಾಗಿತ್ತು.

1970 ರಲ್ಲಿ ಪಕ್ಷಕ್ಕೆ ಸೇರ್ಪಡೆಯಾಗುವ ಮೊದಲು ಇವರು ಎಸ್‌ಎಫ್‌ಐ ನ ಕ್ರಿಯಾಶೀಲ ಕಾರ್ಯಕರ್ತರಾಗಿದ್ದರು. ಆನಂತರ ಡಿ.ವೈ.ಎಫ್.ಐ. ನ ಮಧುರೈ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ, ಕೆಲಕಾಲ ಪಕ್ಷದ ಮಧುರೈ ನಗರ ಜಿಲ್ಲೆಯ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದಾರೆ. ಹಾಗೂ ಕಳೆದ 15 ವರ್ಷಗಳಿಂದ ಪಕ್ಷದ ತಮಿಳುನಾಡು ರಾಜ್ಯ ಸಮಿತಿಯ ಸದಸ್ಯರಾಗಿ ದುಡಿದಿದ್ದಾರೆ. ಸಂಗಾತಿ ಪಿ. ಮೋಹನ್‌ರವರು ಮಧುರೈನಲ್ಲಿ ಹಲವಾರು ದೊಡ್ಡ ಹೋರಾಟಗಳನ್ನು ಸಂಘಟಿಸಿದ್ದಾರೆ. ಆದರಲ್ಲಿ ಮಧುರೈ ಜಿಲ್ಲಾ ಆಸ್ಪತ್ರೆಯ ಮೂಲಭೂತ ಸೌಲಭ್ಯಕ್ಕಾಗಿ ನಡೆದ ಹೋರಾಟ ಅತ್ಯಂತ ಪ್ರಭಾವಯುತವಾಗಿತ್ತು, ಹಾಗೂ ಈ ಹೋರಾಟದಲ್ಲಿ ಪೋಲೀಸರ ಕ್ರೌರ್ಯದ ಹೊಡೆತದಿಂದಾಗಿ ಹಲವಾರು ದಿನಗಳು ಆಸ್ಪತ್ರೆಯಲ್ಲಿ ಉಳಿಯಬೇಕಾಯಿತು. ಇವರ ಅಪ್ರತಿಮ ಹೋರಾಟವನ್ನು ಗುರುತಿಸಿ ಜನರು ಸತತವಾಗಿ 1999 ಮತ್ತು 2004 ರಲ್ಲಿ ಮಧುರೈ ಕ್ಷೇತ್ರದಿಂದ ಲೋಕಸಭೆಗೆ ಆರಿಸಿ ಕಳುಹಿಸಿದರು. ಲೋಕಸಭಾ ಸದಸ್ಯರಾಗಿ ತಮಿಳುನಾಡಿನ ಜನರ ಸಮಸ್ಯೆಗಳನ್ನು ಲೋಕಸಭೆಯಲ್ಲಿ ಎತ್ತಿ ತೋರಿಸುವಲ್ಲಿ ಯಶಸ್ವಿಯಾಗಿದ್ದರು.

ಇವರ ಅವಿಶ್ರಾಂತ ದುಡಿಮೆ ಹಾಗೂ ಪಕ್ಷದೆಡೆಗಿನ ಬದ್ಧತೆ ಬಹಳ ಕಾಲ ನೆನಪಿನಲ್ಲುಳಿಯುವಂತಹದ್ದು, ಇವರ ಸರಳತೆ ಹಾಗೂ ಸಾಮಾನ್ಯರ ಬಗ್ಗೆ ಇದ್ದ ಕಾಳಜಿ ಜನರ ಪ್ರೀತಿ ಗಳಿಸಲು ಕಾರಣವಾಗಿತ್ತು ಇವರ ಅಕಾಲಿಕ ಮರಣ ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ.

ಅಕಾಲಿಕ ಮರಣಕ್ಕೀಡಾದ ಸಂಗಾತಿ ಪಿ. ಮೋಹನ್ ರವರ ಕುಟುಂಬವರ್ಗದವರಿಗೆ ಪಕ್ಷದ ಪಾಲಿಟ್ ಬ್ಯೂರೋ ತನ್ನ ಸಂತಾಪ ವ್ಯಕ್ತಪಡಿಸಿದೆ.



ರೆಡ್ಡಿ - ಯಡ್ಡಿ ಜಗಳ


ಪುಟ 3 ರಿಂದ

ಯಡಿಯೂರಪ್ಪನವರ ಕಡುವಿರೋ ಅನಂತಕುಮಾರ್ ಇದರಲ್ಲಿ ಸಮಯ ಸಾಧಿಸು ಆಟದಲ್ಲಿದ್ದಾರೆ.

ಜನ ಚಳುವಳಿ ಪರ್ಯಾಯ

ಒಂದೆಡೆ ಫ್ಯಾಸಿಸ್ಟ್ ಮಾದರಿಯ ಆರ್.ಎಸ್.ಎಸ್, ಇನ್ನೊಂದೆಡೆ ಯಾವುದಾದರೇನ ಲೂಟಿ ಹೊಡೆದು, ಸಂಪತ್ತು ತುಂಬಿಸಿಕೊಳ್ಳುವುದು ಅದಕ್ಕಾಗಿ ಎಲ್ಲವನ್ನೂ ಖರೀದಿಸುವ 'ಕಾರ್ಪೊರೇಟ್ ಶೈಲಿ'ಯ ರಾಜಕಾರಣ ಮಾಡುವ ಗಣಿಗಳ್ಳರು ಕೈಯಲ್ಲಿ ಕರ್ನಾಟಕ ವನ್ನೂ ಉಳಿ ಕೊಳ್ಳುವುದು ಒಂದು ಸವಾಲು. ಶಾಸನ ಸಭೆಯಲ್ಲಿ ಅಧಿಕೃತ ವಿರೋಧ ಪಕ್ಷಗಳು ಮಕಾಡೆ ಮಲಗಿರುವುದು ಅದರಲ್ಲಿ ಕಾಂಗ್ರೆಸ್ ತನ್ನ ಬೇಳೆ ಬೇಯಿಸಿಕೊಳ್ಳಲು ಸಮಯಕ್ಕಾಗಿ ಕಾಯುವುದು ರಾಜ್ಯದಲ್ಲಿ ಜನತೆಯ ನೆರೆ, ಬರ ಹಾವಳಿಯಿಂದಾದ ಹಾನಿ ವಿರುದ್ಧ ಪುನರ್ ನಿರ್ಮಾಣಕ್ಕಾಗಿ ಆಹಾರದ ಹಕ್ಕಿನಂತಹ ಪ್ರಶ್ನೆಗಳಾಧಾರದಲ್ಲಿ ಪ್ರಬಲ ಪ್ರಜಾಸತ್ತಾತ್ಮಕ ಚಳುವ ಸಾರುವುದು ಜನ ಪರ್ಯಾಯ ರಾಜಕಾರಣಕ್ಕಾ ಅನಿವಾರ್ಯವಾಗಿದೆ.


...ೇಂದ್ರ ಸರ್ಕಾರವು ಈಗ ...ಆಹಾರ ಭದ್ರತೆಯ ಬಗ್ಗೆ ...ತುಂಬಾ ...ಮಾತನಾಡುತ್ತಿದೆ. ...ಪಾರ್ಲಿಮೆಂಟಿನಲ್ಲಿ ...ಕರಡು ಮಸೂದೆಯನ್ನು ...ಮಂಡಿಸಿದೆ. ಆದರೆ ...ಮಸೂದೆಯಲ್ಲೇನಿದೆ?



ಆಹಾರ ಭದ್ರತೆ ಕಾನೂನು ಅಗತ್ಯ, ಆದರೆ ಕೇಂದ್ರ ಸರ್ಕಾರದ ಕರಡು ಆಹಾರ ಅಭದ್ರತೆ ಹೆಚ್ಚಿಸುತ್ತದೆ

"ಒಂದು ಸಕ್ರಿಯ, ಆರೋಗ್ಯವಂತ ಬದುಕಿಗೆ ಸಾಲುವಷ್ಟು ಆಹಾರ ಕುಟುಂಬದ ಎಲ್ಲಾ ಸದಸ್ಯರಿಗೆ, ಎಲ್ಲಾ ಸಮಯದಲ್ಲೂ ಸಿಗುವಂತಾಗುವುದು" ಎಂಬ ವಿಶ್ವಾದ್ಯಂತ ಸ್ವೀಕರಿಸಿರುವ ಆಹಾರ ಭದ್ರತೆಯ ನಿರೂಪಣೆಯನ್ನು ಈಡೇರಿಸುವಂತಹ ಒಂದು ಆಹಾರ ಭದ್ರತೆಯ ಶಾಸನದ ತುರ್ತು ಅಗತ್ಯ ಇದೆ, ಅದನ್ನು ವಿಳಂಬವಿಲ್ಲದೆ ತರಬೇಕು. ಆದರೆ ಕೆಂದ್ರ ಸರಕಾರ ಈಗ ಪ್ರಸ್ತಾವಿಸಿರುವಂತಹ ಶಾಸನ ಅಹಾರ ಭದ್ರತೆಯತ್ತ ಸಾಗುವುದಿಲ್ಲ, ಬದಲಿಗೆ ಆಹಾರ ಅಭದ್ರತೆಯತ್ತ ಸಾಗುತ್ತದೆ. ಏಕೆಂದರೆ

- ನಿಜವಾದ ಬಡವರು – ದಿನಕ್ಕೆ ಕೇವಲ ರೂ. 20 ರಲ್ಲಿ ಜೀವನ ಮಾಡುವವರು – ಮುಕ್ಕಾಲಕ್ಕೂ ಹೆಚ್ಚು (ಶೇ. 77), ಆದರೆ ಸರ್ಕಾರದ ಪ್ರಕಾರ 'ಬಡವರು' ಕೇವಲ ಶೆ. 30
- ಸರ್ಕಾರದ ಬಡತನ ರೇಖೆ ನಿರ್ಧರಿಸುವ ಅವೈಜ್ಞಾನಿಕ ವಿಧಾನದಿಂದ ರಾಜ್ಯ ಸರ್ಕಾರಗಳು ಬಿ.ಪಿ.ಎಲ್. (ಬಡವರು) ಎಂದು ನಿರ್ಧರಿಸಿರುವ ನಾಲ್ಕುವರೆ ಕೋಟಿಗಿಂತಲೂ ಹೆಚ್ಚು ಬಡ ಕುಟುಂಬಗಳ ಆಹಾರ ಹಕ್ಕಿಗೆ ಕಾನೂನು ಬದ್ಧ ವಂಚನೆ ಮಾಡುತ್ತದೆ
- ಕುಟುಂಬದ 35 ಕೆ.ಜಿ. ರೇಶನನ್ನು ಕಡಿತ ಮಾಡಿ 25 ಕೆ.ಜಿ.ಗೆ ಇಳಿಸುತ್ತದೆ
- ಅತೀ ಬಡವರಿಗೆ ಇರುವ ಅಂತ್ಯೋದಯ ಯೋಜನೆಗೆ ಖೋಕ್ ಕೊಟ್ಟು ಅವರ 'ರೇಶನ್ ತಿಂಗಳಿಗೆ ಕಡಿತ ಮಾಡಿ ಬೆಲೆಯನ್ನು ಕೆ,ಜಿ,ಗೆ ರೂ. 2 ರಿಂದ ರೂ. 3 ಕ್ಕೆ ಏರಿಸುತ್ತದೆ
- ಎ.ಪಿ.ಎಲ್. ಹೆಸರಲ್ಲಿ ದಿನಕ್ಕೆ ಗ್ರಾಮೀಣ ಪ್ರದೇಶದಲ್ಲಿ ಸುಮಾರು ರೂ. 12 ನಗರಗಳಲ್ಲಿ ರೂ. 18 ಸಂಪಾದಿಸುವ ಎಲ್ಲರನ್ನೂ 'ಬಡವರಲ್ಲ' ಅಂತ ನಿರ್ಧರಿಸಿ ಅವರ ಆಹಾರ ಹಕ್ಕನ್ನೂ ಮನ್ನಿಸುವುದಿಲ್ಲ
- ಆಹಾರ ಭದ್ರತೆಯ ಮೇಲೆ ಸರ್ಕಾರದ ವೆಚ್ಚವನ್ನು ರೂ. 4 ಸಾವಿರ ಕೋಟಿ ಕಡಿತ ಮಾಡುತ್ತದೆ
- 75 ಕೋಟಿಗೂ ಹೆಚ್ಚು ಬಡವರ ಆಹಾರ ಭದ್ರತೆಯ ಮೇಲೆ ಸರ್ಕಾರದ ವೆಚ್ಚ, ದೇಶದ ಒಟ್ಟು ಉತ್ಪಾದನೆಯ ನೂರು ರೂ.ಗೆ ಕೇವಲ ರೂ 1.20 – ಆದರೆ ಕೆಲವೇ ನೂರು ದೊಡ್ಡ ಕಂಪನಿಗಳಿಗೆ ಸರ್ಕಾರ ಕೊಡುವ ಸಬ್ಸಿಡಿ ರೂ. 9.50 – ಸುಮಾರು 8 ಪಟ್ಟು –ಪ್ರತಿ ದಿನ ರೂ. 700 ಕೋಟಿಯಷ್ಟು
- ಭಾರತಕ್ಕಿಂತ ಕಡಿಮೆ ಸಂಪನ್ಮೂಲ ಇರುವ 16 ದೇಶಗಳು ಅದರ ಇಮ್ಮಡಿಗಿಂತ ಹೆಚ್ಚು –ರೂ. 2.70 ವರೆಗೆ –ವೆಚ್ಚ ಮಾಡುತ್ತವೆ





'ಸರ್ಕಾರಿ ಆಸ್ಪತ್ರೆಯನು ಕೊಲ್ಲದಿರಿ' ಮಂಗಳೂರಿನಲ್ಲಿ ಪ್ರತಿಭಟನೆ

"ಗುಣಮಟ್ಟದ ಚಿಕಿತ್ಸೆಯ ನೆಪದಲ್ಲಿ ಖಾಸಗಿ ಸಹಭಾಗಿತ್ವದ ಹೆಸರಿನಲ್ಲಿ ಪ್ರತಿಯೊಂದಕ್ಕೂ ಶುಲ್ಕ ಪಾವತಿಯನ್ನು ವೆನ್ಲಾಕ್ ಆಸ್ಪತ್ರೆಯಲ್ಲಿ ಸರಕಾರ ಕಡ್ಡಾಯಗೊಳಿಸಿದೆ. ಆ ಮೂಲಕ ಹಂತಹಂತವಾಗಿ ಬಡವರ ಪಾಲಿನ ಏಕೈಕ ಆಶಾಕಿರಣವಾದ ಜಿಲ್ಲಾ ಆಸ್ಪತ್ರೆಯನ್ನು ಖಾಸಗಿ ವೈದ್ಯಕೀಯ ವ್ಯಾಪಾರಿಗಳಿಗೆ ಮಾರಾಟ ಮಾಡುವ ನಾಚಿಕೆಗೇಡಿನ ಪ್ರಕ್ರಿಯೆಯನ್ನು ಸರಕಾರ ಆರಂಭಿಸಿದೆ" ಎಂದು ಸಿಪಿಐಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ ಮಾಧವ ಖಂಡಿಸಿದರು.

ವೆನ್ಲಾಕ್ ಆಸ್ಪತ್ರೆ ಉಳಿಸಿ ಆಂದೋಲನದ ಅಂಗವಾಗಿ ವೆನ್ಲಾಕ್ ಜಿಲ್ಲಾ ಸರಕಾರಿ ಆಸ್ಪತ್ರೆ ಉಳಿಸಿ ಹೋರಾಟ ಸಮಿತಿಯು ನವೆಂಬರ್ 2 ರಂದು ಮಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

"ಬ್ರಿಟಿಷರ ಆಳ್ವಿಕೆಯ ಕಾಲದಿಂದಲೂ ಬಡಜನರಿಗೆ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಾ, ಕರಾವಳಿ ಮಲೆನಾಡಿನ ಭಾಗದ ಜನತೆಯ ಏಕೈಕ ಆಸರೆಯಾಗಿದ್ದ ವೆನ್ಲಾಕ್ ಜಿಲ್ಲಾ ಸರಕಾರಿ ಆಸ್ಪತ್ರೆ ಹಾಗೂ ಲೇಡಿ ಗೋಷನ್ ಆಸ್ಪತ್ರೆಯಲ್ಲಿ ಇನ್ನು ಮುಂದಕ್ಕೆ ಉಚಿತ ಚಿಕಿತ್ಸೆ ಇಲ್ಲ. ಎಲ್ಲವನ್ನೂ ಹಣ ಕೊಟ್ಟು ಪಡೆಯಬೇಕು ಎಂಬ ನಿರ್ಧಾರವನ್ನು ಸರಕಾರ ಕೈಗೊಂಡಿದೆ. ಹಣವುಳ್ಳವರು ಮಾತ್ರ ಬದುಕಬೇಕು. ಇಲ್ಲದವರು ಸಾಯಬೇಕು ಎಂಬ ನಿಲುವು ಸರಕಾರದ್ದಾಗಿದೆ" ಎಂದು ಮಾಧವ ಹೇಳಿದರು.

ಡಿವೈಎಫ್ಐ ಮುಖಂಡ ಮುನೀರ್ ಕಾಟಿಪಳ್ಳ ಮಾತನಾಡಿ, "ನೂರೈವತ್ತು ವರ್ಷಗಳ ಸುದೀರ್ಘ ಇತಿಹಾಸವಿರುವ, ಆಗಿನ ಆಳರಸರಾದ ಬ್ರಿಟಿಷರು ಆರಂಭಿಸಿದ ವೆನ್ಲಾಕ್ ಸರಕಾರಿ ಆಸ್ಪತ್ರೆಗೆ ದ.ಕ, ಉಡುಪಿ ಜಿಲ್ಲೆಯಿಂದ ಮಾತ್ರವಲ್ಲದೆ ಕಾಸರಗೋಡು, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಮೊದಲಾದ ಸುತ್ತಮುತ್ತಲಿನ ಜಿಲ್ಲೆಗಳಿಂದ ಬಡಜನರು ಹೆಚ್ಚಿನ ಚಿಕಿತ್ಸೆಗಾಗಿ ಆಗಮಿಸುತ್ತಾರೆ. ಇಲ್ಲಿ ದಾಖಲಾಗುವ ರೋಗಿಗಳಿಗೆ ಹಲವು ಕೊರತೆಗಳ ಮಧ್ಯೆಯೂ ಉಚಿತ ವೈದ್ಯಕೀಯ ಸೌಲಭ್ಯ ದೊರಕುತಿತ್ತು. ಆದರೆ ಇನ್ನು ಮುಂದಕ್ಕೆ ದಾಖಲಾಗುವ ರೋಗಿಯು ಪ್ರತಿಯೊಂದಕ್ಕೆ ದುಡ್ಡು ಪಾವತಿಸಬೇಕು ಎಂಬ ಹೊಸ ಕಾನೂನನ್ನು ಸರಕಾರ ಜಾರಿಗೊಳಿಸಿದೆ. ಪ್ರತಿಯೊಂದನ್ನು ಖಾಸಗಿಯವರಿಗೆ ವಹಿಸುವ ಮುಖಾಂತರ ಶ್ರೀಮಂತರ ಹಿತಾಸಕ್ತಿಯನ್ನು ಕಾಯುವ ಸರಕಾರ ಈ ಮೊದಲೇ ಬ್ಲಡ್ ಬ್ಯಾಂಕ್ ಮತ್ತು ಶವ ಪರೀಕ್ಷೆ ವಿಭಾಗಗಳನ್ನು ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಉತ್ತಮ ನಿರ್ವಹಣೆಯ ನೆಪವನ್ನಿಟ್ಟು ಬಿಟ್ಟುಕೊಟ್ಟಿತ್ತು. ಈಗ ಗುಣಮಟ್ಟದ ಚಿಕಿತ್ಸೆಯ ನೆಪದಲ್ಲಿ ಖಾಸಗಿ, ಸರಕಾರಿ ಸಹಭಾಗಿತ್ವದ ಹೆಸರಿನಲ್ಲಿ ಪ್ರತಿಯೊಂದನ್ನೂ ಶುಲ್ಕ ಪಾವತಿಯನ್ನು ಕಡ್ಡಾಯಗೊಳಿಸಿದೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಹಲವಾರು ಸಂಘಟನೆಗಳು ಭಾಗವಹಿಸಿದ್ದು, ಯಾದವಶೆಟ್ಟಿ ರಮೇಶಕುಮಾರ್, ಇಮ್ತಿಯಾಜ್ ಖಾನ ಮತ್ತಿತರರು ಉಪಸ್ಥಿತರಿದ್ದರು.

(ಕೃಪೆ: ಕರಾವಳಿ ಅಲೆ)



ಬೆಲೆ ಏರಿಕೆ, ಆಹಾರದ ಹಕ್ಕಿಗಾಗಿ ನವೆಂಬರ್ 25 ರ ರ್‍ಯಾಲಿ ಯಶಸ್ವಿಗೊಳಿಸಲು ಕರೆ

ಬೆಲೆ ಏರಿಕೆ ವಿರುದ್ಧ, ಆಹಾರದ ಹಕ್ಕಿಗಾಗಿ ಆಂದೋಲನ ಸಾರಿರುವ ಎಡಪಕ್ಷಗಳು ಮುಂದಿನ ಹಂತದ ಚಳುವಳಿಯ ಭಾಗವಾಗಿ ನವೆಂಬರ್ 25 ರ ರ್‍ಯಾಲಿಯನ್ನು ಅತ್ಯಂತ ಯಶಸ್ವಿಗೊಳಿಸಲು ನಿರ್ಧರಿಸಿದ್ದಾರೆ.

ಇದೇ ಅಕ್ಟೋಬರ್ 29 ರಂದು ಬೆಂಗಳೂರಿನ ಸೂರಿಭವನದಲ್ಲಿ ಸಭೆ ಸೇರಿದ್ದ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್ ಪಕ್ಷಗಳ ಮುಖಂಡರು ಅಕ್ಟೋಬರ್ 26 ರ ರಾಜ್ಯ ಸಮಾವೇಶದ ಬಗ್ಗೆ ಅವಲೋಕಿಸಿದರಲ್ಲದೇ ಜನತೆಯ ಜ್ವಲಂತ ಸಮಸ್ಯೆಗೆ ಎಡಪಕ್ಷಗಳು ಮಾತ್ರವೇ ಸ್ಪಂದಿಸುತ್ತಿರುವುದನ್ನು ಗುರುತಿಸಿದರು. ಸಮಾವೇಶದಲ್ಲಿ ಒಕ್ಕೊರಲಿನಿಂದ ಹೊಮ್ಮಿಬಂದ ಹೋರಾಟ ನಿರ್ಧಾರವನ್ನು, ಪ್ರತಿನಿಧಿಗಳ ಉತ್ಸಾಹವನ್ನು ಗಮನಿಸಲಾಯಿತು. ಈ ಚಳುವಳಿಯನ್ನು ಇನ್ನಷ್ಟು ವಿಸ್ತಾರಕ್ಕೆ ಕೊಂಡೊಯ್ಯಲು ನಿರ್ಧರಿಸಲಾಯಿತು.

ಸಮಾವೇಶದ ಕರೆಯಂತೆ ಇದೇ ನವೆಂಬರ್ 25 ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ ಸಂಘಟಿಸುವ ಮೂಲಕ ಸರ್ಕಾರಗಳು ಜನರ ಬೇಡಿಕೆಗಳಿಗೆ ಪರಿಹಾರ ನೀಡಲೇಬೇಕೆಂಬ ಒತ್ತಡವನ್ನು ಕೇಂದ್ರ, ರಾಜ್ಯ ಸರ್ಕಾರಗಳ ಮೇಲೆ ಹಾಕಲು ಅದಕ್ಕಾಗಿ ರ್‍ಯಾಲಿ ಯಶಸ್ವಿಗೊಳಿಸಲು ಕರೆ ನೀಡಲಾಯಿತು.

ಇದಕ್ಕೆ ಪೂರ್ವ ಭಾವಿಯಾಗಿ ರಾಜ್ಯದ ಮುಖ್ಯ ಮಹಾನಗರಗಳಾದ ಮಂಗಳೂರು, ಗುಲಬರ್ಗಾ, ಬಳ್ಳಾರಿ, ಹುಬ್ಬಳ್ಳಿ, ಧಾರವಾಡ ಮೈಸೂರುಗಳಲ್ಲಿ ಸಮಾವೇಶ ನಡೆಸುವುದು, ಅಲ್ಲದೇ ಸ್ಥಳೀಯವಾಗಿ ಕೆಲವೆಡೆ ತಾಲ್ಲೂಕುಗಳಲ್ಲಿ ಆಯಾ ಸಂಘಟನೆಗಳು, ಸಮಾವೇಶ ನಡೆಸಿ ಸಿದ್ಧತೆ ಮಾಡಲು ನಿರ್ಧರಿಸಲಾಯಿತು. ರಾಜ್ಯ ಸಮಾವೇಶ ನಡೆದಿರುವ ಸಹ ಬೆಂಗಳೂರಿನಲ್ಲಿ ವಿಶೇಷ ಸಿದ್ಧತೆ ನಡೆಸಲಾಗುವುದು. ರಾಜ್ಯದಲ್ಲಿ ಸ್ಥಳೀಯವಾಗಿ ಜನತೆಯ ಹೋರಾಟ ಸಮಿತಿಗಳನ್ನು ರಚಿಸಲಾಗುವುದು.

ನವೆಂಬರ್ 25ರ ರ್‍ಯಾಲಿಯಲ್ಲಿ ಸಹಸ್ರ, ಸಹಸ್ರ ಸಂಖ್ಯೆಯಲ್ಲಿ ಜನತೆಯನ್ನು ಪಾಲ್ಗೊಳಿಸಲು ಎಲ್ಲರೂ ಶ್ರಮಿಸಬೇಕೆಂದು ಜನತೆಯೂ ಭಾಗವಹಿಸಬೇಕೆಂದೂ ಎಡಪಕ್ಷಗಳ ಮುಖಂಡರು ಕರೆ ನೀಡಿದ್ದಾರೆ.

ಈ ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಜಿ.ಸಿ.ಬಯ್ಯಾರೆಡ್ಡಿ , ಎಸ್.ವೈ.ಗುರುಶಾಂತ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ.ಸಿದ್ಧನಗೌಡ ಪಾಟೀಲ್, ಎಂ.ಸಿ.ವೆಂಕಟರಾಮು, ಹರಿಗೋವಿಂದ್, ಫಾರ್ವರ್ಡ್ ಬ್ಲಾಕ್‌ನ ರಾಜ್ಯ ಅಧ್ಯಕ್ಷರಾದ ಜಿ.ಆರ್. ಶಿವಶಂಕರ್ ಭಾಗವಹಿಸಿದ್ದರು.

ಕಾಂ. ಫಕ್ರುಸಾಬ ನದಾಫ ಅಕಾಲಿಕ ಮರಣ

ರಾಮದುಗ: ಸಿಪಿಐ(ಎಂ) ಪಕ್ಷದ ರಾಮದುರ್ಗದ ಭಾಗ್ಯನಗರದ ಶಾಖೆಯ ಕಾರ್ಯದರ್ಶಿ ಹಾಗೂ ವಸತಿ ರಹಿತರ ಸಂಘದ ಮುಖಂಡರಾದ ಕಾಂ.ಫಕ್ರುಸಾಬ ಅಮೀನಸಾಬ ನದಾಫ್ ರವರು ಅಕ್ಟೋಬರ್ 17ರಂದು ನಿಧನ ಹೊಂದಿದರು. ಅವರಿಗೆ 53 ವರ್ಷ ವಯಸ್ಸಾಗಿತ್ತು. ಇವರು ಪತ್ನಿ ಹಾಗೂ ಮೂವರು ಗಂಡುಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳನ್ನು ಹಾಗೂ ಅಪಾರ ಸಂಗಾತಿಗಳನ್ನು ಅಗಲಿದ್ದಾರೆ.

ಕಾಂ. ಫಕ್ರುಸಾಬ ನದಾಫ್ 1989 ರಲ್ಲಿ ನಾಗಪ್ಪ ಸಂಗೊಳ್ಳಿ, ಭೀಮಸಿ ಬಂಡಿವಡ್ಡರ, ಅಲ್ಲಾಸಾಬ ಬಾಗವಾನ, ಬಿಚ್ಚಣ್ಣ ನಾವಿ ಇವರಜೊತೆ ಸೇರಿಕೊಂಡು ರಾಮದುರ್ಗದ ಪಕ್ಕದಲ್ಲಿರುವ ತುರನೂರ ಪಂಚಾಯತ ವ್ಯಾಪ್ತಿಯ ಭಾಗ್ಯನಗರದಲ್ಲಿ ನಿವೇಶನ ಹಕ್ಕು ಪತ್ರಕ್ಕಾಗಿ, ನೀರು, ವಿದ್ಯುತ್ ಸೌಲಭ್ಯಕ್ಕಾಗಿ 'ವಸತಿ ರಹಿತರ ಸಂಘಟನೆ' ಕಟ್ಟಿಕೊಂಡು ವ್ಹಿ.ಪಿ. ಕುಲಕರ್ಣಿ ಇವರಜೊತೆ ಕೂಡಿ ಹಲವಾರು ಜನಪರ ಹೋರಾಟಗಳಲ್ಲಿ ಭಾಗವಹಿಸಿದ್ದರು.

ಕಳೆದ ಫೆಬ್ರವರಿ 2004 ರಲ್ಲಿ ನಡೆದ ತುರನೂರ ಗ್ರಾಮ ಪಂಚಾಯತ ಚುನಾವಣೆಯಲ್ಲಿ ಭಾಗ್ಯನಗರದಿಂದ ಸ್ಪರ್ಧಿಸಿ ಅಧಿಕ ಮತಗಳಿಂದ ಚುನಾಯಿತರಾಗಿ ಓರ್ವ ಜನನಾಯಕನಾಗಿ ಬೆಳೆದುಬಂದರು. ಒಬ್ಬ ಸಾಮಾನ್ಯ ಕೂಲಿ ಮಾಡುವಂತಹ ಫಕ್ರುಸಾಬ ನದಾಫರವರು ಸಿಪಿಐ(ಎಂ) ಪಕ್ಷ ಸೇರಿ ಜನತೆಗಾಗಿ ತುಂಬಾ ಶ್ರಮ ಪಟ್ಟವರು. ಇವರು ಪ್ರಾಮಾಣಿಕ, ಸಜ್ಜನ ಹಾಗೂ ಸರಳ ಸ್ವಭಾವದ ವ್ಯಕ್ತಿಯಾಗಿದ್ದರು. 17.10.2009 ರಂದು ತಮ್ಮ ಕೂಲಿ ಕೆಲಸ ಮುಗಿಸಿಕೊಂಡು ಬರುವಾಗ ಅಪಘಾತದಿಂದ ನಿಧನರಾಗಿದ್ದಾರೆ. ಇವರ ನಿಧನದಿಂದ ಭಾಗ್ಯನಗರದ ಸಂಘಟನೆಗೆ ಪೆಟ್ಟು ಬಿದ್ದಂತಾಗಿದೆ.

18.10.2009 ರಂದು ಇವರ ಅಂತಿಮ ಯಾತ್ರೆಯಲ್ಲಿ ಹಲವಾರು ಪಕ್ಷದ ಮುಖಂಡರು ಸಾರ್ವಜನಿಕರು ಪಾಲ್ಗೊಂಡರು.

ವ್ಹಿ.ಪಿ. ಕುಲಕರ್ಣಿ, ಗೈಬು ಜೈನೆಖಾನ, ನಾಗಪ್ಪ ಸಂಗೊಳ್ಳಿ, ಸೌದತ್ತಿಯ ಎಲ್.ಎಸ್.ನಾಯಕ, ಎಫ್.ಎಂ.ನದಾಫ, ಶ್ರೀಕಾಂತ ಹಟ್ಟಿಹೊಳಿ ಮೊದಲಾದವರು ಮಾತನಾಡಿದರು.

ಅಫಘಾನಿಸ್ತಾನ - ಪಾಕಿಸ್ತಾನ ಕುರಿತು ಅಮೆರಿಕದ ನೀತಿ ಗಂಡಾಂತರಕಾರಿ

ಕಿಸ್ತಾನದಲ್ಲಿ ಭಯೋತ್ಪಾದನಾ ಧಾಳಿಗಳು ಾಯಕಾರಿ ಗತಿಯಲ್ಲಿ ಜರುಗುತ್ತಿವೆ. ಾನಿಸ್ತಾನ-ಪಾಕಿಸ್ತಾನ ಕುರಿತಂತೆ ಅಮೇರಿಕಾ ತಿಯು ಗಂಡಾಂತರ ಸ್ಪಷ್ಟವಾಗುತ್ತಿದೆ. ಾನಿಸ್ತಾನದ ಬಿಕ್ಕಟ್ಟು ಪಾಕಿಸ್ತಾನವನ್ನು ರಿಸುತ್ತಿದೆ. ಅದು ಭಾರತವನ್ನೇನೂ ಸೆಹ ಸುಮ್ಮನೆ ಟ್ಟಿಲ್ಲ. ಕಾಬೂಲ್‌ನಲ್ಲಿ ನಮ್ಮ ರಾಯಭಾರಿ ಕಛೇರಿ ಲಿನ ಧಾಳಿಯು ಇದಕ್ಕೆ ಪುರಾವೆಯೆನಿಸಿದೆ. ಭಾರತ ರ್ಕಾರವು ನೀಡಿರುವ ಒಂದು ಬಿಲಿಯನ್ ಡಾಲರ್ ರವು ಅಲ್ಲಿನ ಜನತೆಯಲ್ಲಿ ಒಂದು ಉತ್ತಮ ಂಧವ್ಯ ಉಂಟುಮಾಡಿದ್ದರೂ ತಾಲಿಬಾನ್‌ನಿಂದ ತಿರೋಧ ವ್ಯಕ್ತವಾಗಿದೆ. ತಾಲಿಬಾನ್‌ನ್ನು ಕಿಸ್ತಾನವು ಮಟ್ಟಹಾಕುತ್ತಿರುವುದರಿಂದ ಭಾರತದ ೀಲೆ ಮತ್ತೆ ಧಾಳಿಗಳು ಸಂಭವಿಸುವುದಿಲ್ಲ ಂದುಕೊಳ್ಳುವುದು ಮೂರ್ಖತನವೆನಿಸೀತು.

ಷ್ಟೀಯ ಭೂಪ್ರದೇಶಗಳನ್ನು ರಿಯಾಗಿಸಿಕೊಂಡಿರುವ ಯೋತ್ಪಾದನೆಯು ಕುರಿತಾದ ೀರಣೆಯು ದೋಷದಿಂದ ಕೂಡಿದೆ. ರತ-ವಿರೋಧಿ ಗುಂಪುಗಳಿಗೆ ಬೆಂಬಲ ಡುತ್ತಾ ತಾಲಿಬಾನ್‌ನ್ನು ಟ್ಟಿಹಾಕಬಯುಸುವ ಪಾಕಿಸ್ತಾನ ರ್ಕಾರದ ನೀತಿಯು ಶಸಾಧಿಸಲಾರದು. ಏಕೆಂದರೆ, ಈ ಂಪುಗಳು ಅಂತಿಮವಾಗಿ ಯೋತ್ಪಾದನೆಗೆ ಮಾತ್ರವೇ ಂಟಿಕೊಳ್ಳುತ್ತವೆ.

ಅಫ್ಘಾನಿಸ್ತಾನದಲ್ಲಿರುವ ಅಮೇರಿಕಾದ ನಾ ಕಮ್ಯಾಂಡರ್ ಜನರಲ್ ಸ್ಟ್ಯಾನ್ಲಿ ್ಯಾಕ್ರಿಸ್ಟಲ್ ರವರು ಇನ್ನೂ 40,000 ಸೈನಿಕರನ್ನು ುಹಿಸಿಕೊಡುವಂತೆ ಕೋರಿದ್ದಾರೆ. ಅಮೇರಿಕಾದ ್ಯಕ್ಷ ಬರಾಕ್ ಒಬಾಮ ಇದಕ್ಕಿನ್ನೂ ಒಪ್ಪಿಗೆ ತದಿದ್ದರೂ ಸೇನೆಯನ್ನು ಬಲಪಡಿಸುವ ಸೂಚನೆ ಾರಡಿಸಿದ್ದಾರೆ. ಆದರೆ, ಅಮೇರಿಕಾದ ನ್ಯಾಟೋ ತ್ರಿಕೂಟಕ್ಕೆ ಮನಸ್ಸಿಲ್ಲ.

ಅಫ್ಘಾನಿಸ್ತಾನದ ಮೇಲೆ ಅಮೇರಿಕಾ ನೇತೃತ್ವದ ಳಿ ಆರಂಭವಾದ ಎಂಟನೇ ವಾರ್ಷಿಕದ ಸಂದರ್ಭದಲ್ಲಿ ತಾಲಿಬಾನ್ ಹೇಳಿಕೆಯೊಂದನ್ನು ಹೊರಡಿಸಿದೆ: 'ನಾವು ಇಡೀ ವಿಶ್ವಕ್ಕೆ ಘೋಷಿಸುವುದೇನೆಂದರೆ, ಸ್ವಾತಂತ್ರ್ಯ ಪಡೆದು ಇಸ್ಲಾಮ್ ವ್ಯವಸ್ಥೆಯೊಂದನ್ನು ಸ್ಥಾಪಿಸುವುದು ನಮ್ಮ ಗುರಿ. ಯೂರೋಪನ್ನು ಒಳಗೊಂಡಂತೆ ಯಾವುದೇ ದೇಶಕ್ಕೆ ಸಂಕಷ್ಟಕ್ಕೀಡು ಮಾಡುವುದು ನಮ್ಮ ಆಕಾಂಕ್ಷೆಯಾಗಿರಲಿಲ್ಲ ಅಥವಾ ಇಂದೂ ಕೂಡ ಅಂತಹ ಇಚ್ಛೆ ನಮಗಿಲ್ಲ. ಹೆಮ್ಮೆಯುಳ್ಳ ಮತ್ತು ಧರ್ಮಶ್ರದ್ದೆಯುಳ್ಳ ಆಫ್ಘನ್ನರ ರಾಷ್ಟ್ರವನ್ನು ನೀವಿನ್ನೂ ಒಂದು ವಸಾಹತುವನ್ನಾಗಿ ಮಾಡಬಯಸಿದರೆ, ಅಚಲವಾದ ದೃಢನಿಶ್ಚಯ ನಮಗಿದೆಯೆಂದು ಮತ್ತು ನಾವು ದೀರ್ಘಕಾಲೀನ ಯುದ್ದಕ್ಕೆ ಸಿದ್ದವಿರುವೆವು ಎಂಬುದನ್ನು ನೀವು ಅರ್ಥಮಾಡಿಕೊಳ್ಳಿ.'

ಈ ಹೇಳಿಕೆಯನ್ನು ವಿವಿಧ ತೆರನಾಗಿ ಅರ್ಥೈಸಲಾಗುತ್ತಿದೆ.

ಆಫ್ಘಾನಿಸ್ತಾನದಲ್ಲಿ ಭವಿಷ್ಯದಲ್ಲಿ ಸ್ಥಾಪಿಸಲಾಗುವ ಸರ್ಕಾರ ರಚನೆಯಲ್ಲಿ ಭಾಗವಾಗಲು ತಾಲಿಬಾನ್ ಸಿದ್ದವಿದೆಯೆಂದು ಕೆಲವರು ಅರ್ಥೈಸುತ್ತಿದ್ದಾರೆ. ಅಧ್ಯಕ್ಷ ಹಮಿದ್ ಕರ್ಜೈಯವರು ಈ ರೀತಿ ಕೆಲಮಟ್ಟಿಗೆ ಮಾತನಾಡುತ್ತಿದ್ದಾರೆ. ಅಲ್‌ಖೈದಾದಿಂದ ತಾಲಿಬಾನ್ ಪ್ರತ್ಯೇಕವೆಂದು ಅಮೇರಿಕಾ ಪರಿಗಣಿಸುವ ಸಾಧ್ಯತೆಯಿದೆಯೇ?

'ಐಕ್ಯ ಸರ್ಕಾರ' ವೆಂಬುದರ ಅರ್ಥವೇನೇ ಇರಲಿ, ಅಮೇರಿಕಾ ತಾನು ಅಂತಹದನ್ನು ಬಯಸುವುದಾಗಿ ಸೂಚಿಸಿದೆ. ಆಫ್ಘಾನಿಸ್ತಾನ ಕುರಿತು ಅಂತರಾಷ್ಟ್ರೀಯ ಸಮ್ಮೇಳನವನ್ನು ಏರ್ಪಡಿಸಬೇಕೆಂದು ಬ್ರಿಟನ್ ಮತ್ತು ಜರ್ಮನಿಗಳು ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಿಗೆ ಕರೆನೀಡಿವೆ. ಆಫ್ಘಾನಿಸ್ತಾನದಲ್ಲಿರುವ ಅಮೇರಿಕಾ ನೇತೃತ್ವದ ಸೇನೆ ಬದಲಿಗೆ ವಿಶ್ವಸಂಸ್ಥೆಯ ನಾಯಕತ್ವದಲ್ಲಿ ಇಸ್ಲಾಂ ರಾಷ್ಟ್ರಗಳಿಂದ ಸೇನೆ ಕರೆಸಿ ನೇಮಿಸಬೇಕೆಂದು ಆಫ್ಘಾನಿಸ್ತಾನದ ಮಾಜಿ ವಿದೇಶಾಂಗ ಸಚಿವರೊಬ್ಬರು ಹೇಳಿದ್ದಾರೆ. ಇಂತಹ ವಿವಿಧ ಧೋರಣೆಗಳಲ್ಲಿನ ಭಿನ್ನಾಭಿಪ್ರಾಯಗಳಿಂದಾಗಿ ಆಫ್ಘಾನಿಸ್ತಾ-ಪಾಕಿಸ್ತಾನ ಕುರಿತಂತೆ ಅಮೇರಿಕಾದ ನೀತಿಯು ಯಶಪಡೆಯುವ ಭರವಸೆಗಳು ಕ್ಷೀಣಗೊಳ್ಳುತ್ತಿವೆ.



ಆಫ್ಘಾನಿಸ್ತಾನದೊಂದಿಗಿನ ಭಾರತದ ಸುದೀರ್ಘ ಸಂಬಂಧಗಳ ಹಿನ್ನೆಲೆಯಲ್ಲಿ ನೋಡಿದಾಗ ನಾವು ಸ್ಪಷ್ಟವಾದ ಹಾದಿ ಹಿಡಿಯಬೇಕಿದೆ. ಹಲವು ಶತಮಾನಗಳ ಕಾಲ ಈ ಪ್ರದೇಶಗಳು ಸಾಮ್ರಾಜ್ಯಶಾಹಿ ಶಕ್ತಿಗಳ ನಿಯಂತ್ರಣದಿಂದ ತಪ್ಪಿಸಿಕೊಂಡಿದ್ದವು. ಈ ಪ್ರದೇಶಗಳನ್ನು ನಿಯಂತ್ರಿಸಲು ದಶಕದ ಕಾಲ ಲಾಹೋರಿಗೆ ಅಕ್ಬರ್ ನೆಲೆ ವರ್ಗಾಯಿಸುವುದರೊಂದಿಗೆ, ಮೊಘಲರು ಅಂತಹ ಪ್ರಯತ್ನ ಮಾಡಿದರು. ಆದರೆ ಇತ್ತ ಅಕ್ಬರನ ಅನುಪಸ್ಥಿತಿಯಿಂದಾಗಿ ಫತೇಪುರ ಸಿಕ್ರಿಯು ಕೈತಪ್ಪಿಹೋಯಿತು. ಶತಮಾನಗಳ ನಂತರ, 1838 ಮತ್ತು 1918ರ ನಡುವೆ ಬ್ರಿಟಿಷರು ಮೂರು ಭಾರತ-ಆಫ್ಘಾನಿಸ್ತಾನ ಯುದ್ದಗಳನ್ನು ನಡೆಸಿದರು. ನಂತರದಲ್ಲಿ, ಹಿಂದಿನ ಸೋವಿಯತ್ ಒಕ್ಕೂಟವು ಅಲ್ಲಿ ಒಂದು ಪ್ರಗತಿಪರ ಆಳ್ವಿಕೆಯನ್ನು ಬೆಂಬಲಿಸಿತು. ಇದನ್ನು ನಿಯಂತ್ರಿಸಲು ಅಮೇರಿಕಾವು ಫ್ರಾಂಕಸ್ಟೀನ್ ಭೂತಗಳಾದ ತಾಲಿಬಾನ್ ಮತ್ತು ಅಲ್‌ಖೈದಾಗಳಿಗೆ ಜನ್ಮನೀಡಿತು.

ಪಶ್ಚಿಮ ಏಷ್ಯಾದಲ್ಲಿ ತೈಲ ಮತ್ತು ಅನಿಲ ಸಂಪನ್ಮೂಲಗಳ ಆರ್ಥಿಕ ನಿಯಂತ್ರಣ ಮಾಡುವ ಅಮೇರಿಕಾದ ವ್ಯೂಹಗಾರಿಕೆಯಲ್ಲಿ ಆಫ್ಘಾನಿಸ್ತಾನವು ಒಂದು ಪ್ರಮುಖ ಸ್ಥಾನ ಪಡೆದಿದೆ. 2000ರ ಆಫ್ಘಾನಿಸ್ತಾನ ಕುರಿತಾದ ಅಮೇರಿಕಾ ಸರ್ಕಾರದ ಇಂಧನ ಮಾಹಿತಿ ಪಟ್ಟಿಯಲ್ಲಿ ಈ ರೀತಿ ಹೇಳಲಾಗಿದೆ: 'ಮಧ್ಯ ಏಷ್ಯಾದಿಂದ ಅರೇಬಿಯನ್ ಸಮುದ್ರಕ್ಕೆ ತೈಲ ಮತ್ತು ನೈಸರ್ಗಿಕ ಅನಿಲಗಳನ್ನು ರಫ್ತು ಮಾಡಲು ಪ್ರಮುಖ ಮಾರ್ಗವಾಗಿ ಅದರ ಭೌಗೋಳಿಕ ಸ್ಥಾನ ಪಡೆದಿರುವ ಹಿನ್ನೆಲೆಯಲ್ಲಿ ಅಫ್ಘಾನಿಸ್ತಾನದ ಪ್ರಾಮುಖ್ಯತೆಯನ್ನು ಗಮನಿಸಬೇಕು.' ಇದರಲ್ಲಿ ಆಫ್ಘಾನಿಸ್ತಾನದ ಮೂಲಕ ಹಲವು ಬಿಲಿಯನ್ ಡಾಲರ್ ತೈಲ ಮತ್ತು ಅನಿಲ ರಫ್ತು ಕೊಳವೆಗಳನ್ನು ಅಳವಡಿಸುವ ಯೋಜನೆಗಳು ಇವೆ. ಇದರಿಂದಾಗಿಯೇ ಆಫ್ಘಾನಿಸ್ತಾನವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಅಮೇರಿಕಾ ನೇತೃತ್ವದ ಯುದ್ದ ನಡೆಯುತ್ತಿದೆ.

ಅಮೇರಿಕಾವು ಮಿಲಿಟರಿ ಶಕ್ತಿಯ ಮೂಲಕ ಇಂತಹ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವ ತನ್ನ ಧೋರಣೆಯನ್ನು ಕೈಬಿಡದೆ, ಈ ಬಿಕ್ಕಟ್ಟಿಗೆ ಯಾವುದೇ ಪರಿಹಾರ ಸಾಧ್ಯವಿಲ್ಲ.

(ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯದಿಂದ)

ಗಣಿಗಳ್ಳರನ್ನು ಸದೆಬಡಿಯಲು ಯಡ್ಡಿ ಹೊರಟಿರುವರೇ? ಕೆಲವು ಬುದ್ದಿಜೀವಿಗಳಲ್ಲಿ ಗೊಂದಲ

ಕರ್ನಾಟಕದಲ್ಲಿ ಈಗ ನಡೆದಿರುವ ಕಿತ್ತಾಟವು ಗಣಿಗಳ್ಳರನ್ನು ಬಗ್ಗುಬಡಿಯಲು ಯಡಿಯೂರಪ್ಪ ಸಾರಿರುವ ಸಮರವೇ? ಹೌದೆಂದು ತಲೆ ಹಾಕಿದ್ದಾರೆ: ನಮ್ಮ ಕೆಲವು ಬುದ್ದಿಜೀವಿ ಮಿತ್ರರು.

ನಿಜ, ಗಣಿಗಳ್ಳರನ್ನು ಹಣಿಯಬೇಕು. ಆದರೆ ಅದು ಈಗಿನ ಬಿಜೆಪಿ ಅಥವಾ ಯಡಿಯೂರಪ್ಪನಿಂದ ನಿಜಾರ್ಥದಲ್ಲಿ ಸಾಧ್ಯವೇ? ಅಧಿಕಾರ ದಾಹಕ್ಕಾಗಿ ಏನೆಲ್ಲಾ ಹೇಯ ಕೆಲಸಗಳಿಗೆ ಇವರೆಲ್ಲಾ ಒಂದಾಗಿ ಇಳಿದರು. ಆಪರೇಷನ್ ಕಮಲವನ್ನು ಬೆನ್ನು ತಟ್ಟಿ ಸುಭದ್ರ ಸರ್ಕಾರ ಸ್ಥಾಪನೆಗೆಂದು ಸಮರ್ಥಿಸಿಕೊಂಡರು. ರಾಜ್ಯದ ರಾಜಕಾರಣವನ್ನೇ ಹಣ, ಅಕ್ರಮಗಳಿಂದ ಹಲವು ದಶಕಗಳೂ ಕೊಳೆತು ಹೋಗುವಂತೆ ಮಾಡಿದರು.! ಈಗಲೂ ಈ ಕಿತ್ತಾಟದಲ್ಲಿ ಗಣಿಗಳ್ಳರೊಂದಿಗೆ ರಾಜೀ ಸಂಧಾನಕ್ಕೆ ಹಾತೊರೆಯುತ್ತಿರುವುದು ನೈತಿಕ ಅಥವಾ 'ಯಡ್ಡಿ ಬಿಜೆಪಿ ರಾಜ್ಯದ ಹಿತಕಾಯುವ ಮೌಲ್ಯಗಳಿಂದಲ್ಲ' ಎಂಬುದು ಎಂತಹ ಸಾಮಾನ್ಯನಿಗೂ ತಿಳಿದ ಸಂಗತಿ. ಇದೇಕೆ ಕೆಲವು ಬುದ್ದಿಜೀವಿಗಳಿಗೆ ಹೊಳೆಯುವುದಿಲ್ಲ. ನೇರವಾಗಿ ಹೋಗಿ ಯಡಿಯೂರಪ್ಪನನ್ನು ಅಭಿನಂದಿಸುವ ಭಾವೋದ್ವೇಗಕ್ಕೆ ಒಳಗಾಗುವ ಅಗತ್ಯವೇನಿದೆ? ಅಂತಹ ಹಗರಣ, ಅಕ್ರಮಗಳ ಸನ್ನಿವೇಶದ ಕ್ರೂರ ಅಂಶ. ಜನ ಇವೆಲ್ಲವನ್ನೂ ತೆರೆದ ಕಣ್ಣಿಂದ ನೋಡುತ್ತಿದ್ದಾರೆ. ಅವರು ಯಾರನ್ನೂ ಬೆಂಬಲಿಸಲು ಬೀದಿಗಿಳಿದಿಲ್ಲ ಎಂಬುದು ಗಮನಾರ್ಹ. ಅಪಾಯಕಾರಿ ಕೋಮುವಾದದ ಒಟ್ಟು ಮೊತ್ತವೇ ಬಿಜೆಪಿ. ಹೀಗಾಗಿರುವಾಗ ಅದನ್ನು ಆಮೂಲಾಗ್ರ ಎದುರಿಸಬಾರದೆ? ಇಂತಹವರ ಜೊತೆಗೆ ವಿಷಯಾಧಾರಿತ ಬೆಂಬಲ ಸಾಧ್ಯವೇ? ಸಾಧುವೇ. ಇವೆಲ್ಲಾ ಗಮನಿಸಿದರೆ 'ಸಮಯ ಸಿಕ್ಕರೆ ಸಂಧಾನ, ಅಧಿಕಾರಸ್ಥರ ಸ್ನೇಹ' ಎಂಬುದಕ್ಕೆ ಇವರು ಕಾದು ನಿಂತಿದ್ದರೇ ಎಂದು ಭಾವಿಸುವುದರಲ್ಲಿ ತಪ್ಪೇನಿದೆ?

ಅದೂ ನ್ಯಾಯಮೂರ್ತಿ ವಿ.ಎಸ್.ಮಳಿಮಠರವರು ಸಾರ್ವಜನಿಕ ಸಮಾರಂಭದಲ್ಲಿ 'ಬುದ್ದಿಜೀವಿಗಳೇ ಅಪಾಯಕಾರಿ' ಎಂಬ 'ಘನವೆತ್ತ ಅಮೋಘ ಸಂಶೋಧನೆಯ ತೀರ್ಪನ್ನು ಹೊರಡಿಸಿರುವಾಗ! ಅಂತಹವರಿಗೆ ಬುದ್ಧಿ ಹೇಳಬೇಕಾದ ಸಂದರ್ಭವಿರುವಾಗ...

.ಮಹಾನ್ ನವಂಬರ್ ಕ್ರಾಂತಿ ನಡೆದು ಈಗ 92 ವರ್ಷಗಳಾಗಿವೆ. ಅದು ಜನ್ಮ ಕೊಟ್ಟ ಸೋವಿಯೆಟ್ ಸಮಾಜವಾದಿ ಪ್ರಭುತ್ವ ಕೊನೆಗೊಂಡಿದ್ದರೂ ಈ ಐತಿಹಾಸಿಕ ಕ್ರಾಂತಿ ಕಲಿಸಿದ ಪಾಠ ಈಗ ವಿಶ್ವ ಬಂಡವಾಳಶಾಹಿ ಅಭೂತಪೂರ್ವ ಬಿಕ್ಕಟ್ಟಿನಿಂದ ತತ್ತರಿಸುತ್ತಿರುವಾಗ ಇನ್ನಷ್ಟು ಪ್ರಸ್ತುತವಾಗಿದೆ ಎನ್ನುತ್ತಾರೆ ಹಿರಿಯ ಕಾರ್ಮಿಕ ಮುಂದಾಳು ಹಾಗೂ ಭಾರತದಲ್ಲಿ ಕಾರ್ಮಿಕ ಆಂದೋಲನದ ಇತಿಹಾಸದ ಆಳವಾದ ಅಧ್ಯಯನ ಮಾಡಿರುವ ಸುಕೊಮಲ್ ಸೆನ್. ಅವರ ಲೇಖನದ ಸಂಗ್ರಹಾನುವಾದ ನಮ್ಮ ಓದುಗರಿಗಾಗಿ ಇಲ್ಲಿದೆ.

ನವೆಂಬರ್ ಕ್ರಾಂತಿಯ ಪಾಠಗಳು ಇಂದು ಪ್ರಸ್ತುತ

ನವಂಬರ್ 7 (ಆಗಿನ ರಶ್ಯಾದ ಕ್ಯಾಲೆಂಡರ್ ಪ್ರಕಾರ ಅಕ್ಟೋಬರ್ 17) 1917ರಂದು ಸಂಭವಿಸಿದ ಸಮಾಜವಾದಿ ಕ್ರಾಂತಿ ಜಗತ್ತನ್ನೇ ನಡುಗಿಸಿದ ಘಟನೆಯಷ್ಟೇ ಅಲ್ಲ, ಅಭೂತಪೂರ್ವ ಬಂಡವಾಳಶಾಹಿ ಬಿಕ್ಕಟ್ಟು ಮತ್ತು ಹಿಂಜರಿತವನ್ನು ಕಾಣುತ್ತಿರುವ ಈಗಿನ ಜಗತ್ತಿಗೂ ಪ್ರಸ್ತುತವಾಗಿರುವ ಘಟನೆ. ಬಂಡವಾಳಶಾಹಿಯ ಇತ್ತೀಚಿನ ಈ ಬಿಕ್ಕಟ್ಟು ಈ ಸಪ್ಟಂಬರ್ 15 ರಂದು ಮೊದಲನೇ ವಾರ್ಷಿಕ ಕಂಡಿದ್ದು, ಜಗತ್ತಿನ ಕಾರ್ಮಿಕ ವರ್ಗದ ಮೇಲೆ, ಬಡವರ ಮೇಲೆ ಅದರ ಪರಿಣಾಮದ ಪೂರ್ಣ ಸ್ವರೂಪ ಇನ್ನೂ ಕೂಡಾ ಅನಾವರಣಗೊಂಡಿಲ್ಲ. ಇದು ನವಂಬರ್ ಕ್ರಾಂತಿಯ ರಾಜಕೀಯ ಮಹತ್ವವನ್ನು ಇನ್ನೂ ಹೆಚ್ಚಿಸಿದೆ.

1917 ರಲ್ಲಿ ರಶ್ಯಾದಲ್ಲಿ ಬಂಡವಾಳಶಾಹಿ



ಸರಪಳಿಯ ಅತಿ ದುರ್ಬಲ ಕೊಂಡಿಯನ್ನು ಮೊತ್ತಮೊದಲ ಬಾರಿಗೆ ಮುರಿದು ಕಾರ್ಮಿಕ ವರ್ಗದ ಆಳ್ವಿಕೆಯನ್ನು ಸ್ಥಾಪಿಸಲಾಯಿತು. ಬೂರ್ಜ್ವಾ ವರ್ಗದ ಶೋಷಣಾತ್ಮಕ ಆಳ್ವಿಕೆಯನ್ನು ಕೊನೆಗೊಳಿಸಿದ್ದು ರಶ್ಯನ್ ಕ್ರಾಂತಿಯ ಅತ್ಯಂತ ಮಹತ್ವದ ಅಂಶ.

1991ರಲ್ಲಿ ಸೋವಿಯೆಟ್ ಸಮಾಜವಾದಿ ಪ್ರಭುತ್ವ ಕೊನೆಗೊಂಡಿದ್ದರೆ ಅದಕ್ಕೆ ಮಾರ್ಕ್ಸ್‌ವಾದದ ಆಧಾರಭೂತ ತತ್ವಗಳಲ್ಲಿ ಆಗಿದ್ದ ಗಂಭೀರ ವಿಕೃತಿಗಳು ಮತ್ತು ಮಾರ್ಗಚ್ಯುತಿಗಳು ಕಾರಣ. ಜಗತ್ತಿನಾದ್ಯಂತ ಮಾರ್ಕ್ಸ್‌ವಾದಿಗಳು ಇದರ ಪರಾಮರ್ಶೆಯಲ್ಲಿ ತೊಡಗಿದ್ದಾರೆ.

ಕ್ರಾಂತಿಕಾರಿ ಬದಲಾವಣೆಗಳು ಹೇಗೆ ಸಂಭವಿಸುತ್ತವೆ?

ಮಾರ್ಕ್ಸ್ ಒಂದು ವರ್ಗ ಸಮಾಜದಲ್ಲಿ ಉತ್ಪಾದನಾ ಶಕ್ತಿಗಳು ಮತ್ತು ಅಸ್ತಿತ್ವದಲ್ಲಿರುವ ಆಸ್ತಿ ಸ್ವರೂಪಗಳ ನಡುವಿನ ವೈರುಧ್ಯಗಳು ಆ ಸಮಾಜದಲ್ಲಿ ಅಸ್ಥಿರತೆಗೆ ಮತ್ತು ಕ್ರಾಂತಿಕಾರಿ ಬದಲಾವಣೆಗಳಿಗೆ ಕಾರಣವಾಗುತ್ತವೆ ಎಂದರು. ಬದುಕಿನ ಹೋರಾಟದಲ್ಲಿ ಮತ್ತು ನಿಸರ್ಗದೊಂದಿಗೆ ಸಂವಹನದಲ್ಲಿ ಮನುಷ್ಯರು ಕೆಲವು ಉಪಕರಣಗಳನ್ನು, ಸಾಧನಗಳನ್ನು, ಶ್ರಮವಿಭಜನೆಯ ವಿಧಾನಗಳನ್ನು ರೂಪಿಸಿಕೊಳ್ಳುತ್ತಾರೆ ಮತ್ತು ಅನುಭವಗಳನ್ನು ಪಡೆಯುತ್ತಾರೆ. ಮಾರ್ಕ್ಸ್ ಇವನ್ನೆಲ್ಲಾ ಉತ್ಪಾದನಾ ಶಕ್ತಿಗಳು ಎನ್ನುತ್ತಾರೆ. ಈ ಶಕ್ತಿಗಳ ಸಂದರ್ಭದಲ್ಲಿ ಮನುಷ್ಯರ ನಡುವಿನ ಸಂಬಂಧಗಳು ಈ ಉತ್ಪಾದನಾ ಸಾಧನಗಳು ಯಾರ ಒಡೆತನದಲ್ಲಿ ಇವೆ ಎಂಬುದನ್ನು ಅವಲಂಬಿಸಿರುತ್ತವೆ. ಇದನ್ನು ಮಾರ್ಕ್ಸ್ ಉತ್ಪಾದನಾ ಸಂಬಂಧಗಳು ಎನ್ನುತ್ತಾರೆ. ಯಾವುದೇ ಕಾಲದಲ್ಲಿ ಉತ್ಪಾದನಾ ಸಂಬಂಧಗಳು ಉತ್ಪಾದನಾ ಶಕ್ತಿಗಳ ಬೆಳವಣಿಗೆಯ ಮಟ್ಟಕ್ಕೆ ಅನುಗುಣವಾಗಿ ಬದಲಾಗಬೇಕಾಗುತ್ತದೆ. ಇದೇ ಸಾಮಾಜಿಕ ಬೆಳವಣಿಗೆಯ ಚಾಲಕ ಶಕ್ತಿ.

ಇದು 'ಇತಿಹಾಸದ ಚಲನೆಯ ನಿಯಮ'. ಈ ಬೆಳವಣಿಗೆ ಯಾವ ಸಾಮಾಜಿಕ ವರ್ಗಗಳ ಹಿತಾಸಕ್ತಿಗಳಿಗೆ ಅನುರೂಪವಾಗಿರುತ್ತದೋ ಆ ವರ್ಗಗಳು ಈ ಬೆಳವಣಿಗೆಗಳನ್ನು ಸಕ್ರಿಯಗೊಳಿಸುತ್ತವೆ. ವಿವಿಧ ಸಾಮಾಜಿಕ ವ್ಯವಸ್ಥೆಗಳ, ಅಂದರೆ ಗುಲಾಮ ಪದ್ಧತಿ, ಪಾಳೆಯಗಾರೀ ಸಮಾಜ, ಬಂಡವಾಳಶಾಹಿ ಇತ್ಯಾದಿ ಸಾಮಾಜಿಕ ಬೆಳವಣಿಗೆಗಳನ್ನು ಈ ಮೂಲಕ ಮಾತ್ರವೇ ಅರ್ಥ ಮಾಡಿಕೊಳ್ಳಲು ಸಾಧ್ಯ. ಪಾಳೆಯಗಾರಿ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಯತ್ತ ಸ್ಥಿತ್ಯಂತರದ ಅಧ್ಯಯನದಿಂದ ಮಾರ್ಕ್ಸ್ ಚಾರಿತ್ರಿಕ ಚಲನೆಯ ನಿಯಮವನ್ನು, ಅದರೊಂದಿಗೆ ಸಮಾಜವಾದಿ ಕ್ರಾಂತಿಯ ಸಿದ್ಧಾಂತವನ್ನು ರೂಪಿಸಿದರು.

ಮತ್ತೆ-ಮತ್ತೆ ಕಾಣಿಸಿಕೊಳ್ಳುವ ಬಂಡವಾಳಶಾಹಿ ಬಿಕ್ಕಟ್ಟುಗಳು ಹೆಚ್ಚೆಚ್ಚು ಹಿಂಸಾತ್ಮಕವಾಗುತ್ತವೆ, ವ್ಯಾಪಕವಾಗುತ್ತವೆ ಎಂದು ಮಾರ್ಕ್ಸ್ ಅಂದಾಜಿಸಿದರು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉತ್ಪಾದನೆ ಸಾಮಾಜಿಕ ಸ್ವರೂಪ ಪಡೆಯುತ್ತದೆ, ಆದರೆ ಒಡೆತನ ವೈಯಕ್ತಿಕವಾಗಿರುತ್ತದೆ. ಇವುಗಳ ನಡುವೆ ಸಂಘರ್ಷ ನಡೆಯುತ್ತದೆ. ಆರ್ಥಿಕ ಬಿಕ್ಕಟ್ಟುಗಳು ಈ ಸಂಘರ್ಷವನ್ನು ಬಹಿರಂಗಕ್ಕೆ ತರುತ್ತವೆ. ಎಲ್ಲಾ ನಿಜವಾದ ಬಿಕ್ಕಟ್ಟುಗಳಿಗೆ ಅಂತಿಮ ಕಾರಣ ಸದಾ ಜನಸಮೂಹಗಳ ಬಡತನ ಮತ್ತು ಸೀಮಿತ ಬಳಕೆ ಸಾಮರ್ಥ್ಯ.

ಸಮಾಜವಾದಕ್ಕೆ ಪರಿವರ್ತನೆ

ಉತ್ಪಾದನಾ ಸಾಧನಗಳ ಕೇಂದ್ರೀಕರಣ ಮತ್ತು ಶ್ರಮಶಕ್ತಿಯ ಸಾಮಾಜಿಕೀಕರಣದ ನಡುವಿನ ವೈರುಧ್ಯ ಎಂತಹ ಮಟ್ಟ ತಲುಪುತ್ತದೆಯೆಂದರೆ 'ಬಂಡವಾಳಶಾಹಿ ತೊಗಟೆ' ಕಿತ್ತು ಹೋಗುತ್ತದೆ. 'ಬಂಡವಾಳಶಾಹಿ ಖಾಸಗಿ ಆಸ್ತಿಯ ಸಾವಿನ ಗಂಟೆ ಬಾರಿಸುತ್ತದೆ. ಕಿತ್ತುಕೊಂಡವರಿಂದ ಕಿತ್ತುಕೊಳ್ಳುವ ಕ್ರಿಯೆ ನಡೆಯುತ್ತದೆ? ಎಂದು ಇದನ್ನು ವರ್ಣಿಸಿದ್ದಾರೆ ಮಾರ್ಕ್ಸ್.

ಆದರೆ ಸಮಾಜವಾದಕ್ಕೆ ಈ ಪರಿವರ್ತನೆ ತಂತಾನೇ ನಡೆಯದು. ಇದನ್ನು ಕಾರ್ಮಿಕ ವರ್ಗದ ಕ್ರಾಂತಿ ಮಾಡುತ್ತದೆ. ಕಾರ್ಮಿಕ ವರ್ಗವೇ ಏಕೆ? ಏಕೆಂದರೆ ಈ ವರ್ಗ 'ಅತ್ಯಂತ ಮಹಾನ್ ಸ್ವರೂಪದ ಉತ್ಪಾದನಾ ಶಕ್ತಿ'. ಅಲ್ಲದೆ ಉತ್ಪಾದನಾ ಶಕ್ತಿಗಳು ಮತ್ತು ಉತ್ಪಾದನಾ ಸಂಬಂಧಗಳ ನಡುವಿನ ತಿಕ್ಕಾಟದಲ್ಲಿ ಅತಿ ಹೆಚ್ಚು ಸಂಕಟ ಪಡುವುದು ಇದೇ ವರ್ಗ. ಉತ್ಪಾದನಾ ಸಂಬಂಧಗಳ ಸಾಮಾಜಿಕೀಕರಣವೇ ಈ ವರ್ಗದ ಹಿತಾಸಕ್ತಿಗಳನ್ನು ಈಡೇರಿಸ ಬಲ್ಲದು.

ಮೂಲತಃ ಮಾರ್ಕ್ಸ್ ಕ್ರಾಂತಿಗಳು ಅತ್ಯಂತ ಮುಂದುವರೆದ ದೇಶಗಳಲ್ಲಿ, ಅಂದರೆ ಬ್ರಿಟನ್, ಜರ್ಮನಿ, ಫ್ರಾನ್ಸ್‌ನಲ್ಲಿ ಸಂಭವಿಸಬಹುದು ಎಂದು ನಿರೀಕ್ಷಿಸಿದ್ದರು. ಆದರೆ ಜೀವನದ ಕೊನೆಯ ವೇಳೆಗೆ ಇದು ಬಂಡವಾಳಶಾಹಿ ಜಗತ್ತಿನ ಅಂಚಿನಲ್ಲಿರುವ ದೇಶಗಳಲ್ಲಿ, ವಿಶೇಷವಾಗಿ ರಶ್ಯಾದಲ್ಲಿ ನಡೆಯಬಹುದು, ಕ್ರಾಂತಿಯ ಸ್ಫೋಟಕವಾಗಿ ಕೆಲಸ ಮಾಡಬಹುದು ಎಂದಿದ್ದರು. ಬಂಡವಾಳಶಾಹಿ ಜಗತ್ತಿನ ರಶ್ಯದಲ್ಲಿ ಈ 'ದುರ್ಬಲ ಕೊಂಡಿ' ಯನ್ನು ಗುರುತಿಸಿದ್ದು ಮತ್ತು ಒಂದು ಯಶಸ್ವಿ ಕ್ರಾಂತಿ ನಡೆಸಿದ್ದು



ಲೆನಿನ್‌ರವರ ಕೊಡುಗೆ.

ಶ್ರಮಜೀವಿ ವರ್ಗದ ಸರ್ವಾಧಿಕಾರ

ಈ ಕೇಂದ್ರೀಕೃತ, ಪರಾವಲಂಬಿ ಪ್ರಭುತ್ವವ
ಕಿತ್ತೊಗೆದ ನಂತರ ಸ್ಥಾಪಿಸುವ ಪ್ರಭುತ್ವ ಯ
ಹೇಗಿರುತ್ತದೆ? ಅದು ಕಾರ್ಮಿಕ ವರ್ಗದ ನೇತೃತ್ವ
ಇರುತ್ತದೆ. ಅದು ಉತ್ಪಾದನಾ ಸಾಧನಗಳನ್ನು ಕ್ರಮ
ಸಾಮಾಜಿಕ ಒಡೆತನಕ್ಕೆ ತರುತ್ತದೆ. ಮಾರ್ಕ್ಸ್ ಇದ
'ಶ್ರಮಜೀವಿ ವರ್ಗದ ಸರ್ವಾಧಿಕಾರ'ಎಂದರು.
ಪರಿಕಲ್ಪನೆಯಲ್ಲಿ ಬೃಹತ್ ಹೋರಾಟಗಳ ಮ
ವಿಜಯಗಳ ಮತ್ತು ಜನಸಮೂಹಗಳಿಗೆ ಹೆಚ್ಚಿ
ಪ್ರಜಾಪ್ರಭುತ್ವದ ಕಣ್ಣೋಟ ಅಡಕವಾಗಿದೆ. ಇ
ಕೂಡಾ ಎಲ್ಲಾ ವರ್ಗಗಳ ನಿರ್ಮೂಲನಕ್ಕೆ, ಒಂ
ವರ್ಗರಹಿತ ಸಮಾಜದತ್ತ ಪರಿವರ್ತನೆ
ಹಂತವಷ್ಟೇ.

ಫ್ರಾನ್ಸಿನಲ್ಲಿ 1848-1852ರ ಅವಧಿಯಲ್ಲಿ ನಡ
ಘಟನೆಗಳು ಮತ್ತು ನಂತರ 1871ರಲ್ಲಿ ಪ್ಯಾರಿ
ಕಮ್ಯೂನ್‌ನ ಹಿನ್ನೆಲೆಯಲ್ಲಿ ಮಾರ್ಕ್ಸ್ ಕಾರ್ಮಿ
ವರ್ಗದ ನೇತೃತ್ವದ ಪ್ರಭುತ್ವದ ಸ್ವರೂಪವನ್ನು, ಅದ
ಕೆಲಸಗಳನ್ನು ವಿವರಿಸಿದರು. ಸಮಾಜವಾದ
ಪರಿವರ್ತನೆಯಾಗುವಾಗ ರೂಪುಗೊಳ್ಳುವ ಪ್ರಭು
ಮೂಲಭೂತವಾಗಿ ಒಂದು ಹೊಸ ಮಾದರಿಯ
ಪ್ರಭುತ್ವ. ಅದು ಹಳೆ ಪರಿಕಲ್ಪನೆಯ ಪ್ರಭುತ್ವವ
ಏಕೆಂದರೆ ಅದು ಹಳೆಯ ಪ್ರಭುತ್ವವನ್ನು ಪುಡಿಗು
ಕಾರ್ಯಾಂಗ ಮತ್ತು ಅಧಿಕಾರಶಾಹಿಯ ಮೇ
ಜನತೆಯ ಹತೋಟಿಯ ಸ್ವರೂಪಗಳನ್ನು ವಿಕಾ
ಗೊಳಿಸುತ್ತದೆ. ಇದು ಎಲ್ಲಾ ಕೇಂದ್ರೀಯ ರಾಜಕೀಯ
ಅಧಿಕಾರದ ನಿರ್ಮೂಲನಕ್ಕೆ ಅನುಗುಣವಾಗಿರುತ್ತ

ಇಂದಿನ ಸಂದರ್ಭದಲ್ಲಿ

ಆದರೆ ಇಂದು ಸಾಮಾಜಿಕ ಪರಿವರ್ತನೆಯ
ತರುವವರು ಯಾರು? ಇದನ್ನು ನೋಡಲು ಮೊದ
'ಶ್ರಮಜೀವಿ' ಎಂಬ ಪದವನ್ನು ಪರಿಶೀಲಿಸೋಣ
ಮಾರ್ಕ್ಸ್ ಕಾಲದಲ್ಲಿ ಇದರ ಅರ್ಥ ಕೈಗಾರಿಕ
ಶ್ರಮಜೀವಿಗಳು. ಇವರು ಬಹುಪಾಲು ದೈಹಿಕ ಶ್ರಮ
ಮಾಡುತ್ತಿದ್ದವರು. ಆದರೆ ಮಾರ್ಕ್ಸ್ ಇಷ್ಟಕ್ಕೇ ಅದನ್ನ
ಸೀಮಿತಗೊಳಿಸಿರಲಿಲ್ಲ. ಸಮಾಜದಲ್ಲಿ ಧ್ರುವೀಕರಣ
ನಡೆದು ಹೆಚ್ಚೆಚ್ಚು ಮಂದಿಯ 'ಶ್ರಮಜೀವೀಕರಣ
ವಾಗುತ್ತದೆ ಎಂದು ಅವರು ಹೇಳುತ್ತಿದ್ದರು. ಅಂದ
ಹಣಕಾಸು ಸಂಸ್ಥೆಗಳಲ್ಲಿ ದುಡಿಯುತ್ತಿರಲಿ, ಸರಕಾ
ಯಂತ್ರದಲ್ಲಿ, ವಾಣಿಜ್ಯ ಸಂಸ್ಥೆಗಳಲ್ಲಿ ದುಡಿಯುತ್ತಿರ
ಅಥವಾ ಅತ್ಯಂತ ಆಧುನಿಕ ಹಾಗೂ ಯಾಂತ್ರೀಕೃ
ಉದ್ದಿಮೆಗಳಲ್ಲಿ ದುಡಿಯುತ್ತಿರಲಿ-ಸಾಮಾಜಿ
ಉತ್ಪಾದನಾ ಪ್ರಕ್ರಿಯೆಯಲ್ಲಿ ಬಹುಪಾಲು ಮಂದ
ತಮ್ಮ ಬದುಕಿನ ಮೇಲೆ ಹತೋಟಿ ಕಳಕೊಳ್ಳುತ್ತಾ
ಹೋಗಿ ಶ್ರಮಜೀವಿಗಳಂತಾಗುತ್ತಾರೆ. ಇವರಲ್ಲಿ
ಕೆಲವರು, ಮುಖ್ಯವಾಗಿ ಅಧಿಕಾರಿಗಳು
ಫೋರ್‌ಮನ್‌ಗಳು ಮುಂತಾದವರು
ಬಂಡವಾಳಶಾಹಿಯ ಆರಂಭಿಕ ಘಟ್ಟಗಳಲ್ಲಿ ದೈಹಿ

ಪುಟ 15 ಕ

ಕರ್ನಾಟಕದಲ್ಲಿ ಹಸಿವು ಹೆಚ್ಚುತ್ತಿದೆಯೇ?



ಕರ್ನಾಟಕ ದೇಶದಲ್ಲಿ ಹಲವು ಬೆಳವಣಿಗೆಯ ಸೂಚಕಗಳಲ್ಲಿ ಅಭಿವೃದ್ಧ ರಾಜ್ಯ ಎನ್ನಿಸಿಕೊಂಡಿದೆ. ಆದರೆ ಅದರ ಹಸಿವಿನ ಮತ್ತು ಆಹಾರ ಅಭದ್ರತೆಯ ಪರಿಸ್ಥಿತಿ ಅದಕ್ಕೆ ಅನುಗುಣವಾಗಿಲ್ಲ. 2008 ರ ಹಸಿವಿನ ಸೂಚಕ, ಸ್ವಾಮಿನಾಥನ್ ಫೌಂಡೇಶನ್‌ನ ಆಹಾರ ಅಭದ್ರತೆ ವರದಿ ಮತ್ತು ಮಾನವ ಅಭಿವೃದ್ಧಿ ವರದಿ 2005 - ಇವು ಕರ್ನಾಟಕದಲ್ಲಿ ಹಸಿವಿನ ಪರಿಸ್ಥಿತಿ ಗಂಭೀರವಾಗಿದೆ ಎಂದು ಸೂಚಿಸುತ್ತದೆ. ಹಸಿವಿನ ಸೂಚಕದಲ್ಲಿ ಭಾರತದ 17 ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕ 11 ನೇ ಸ್ಥಾನದಲ್ಲಿದೆ. ಕಳೆದ ಸುಮಾರು ಹತ್ತು ವರ್ಷಗಳಲ್ಲಿ ಪರಿಸ್ಥಿತಿ ಇನ್ನಷ್ಟು ಕೆಟ್ಟಿದೆ ಎಂಬುದು ಇನ್ನೂ ಆತಂಕಕಾರಿ. 1995 ರಲ್ಲಿ ಹಸಿವಿನ ಸೂಚಕದ ಮೂರು ಅಂಶಗಳ ಮೇಲೆ ಆಧಾರಿತ 'ವಿಸ್‌ಮನ್ ಸೂಚಕ' ದಲ್ಲಿ ಕರ್ನಾಟಕ 9 ನೇ ಸ್ಥಾನದಲ್ಲಿ ಇದ್ದು ಎರಡು ಸ್ಥಾನ ಕೆಳಗೆ ಬಂದಿದೆ. ಇದೇ ಅವಧಿಯಲ್ಲಿ ತಮಿಳುನಾಡು, ಮಹಾರಾಷ್ಟ್ರ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಪರಿಸ್ಥಿತಿ ಗಮನಾರ್ಹವಾಗಿ ಉತ್ತಮಗೊಂಡಿದೆ. ಕರ್ನಾಟಕಕ್ಕಿಂತ ಅವು ಮೇಲೆ ಹೋಗಿವೆ ಎಂದು ಗಮನಿಸಬೇಕು. ತಮಿಳುನಾಡು 12 ನೇ ಸ್ಥಾನದಿಂದ 6 ನೇ ಸ್ಥಾನಕ್ಕೆ, ಅಸ್ಸಾಂ 14 ನೇ ಸ್ಥಾನದಿಂದ 4 ನೇ ಸ್ಥಾನಕ್ಕೆ ಮತ್ತು ಮಹಾರಾಷ್ಟ್ರ 13 ನೇ ಸ್ಥಾನದಿಂದ 10 ನೇ ಸ್ಥಾನಕ್ಕೆ ಹೋಗಿವೆ. ಅಲ್ಲದೆ ಕರ್ನಾಟಕ ರಾಜ್ಯದ ತಲಾ ಆದಾಯದಲ್ಲಿ 7ನೇ ಸ್ಥಾನದಲ್ಲಿ (2004 ಅಂಕಿ ಸಂಖ್ಯೆ), ಒಟ್ಟು ತಲಾ ಉತ್ಪಾದನೆಯ ವಾರ್ಷಿಕ (2000 ರಿಂದ 2004 ರ ಅವಧಿಯಲ್ಲಿ) ಬೆಳವಣಿಗೆ ದರದಲ್ಲಿ 8 ನೇ ಸ್ಥಾನದಲ್ಲಿ ಇದೆ.

ಹಸಿವಿನಿಂದ ಬಳಲುವ (1632 ಕ್ಯಾಲೋರಿ ಸಹ ಪಡೆಯದ) ಜನರ ಪ್ರಮಾಣ 2008 ರಲ್ಲಿ ಕರ್ನಾಟಕದಲ್ಲಿ ಶೇ. 28.1 ಇತ್ತು. ಅಂದರೆ ಕರ್ನಾಟಕದ ನಾಲ್ವರಲ್ಲಿ ಒಬ್ಬ ವ್ಯಕ್ತಿ ಹಸಿವಿನಿಂದ ಬಳಲುತ್ತಿದ್ದಾನೆ. ಇದು ಸರಾಸರಿ ಭಾರತದ ಪರಿಸ್ಥಿತಿಗಿಂತ (ಶೇ. 20) ಇನ್ನೂ ಕೆಟ್ಟದು. ಕರ್ನಾಟಕದ ಸಾವಿರ (5 ವರ್ಷಕ್ಕಿಂತ ಕಡಿಮೆ) ಮಕ್ಕಳಲ್ಲಿ 55 ಸಾಯುತ್ತವೆ. ಸಾವಿರ (5 ವರ್ಷಕ್ಕಿಂತ ಕಡಿಮೆ) ಮಕ್ಕಳಲ್ಲಿ 376 ಮಕ್ಕಳು ಕನಿಷ್ಠ ತೂಕ ಸಹ ಹೊಂದಿಲ್ಲ. ಅಂದರೆ ಪೋಷಕಾಂಶಗಳ ಅಭಾವದಿಂದ ನರಳುತ್ತಿವೆ. ಒಟ್ಟಾರೆ ಹಸಿವಿನ ಸೂಚಕ (ಈ ಮೂರರ ಸರಾಸರಿ) 23.73 ಇದು ಸಹ ಸರಾಸರಿ ಭಾರತದ ಪರಿಸ್ಥಿತಿಗಿಂತ (23.3) ಇನ್ನೂ ಕೆಟ್ಟದು.

ಸ್ವಾಮಿನಾಥನ್ ಫೌಂಡೇಶನ್‌ನ ಗ್ರಾಮೀಣ ಆಹಾರ ಅಭದ್ರತೆ ವರದಿ ಪ್ರಕಾರ ಹಸಿವಿನಿಂದ ಬಳಲುವ (1890 ಕ್ಯಾಲೋರಿ ಸಹ ಪಡೆಯದ) ಜನರ ಪ್ರಮಾಣ ಕರ್ನಾಟಕದಲ್ಲಿ ಹಿಂದಿನಕ್ಕಿಂತ ಹೆಚ್ಚಿದೆ. ಅದೇ ರೀತಿ ಮಹಿಳೆಯರಲ್ಲಿ (15-49 ವಯಸ್ಸಿನ) ರಕ್ತಹೀನತೆ ಹೆಚ್ಚಿರುವ ರಾಜ್ಯಗಳಲ್ಲಿ ಕರ್ನಾಟಕಒಂದು. ಪೋಷಕಾಂಶಗಳ ಅಭಾವದಿಂದ ನರಳುತ್ತಿರುವ ಗ್ರಾಮೀಣ ಮಕ್ಕಳ ಸಂಖ್ಯೆ ನೂರಕ್ಕೆ 39 ರಿಂದ 43ಕ್ಕೆ ಏರಿದೆ. ಈ ವರದಿಯ ಪ್ರಕಾರ ಕನಾಟಕದ ಹಸಿವಿನ ಪರಿಸ್ಥಿತಿಯ ಅಂಕೆಸಂಖ್ಯೆಗಳು ಮತ್ತು ಚಿತ್ರಣವನ್ನು ಅನುಬಂಧ-1 ರಲ್ಲಿ ಕೊಡಲಾಗಿದೆ.

ಮಾನವ ಅಭಿವೃದ್ಧಿ ವರದಿ 2005 ಪ್ರಕಾರ ಕರ್ನಾಟಕದಲ್ಲಿ ಯಾವುದೇ ರೀತಿಯ ರಕ್ತಹೀನತೆಯಿರುವ (3 ವರ್ಷಕ್ಕಿಂತ ಕಡಿಮೆ ವಯಸ್ಸಿನ) ಮಕ್ಕಳ ಸಂಖ್ಯೆ ನೂರಕ್ಕೆ 71. ಯಾವುದೇ ರೀತಿಯ ರಕ್ತಹೀನತೆಯಿರುವ (15 ರಿಂದ 39 ವಯಸ್ಸಿನ) ಮಹಿಳೆಯರ ಸಂಖ್ಯೆ ನೂರಕ್ಕೆ 42. ಅದು ಕಡಿಮೆ ಆದಾಯದ ಮತ್ತು ಹದಿ ಹರೆಯದ (15-19) ಮಹಿಳೆಯರಲ್ಲಿ ನೂರಕ್ಕೆ 50 (ಅಂದರೆ ಅರ್ಧ)ಕ್ಕಿಂತಲೂ ಹೆಚ್ಚು. ಪ್ರಾದೇಶಿಕ ಅಸಮಾನತೆ ಸಹ ಇದೆ. ದಕ್ಷಿಣ ಕನ್ನಡದಲ್ಲಿ ಮಕ್ಕಳ ಮರಣ ಪ್ರಮಾಣ ಸಾವಿರಕ್ಕೆ 45 ಇದೆ. ಬೀದರ, ಬಿಜಾಪುರ, ಗುಲ್ಬರ್ಗ, ಕೊಪ್ಪಳ, ಹಾವೇರಿ, ಗದಗ, ಧಾರವಾಡ ಜಿಲ್ಲೆಗಳಲ್ಲಿ 65 ಕ್ಕೂ ಹೆಚ್ಚಿದೆ. ನಗರಗಳಲ್ಲಿ 56 ಇದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ 96 ಇದೆ. ಪರಿಶಿಷ್ಟ ಜಾತಿ/ಪಂಗಡ ಮತ್ತು ಕೆಳ ಆದಾಯದ ಕುಟುಂಬಗಳಲ್ಲಿ 100 ಕ್ಕೂ ಹೆಚ್ಚಿದೆ. ಮೂರೂ(ಸುರಕ್ಷಿತ ಕುಡಿಯುವ ನೀರು, ಶೌಚಾಲಯ, ವಿದ್ಯುಚ್ಛಕ್ತಿ) ಮೂಲ ಸೌಕರ್ಯ ಹೊಂದಿರುವ ಕುಟುಂಬಗಳ ಪ್ರಮಾಣ ಒಟ್ಟಾರೆ ನೂರಕ್ಕೆ 35. ಆದರೆ ನಗರದಲ್ಲಿ ನೂರಕ್ಕೆ 73 ಇದ್ದರೆ ಗ್ರಾಮೀಣ ಪ್ರದೇಶದಲ್ಲಿ 15 ಇದೆ. ಗ್ರಾಮೀಣ ಪ್ರದೇಶದಲ್ಲಿ ಸಹ ಉಡುಪಿ ಜಿಲ್ಲೆಯಲ್ಲಿ ನೂರಕ್ಕೆ 44 ಕುಟುಂಬಗಳು ಮೂರೂ ಸೌಕರ್ಯ ಹೊಂದಿದ್ದರೆ ಬಿಜಾಪುರ, ಬೀದರ, ಗುಲ್ಬರ್ಗ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ 5 ಕ್ಕೂ ಕಡಿಮೆ ಕುಟುಂಬಗಳು ಹೊಂದಿವೆ.



ಇವು ವಸಂತರಾಜ್ .ಎನ್.ಕೆ ಅವರ 'ಹಸಿವಿನ ಸಾಮ್ರಾಜ್ಯಕ್ಕೆ ಕೊನೆಯೆಂತು?' ಪುಸ್ತಕದ ಆಯ್ದ ಭಾಗ. ಹಸಿವಿನ ಸಂಕಟಗಳ ಅನಾವರಣ

ಸ್ವಾಮಿನಾಥನ್ ಫೌಂಡೇಷನ್ ವರದಿ ಪ್ರಕಾರ

ಕರ್ನಾಟಕದಲ್ಲಿ ಆಹಾರ ಅಭದ್ರತೆ

ಗ್ರಾಮೀಣ ಕರ್ನಾಟಕದ ಹಸಿವಿನ ಪರಿಸ್ಥಿತಿಯ ಒಟ್ಟು ಚಿತ್ರಣವನ್ನು ಎಂ.ಎಸ್. ಸ್ವಾಮಿನಾಥನ್ ಸಂಶೋಧನಾ ಫೌಂಡೇಶನ್ ವಿಶ್ವ ಆಹಾರ ಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮದ ಸಹಯೋಗದೊಂದಿಗೆ ತಯಾರಿಸಿದ 'ಗ್ರಾಮೀಣ ಆಹಾರ ಅಭದ್ರತೆ ವರದಿ'ಯಷ್ಟು ವಿವರವಾಗಿ ಮತ್ತು ವಿಶ್ಲೇಷಣಾತ್ಮಕವಾಗಿ ಯಾವ ಬೇರೆ ದಾಖಲೆ ಸೆರೆ ಹಿಡಿದಿಲ್ಲ. ಫೌಂಡೇಶನ್ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಪ್ರತ್ಯೇಕ ವರದಿ ತಯಾರಿಸುವ ಮೂಲಕ ಆಹಾರ ಅಭದ್ರತೆಯ ಸಮಸ್ಯೆಯ ವಿಭಿನ್ನ ಆಯಾಮಗಳಿಗೆ ಒತ್ತು ಕೊಡಿದೆ. ಸಮಸ್ಯೆಯ ಪರಿಹಾರಕ್ಕೆ ಶಿಫಾರಸುಗಳನ್ನು ಮಾಡಿದೆ.

ಈ ವರದಿಯು ಕರ್ನಾಟಕದ ಬಗೆಗಿನ ವಿವರಗಳನ್ನು ಜತೆಗೆ ಕೊಟ್ಟಿರುವ ಕೋಷ್ಟಕದಲ್ಲಿ ಕೊಡಲಾಗಿದೆ. ಆಹಾರ ಅಭದ್ರತೆಯ ತೀವ್ರತೆಯನ್ನು ಖಚಿತವಾಗಿ ಕೊಡುವ ಏಳು ಪ್ರಮುಖ ಅಂಶಗಳ ಅಂಕೆಸಂಖ್ಯೆಗಳನ್ನು ಈ ಕೋಷ್ಟಕದಲ್ಲಿ ಕೊಡಲಾಗಿದೆ. ಪ್ರತೀ ಪ್ರಮುಖ ಅಂಶದ ಕರ್ನಾಟಕದ ಅಂಕೆ-ಸಂಖ್ಯೆ ಜತೆ ಹೋಲಿಸಲು ಅನುಕೂಲವಾಗುವಂತೆ ರಾಷ್ಟ್ರೀಯ ಸರಾಸರಿ, ಅತೀ ಉತ್ತಮ ರಾಜ್ಯ, ಅತೀ ನಿಕೃಷ್ಟ ರಾಜ್ಯಗಳ' ಅಂಕೆ-ಸಂಖ್ಯೆ, ದೇಶದಲ್ಲಿ ಕರ್ನಾಟಕದ ರ್‍ಯಾಂಕ್/ಸ್ಥಾನ, ಅಭದ್ರತೆಯ ಮಟ್ಟಗಳನ್ನು ಟಿಪ್ಪಣಿಗಳೊಂದಿಗೆ ಕೊಡಲಾಗಿದೆ. 1990 ರ ಮತ್ತು ಈ ದಶಕದ ಇತ್ತೀಚಿನ ಎರಡು ಅಂಕೆ-ಸಂಖ್ಯೆಗಳನ್ನು ಕೊಟ್ಟು ಸುಮಾರು ಒಂದು ದಶಕದಲ್ಲಿ ಆದ ಪ್ರಗತಿ ಅಥವಾ ಹಿನ್ನಡೆಯನ್ನು ಗುರುತಿಸಲಾಗಿದೆ. ಈ ವರದಿಯ ಅಂಕೆಸಂಖ್ಯೆಗಳ ಮೂಲ 1991/2001 ರ ಜನಗಣತಿ; 50, 55 ಮತ್ತು 61 ನೇ ಸುತ್ತಿನ ರಾಷ್ಟ್ರೀಯ ಸ್ಯಾಂಪಲ್ ಸರ್ವೇ ಸಂಸ್ಥೆ ನಡೆಸಿದ ಸರ್ವೇ; ಮತ್ತು 2 ಮತ್ತು 3 ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೇ.

ಈ ಏಳು ಪ್ರಮುಖ ಅಂಶಗಳಲ್ಲದೆ ಅವುಗಳನ್ನು ಸೇರಿಸಿ ಮಾಡಿದ ಒಟ್ಟಾರೆ ಆಹಾರ ಅಭದ್ರತೆ ಸೂಚಕ, ಆಹಾರ ಅಭದ್ರತೆಗೆ ಪ್ರಮುಖ ಪರಿಹಾರ ಕ್ರಮಗಳಾದ ರೇಶನ್ ವ್ಯವಸ್ಥೆ, ಸಮಗ್ರ ಶಿಶು ಕಲ್ಯಾಣ ಯೋಜನೆ (ಐ.ಸಿ.ಡಿ.ಎಸ್.) ಮತ್ತು ಶಾಲಾ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮಗಳ ಜಾರಿಯ ಇಂದಿನ ಪರಿಸ್ಥಿತಿಯ ಅಂಕೆ-ಸಂಖ್ಯೆಗಳನ್ನು ಕೊಡಲಾಗಿದೆ. ಇವುಗಳಲ್ಲಿ ಕೂಡಾ ಇತರ ರಾಜ್ಯಗಳ ಜತೆ ಹೋಲಿಕೆ ಮತ್ತು ಪ್ರಗತಿ/ಹಿನ್ನಡೆ ಮೂಲಕ ಸ್ಥಿತಿಯ ನಿಖರ ಅಂದಾಜು ಕೊಡಲಾಗಿದೆ. ಇಲ್ಲಿ ಕೊಟ್ಟಿರುವ ಅಂಕೆ-ಸಂಖ್ಯೆಗಳು ಗ್ರಾಮೀಣ ಪ್ರದೇಶಗಳಿಗೆ ಮಾತ್ರ ಸಂಬಂಧಿಸಿದ್ದರಿಂದ ಒಟ್ಟಾರೆ ರಾಜ್ಯದ (ನಗರ ಪ್ರದೇಶ ಸೇರಿದಂತೆ) ಅಂಕೆ-ಸಂಖ್ಯೆಗಳಿಗಿಂತ ಹೆಚ್ಚು ಗಂಭೀರ ಆತಂಕ ಉಂಟು ಮಾಡುವಂಥದು. ಗ್ರಾಮ-ನಗರ ಪ್ರದೇಶಗಳ ನಡುವೆ ಇರುವ ತೀವ್ರ ಅಸಮಾನತೆಯಿಂದ ಬೆಚ್ಚಿ ಬೀಳಿಸುವಂಥದು.

ಈ ಅಂಕೆಸಂಖ್ಯೆಗಳಿಂದ ಕೆಳಗಿನ ಪ್ರಮುಖ ಅಂಶಗಳನ್ನು ಗುರುತಿಸಬಹುದು:

- ಕನಿಷ್ಟ (1890 ಕ್ಯಾಲೋರಿಗಿಂತ ಕಡಿಮೆ) ಆಹಾರದ ಕೊರತೆ ಇರುವ ಗ್ರಾಮೀಣ ಕರ್ನಾಟಕದ ಜನರ ಸಂಖ್ಯೆ ಪ್ರತಿ ನೂರಕ್ಕೆ 20.5% ಅಂದರೆ ಪ್ರತೀ ಗ್ರಾಮೀಣ ಕರ್ನಾಟಕದ ಐದು ಕುಟುಂಬಗಳಲ್ಲಿ ಒಂದು ಕುಟುಂಬ ಹಸಿವಿನ ಅಂಚಿನಲ್ಲಿ ಬದುಕುತ್ತಿದೆ.
- ರಕ್ತಹೀನತೆಯಿಂದ ಬಳಲುತ್ತಿರುವ ಮದುವೆಯಾದ (15 ರಿಂದ 49ವಯಸ್ಸಿನ) ಮಹಿಳೆಯರ ಸಂಖ್ಯೆ ಪ್ರತಿ ನೂರಕ್ಕೆ 52.5
- ಅಂದರೆ ಕುಟುಂಬದ ಪ್ರಮುಖ ಹೊಣೆ ಹೊತ್ತ ಗ್ರಾಮೀಣ ಕರ್ನಾಟಕದ ಮಹಿಳೆಯರ ಅರ್ಧದಷ್ಟು ರಕ್ತಹೀನತೆಯಿಂದ ಬಳಲುತ್ತಿರುವ ಭೀಕರ ಸ್ಥಿತಿ ಇದೆ. ಇದು ಆಹಾರ ಮತ್ತು ಪೌಷ್ಟಿಕಾಂಶದ ತೀವ್ರ ಅಭಾವ, ಕುಟುಂಬದ ಆದಾಯ/ಉದ್ಯೋಗದ ಕೊರತೆ ಮತ್ತು ಅಭದ್ರತೆ, ಆಹಾರ/ಆರೋಗ್ಯ ಸೇವೆಗಳಲ್ಲಿ ತೀವ್ರ ಲಿಂಗ-ತಾರತಮ್ಯ, ಹೆರಿಗೆ/ಬಾಣಂತನದ ಅವಧಿಯಲ್ಲಿ ಅಗತ್ಯ ಗಮನದ ಅಭಾವ, ಇವನ್ನು ಪರಿಹರಿಸಲು ಪ್ರಯತ್ನಿಸದ ಅಥವಾ ಸಮಸ್ಯೆ ಉಲ್ಬಣಗೊಳಿಸುವ ಸರ್ಕಾರದ ತಪ್ಪು ನೀತಿಗಳ ಒಟ್ಟು ಪರಿಣಾಮ
- ಸತತ ಮತ್ತು ತೀವ್ರ ನಿಶ್ಶಕ್ತಿಯಿಂದ

ಪುಟ 10ಕ್ಕೆ

ವಿಧಾನಸಭಾ ಚುನಾವಣೆಗಳು : ಬಿಜೆಪಿ ಅಧೋಗತಿ

ದೇಶದ ಕೆಲವು ರಾಜ್ಯಗಳಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳ ಫಲಿತಾಂಶ ಹೊರಬಿದ್ದು ಬಹುತೇಕ ಅಲ್ಲೀಗ ಹೊಸ ಸರ್ಕಾರಗಳು ಅಧಿಕಾರಕ್ಕೇರಿವೆ.

ಈ ಚುನಾವಣಾ ಫಲಿತಾಂಶಗಳಲ್ಲಿ ಗಮನಿಸಬೇಕಾದ ಕೆಲವು ಅಂಶಗಳಿವೆ. ಮಹಾರಾಷ್ಟ್ರ, ಅರುಣಾಚಲ ಪ್ರದೇಶ ಮತ್ತು ಹರ್ಯಾಣಗಳಲ್ಲಿ ಅಲ್ಲಿನ ವಿಧಾನಸಭಾ ಚುನಾವಣೆಗಳು ನಡೆದವು. ಈ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ಮರಳಿ ಅಧಿಕಾರ ಹಿಡಿದಿವೆ ಎಂಬುದು ಈಗಾಗಲೇ ಗೊತ್ತಿರುವ ಸಮಾಚಾರ. ಮಹಾರಾಷ್ಟ್ರದಲ್ಲಿ ಸತತ ಮೂರನೇ ಬಾರಿಗೆ ಬಿಜೆಪಿ, ಶಿವಸೇನೆ ಮೈತ್ರಿಯು ಜನರಿಂದ ತಿರಸ್ಕಾರಕ್ಕೆ ಗುರಿಯಾಗಿದೆ ಎನ್ನುವುದು ಮುಖ್ಯವಾದ ಅಂಶ. ಬಾಳಾ ಠಾಕ್ರೆಯ ಅಳಿಯ ರಾಜ್ ಠಾಕ್ರೆ ಈ ಬಾರಿ ಶಿವಸೇನೆಯೊಂದಿಗೆ ಇಲ್ಲ. ಪ್ರತ್ಯೇಕ ಪಕ್ಷ ರಚಿಸಿ ಮಹಾರಾಷ್ಟ್ರ ನವ ನಿರ್ಮಾಣ ಸೇನೆ-ಎಂ.ಎನ್ ಎಂಬ ಪಕ್ಷ ರಚಿಸಿದ ನಂತರ ಮೊದಲ ಬಾರಿಗೆ ಈ ಪಕ್ಷ ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ಇದರಿಂದ ಶಿವಸೇನೆ ಬಿಜೆಪಿ ಮತ ಒಡೆದು ಕಾಂಗ್ರೆಸ್, ಎನ್‌ಸಿಪಿ ಕೂಟಕ್ಕೆ ಲಾಭವಾಗಿದೆ ಎಂಬ ವಾದಗಳಿದ್ದಾಗಲೂ ಬಿಜೆಪಿ-ಶಿವಸೇನೆಯ ವೈಫಲ್ಯ ಗಮನಾರ್ಹವಾಗಿದೆ.

ಇನ್ನು ಅರುಣಾಚಲ ಪ್ರದೇಶದಲ್ಲಿ ಒಂದೊಮ್ಮೆ ಅಧಿಕಾರವನ್ನೇ ನಡೆಸಿದ್ದ ಬಿಜೆಪಿ ಈ ಬಾರಿ ಧೂಳಿಪಟವಾಗಿ ಹೋಗಿದೆ. ಅಲ್ಲಿ 2004 ರಲ್ಲಿ ಶೇ.28 ರಷ್ಟು ಮತ ಗಳಿಸಿದ್ದ ಬಿಜೆಪಿಗೆ ಈಗ ಸಿಕ್ಕಿರುವುದು ಕೇವಲ ಶೇ.5.21 ಮತಗಳು ಮಾತ್ರ. ಅಲ್ಲಿ ಕಾಂಗ್ರೆಸ್ ಪಕ್ಷ, ಟಿಎಂಸಿ ಪಕ್ಷದೊಂದಿಗೆ ಮರಳಿ ಅಧಿಕಾರ ಗಳಿಸಿದೆ.

ಹರ್ಯಾಣದಲ್ಲಿ 2005 ರಲ್ಲಿ ಕಾಂಗ್ರೆಸ್ ಪಕ್ಷ 67 ಸ್ಥಾನ ಗಳಿಸಿತ್ತು. ಇದೀಗ ಅದರ ಬಲ 40 ಕ್ಕೆ ಕುಸಿದಿದೆ. ಒಟ್ಟು 90 ಸ್ಥಾನಬಲದ ಹರ್ಯಾಣದಲ್ಲಿ ಕಾಂಗ್ರೆಸ್‌ಗೆ ಸರಳ ಬಹುಮತ ಕೂಡ ಸಿಕ್ಕಿಲ್ಲ. ಇಲ್ಲಿ ಬಿಜೆಪಿ ಗಳಿಸಿದ್ದು ಕೇವಲ 4 ಸ್ಥಾನ.

ಮಹಾರಾಷ್ಟ್ರದಲ್ಲಿ ಅಂಬೇಡ್ಕರ್‌ವಾದಿ ರಿಪಬ್ಲಿಕನ್ ಪಕ್ಷಗಳು, ಸಿಪಿಐ(ಎಂ), ಸಿಪಿಐ ಮುಂತಾದ ಎಡಪಕ್ಷಗಳು, ಎಸ್.ಪಿ, ಜೆಡಿ(ಎಸ್), ರೈತ ಕಾರ್ಮಿಕ ಪಕ್ಷ ಪಿ.ಡಬ್ಲ್ಯು.ಪಿ ಇತ್ಯಾದಿ ವಿವಿಧ ಪಕ್ಷಗಳು ಸೇರಿ ರಚಿಸಿಕೊಂಡಿದ್ದ ರಿಪಬ್ಲಿಕನ್ ಎಡ ಪ್ರಜಾಸತ್ತಾತ್ಮಕ ರಂಗ (RLDF) 11 ಸ್ಥಾನಗಳನ್ನು ಗಳಿಸಿದೆ. ಇದರಲ್ಲಿ ಸಿಪಿಐ (ಎಂ) ಪಕ್ಷ ಒಂದು ಸ್ಥಾನ ಗಳಿಸಿದೆ. ಬುಡಕಟ್ಟು ಜನರೇ ಹೆಚ್ಚಾಗಿರುವ ಥಾ[ಣೆ] ಜಿಲ್ಲೆಯ ದಹನು (ಎಸ್.ಟಿ) ಕ್ಷೇತ್ರದಿಂ[ದ] ರಾಜಾರಾಮ್ ಓಜಾರೆ ಆಯ್ಕೆಯಾಗಿದ್ದಾ[ರೆ.] ಕಲ್‌ವಾನ್ (ಎಸ್‌ಟಿ) ಹಾಗೂ ಸೊಲ್ಲಾಪುರ ಕೇಂ[ದ್ರ] ಕ್ಷೇತ್ರಗಳಲ್ಲಿ ಸಿಪಿಐ(ಎಂ) 2ನೇ ಸ್ಥಾನ ಗಳಿಸಿ[ದೆ.] ಸ್ಪರ್ಧಿಸಿದ ಒಟ್ಟು 20 ಕ್ಷೇತ್ರಗಳಲ್ಲಿ ಸಿಪಿಐ(ಎಂ) ಒ[...] 8 ರಲ್ಲಿ 10,000 ಕ್ಕೂ ಅಧಿಕ ಮತ ಗಳಿಸಿದೆ.

ಅಕ್ಟೋಬರ್ 28 ರಂದು ಕಾರ್ಮಿಕರ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನೇತೃತ್ವದಲ್ಲಿ ಕಾರ್ಮಿಕ ವಿರೋಧಿ, ದೇಶವಿರೋಧಿ ಧೋರಣೆಗಳನ್ನು ಖಂಡಿಸಿ ಬೆಂಗಳೂರಿನಲ್ಲಿ ನಡೆದ ರಾಜಭವನ ಚಲೋ ಪ್ರತಿಭಟನೆಯ ಚಿತ್ರ



....ಕರ್ನಾಟಕದಲ್ಲಿ ಆಹಾರ ಅಭದ್ರತೆ

ಪುಟ 9 ರಿಂದ

ಬಳಲುತ್ತಿರುವ ಮಹಿಳೆಯರ (15 ರಿಂದ 49 ವಯಸ್ಸಿನ) ಸಂಖ್ಯೆ ಪ್ರತಿ ನೂರಕ್ಕೆ 38.20

- ಅಂದರೆ ಕುಟುಂಬದ ಪ್ರಮುಖ ಹೊಣೆ ಹೊತ್ತ ಮೂವರು ಗ್ರಾಮೀಣ ಕರ್ನಾಟಕದ ಮಹಿಳೆಯರಲ್ಲಿ ಒಬ್ಬಾಕೆ ಸತತ ಮತ್ತು ತೀವ್ರ ನಿಶ್ಶಕ್ತಿಯಿಂದ ಬಳಲುತ್ತಿದ್ದಾಳೆ. ಇದು ಸಹ ಮೇಲೆ ಹೇಳಿದ ಕಾರಣಗಳ ಒಟ್ಟು ಪರಿಣಾಮ
- ರಕ್ತಹೀನತೆಯಿಂದ ಬಳಲುತ್ತಿರುವ (6 ರಿಂದ 35 ತಿಂಗಳ ವಯಸ್ಸಿನ) ಮಕ್ಕಳ ಸಂಖ್ಯೆ ಪ್ರತಿ ನೂರಕ್ಕೆ 84.3
- ಅಂದರೆ ಏಳು ಗ್ರಾಮೀಣ ಕರ್ನಾಟಕದ ಮಕ್ಕಳಲ್ಲಿ ಆರು ಮಕ್ಕಳು ರಕ್ತಹೀನತೆಯಿಂದ ಬಳಲುತಿದ್ದಾರೆ. ಇದು ಕುಟುಂಬಕ್ಕೆ ಆಹಾರ ಮತ್ತು ಪೌಷ್ಟಿಕಾಂಶದ ಕೊರತೆ ಮತ್ತು ತಾಯಿಯ ರಕ್ತಹೀನತೆಯ ನೇರ ಫಲ.
- ಬೆಳವಣಿಗೆ ಕುಂದಿರುವ (ಅದೇ ವಯಸ್ಸಿನ ಮಕ್ಕಳಿಗಿಂತ ಗಮನಾರ್ಹ ಕಡಿಮೆ ಎತ್ತರ-ತೂಕ ಇರುವ) ಮಕ್ಕಳ (6 ರಿಂದ 35 ತಿಂಗಳ ವಯಸ್ಸಿನ) ಸಂಖ್ಯೆ ಪ್ರತಿ ನೂರಕ್ಕೆ 43.30
- ಅಂದರೆ ಐದು ಗ್ರಾಮೀಣ ಕರ್ನಾಟಕದ ಮಕ್ಕಳಲ್ಲಿ ಎರಡು ಮಕ್ಕಳು ಬೆಳವಣಿಗೆ ಕುಂದಿರುವ ಸ್ಥಿತಿಗೆ ತಲುಪಿದ್ದಾರೆ. ಇದು ಕುಟುಂಬಕ್ಕೆ ಆಹಾರ ಮತ್ತು ಪೌಷ್ಟಿಕಾಂಶದ ಕೊರತೆ ಮತ್ತು ಸತತ ಮತ್ತು ತೀವ್ರ ನಿಶ್ಶಕ್ತಿಯಿಂದ ಬಳಲುತ್ತಿರುವ ತಾಯಂದಿರ ಗಂಭೀರ ಪರಿಸ್ಥಿತಿಯ ನೇರ ಫಲ.
- ಪ್ರಮುಖ ರೋಗ ಮತ್ತು ಅಕಾಲಿಕ ಸಾವಿಗೆ ಕಾರಣವಾದ ಸುರಕ್ಷಿತ ಕುಡಿಯುವ ನೀರು ಅಭಾವ ಕಾಡುತ್ತಿರುವ ಕುಟುಂಬಗಳ ಸಂಖ್ಯೆ ಪ್ರತಿ ನೂರಕ್ಕೆ 19.5 - ಅಂದರೆ ಪ್ರತೀ ಐದು ಗ್ರಾಮೀಣ ಕರ್ನಾಟಕದ ಕುಟುಂಬಗಳಲ್ಲಿ ಒಂದು ಕುಟುಂಬಕ್ಕೆ ಸುರಕ್ಷಿತ ಕುಡಿಯುವ ನೀರು ಸೌಲಭ್ಯ ಇಲ್ಲ
- ಹಲವು ರೋಗಗಳಿಗೆ ಕಾರಣವಾದ ನೈರ್ಮಲ್ಯದ ಅಭಾವದ ಪ್ರಮುಖ ಅಂಶವಾದ ಮನೆಯೊಳಗೆ ಶೌಚಾಲಯ ಇಲ್ಲದ ಕುಟುಂಬಗಳ ಪ್ರಮಾಣ ಪ್ರತಿ ನೂರಕ್ಕೆ 82.6 - ಅಂದರೆ ಪ್ರತೀ ಐದು ಗ್ರಾಮೀಣ ಕರ್ನಾಟಕದ ಕುಟುಂಬಗಳ 'ಲ್ಲಿ ನಾಲ್ಕು ಕುಟುಂಬಗಳಿಗೆ ಬಯಲೇ ಶೌಚಾಲಯ
- ಕರ್ನಾಟಕ ದೇಶದಲ್ಲಿ ಅಭಿವೃದ್ಧ ಮತ್ತು ಪ್ರಗತಿಪರ ರಾಜ್ಯಗಳಲ್ಲಿ ಒಂದು ಪರಿಗಣಿತವಾಗಿದ್ದರೂ ಇತ್ತೀಚಿನ ಅಂಕೆ ಸಂಖ್ಯೆ'ಗಳ ಪ್ರಕಾರ ಏಳು ಆಹಾರ ಅಭದ್ರತೆಯ ಅಂಕೆಸಂಖ್ಯೆ'ಗಳಲ್ಲಿ ನಾಲ್ಕರಲ್ಲಿ ಬಾರತದ ಸರಾಸರಿಗಿಂತ ಪರಿಸ್ಥಿತಿ ಕೆಟ್ಟದಿದೆ. 1990 ರ ಅಂಕೆಸಂಖ್ಯೆ'ಗಳಲ್ಲಿ ಮೂರು ಅಂಶಗಳಲ್ಲಿ ಮಾತ್ರ ಬಾರತದ ಸರಾಸರಿಗಿಂತ ಪರಿಸ್ಥಿತಿ ಕೆಟ್ಟದಿತ್ತು. ಅಂಧರೆ ಒಟ್ಬಾರೆಯಾಗಿ ಹಿನ್ನಡೆ ಕಂಡಿದೆ.
- ಏಳು ಆಹಾರ ಅಭದ್ರತೆಯ ಅಂಕೆಸಂಖ್ಯೆ'ಗಳಲ್ಲಿ ಆರು ಅಂಶಗಳಲ್ಲಿ ಕರ್ನಾಟಕದ ಅಖಿಲ ಭಾರತ ಸ್ಥಾನ/ರ್‍ಯಾಂಕ್ ನಲ್ಲಿ ಕೆಳಗೆ ಹೋಗಿದೆ.
- ಏಳು ಆಹಾರ ಅಭದ್ರತೆಯ ಅಂಕೆಸಂಖ್ಯೆಗಳಲ್ಲಿ ನಾಲ್ಕರಲ್ಲಿ ಕರ್ನಾಟಕ ಕಳೆದ ಒಂದು ದಶಕದಲ್ಲಿ ಪರಿಸ್ಥಿತಿ ಕೆಟ್ಟಿದೆ.
- ಒಟ್ಬಾರೆ ಆಹಾರ ಅಭದ್ರತೆಯ ಪರಿಸ್ಥಿತಿಯಲ್ಲಿ ಕಳೆದ ಒಂದು ದಶಕದಲ್ಲಿ ಹಿನ್ನಡೆ ಕಂಡ ದೇಶದ ಮೂರೇ ರಾಜ್ಯಗಳಲ್ಲಿ ಅತ್ಯಂತ ಹೆಚ್ಚಿನ ಹಿನ್ನಡೆ ಕಂಡ 'ಹೆಗ್ಗಳಿಕೆ' ಕರ್ನಾಟಕದ್ದು. ಇದೇ ದಶಕದಲ್ಲಿ ಕರ್ನಾಟಕ ಮತ್ತು ಬೆಂಗಳೂರು 'ಜಾಗತಿಕ ಐಟಿ/ಬಿಟಿ ರಾಜಧಾನಿ' ಮತ್ತು ಜಾಗತಿಕ ಬಂಡವಾಳ ಆಕರ್ಷಿಸಿ 'ಭಾರೀ ಆರ್ಥಿಕ ಬೆಳವಣಿಗೆ' ಕಂಡಿತ್ತು ಎಂದು ನೆನಪಿಸಿಕೊಳ್ಳಬಹುದು.
- ಕರ್ನಾಟಕದ ರೇಶನ್ ವ್ಯವಸ್ಥೆ ಸಾಕಷ್ಟು ಉತ್ತಮ ಸ್ಥಿತಿಯಲ್ಲಿ ಇದೆ. ಸುಮಾರು ಶೆ. 58:5 ಕುಟುಂಬಗಳು ರೇಶನ್ ಅಕ್ಕಿ ಬಳಸುತ್ತಿವೆ. ತಮ್ಮ ಅಗತ್ಯದ ಶೇ. 48.5 ನ್ನು ರೇಶನ್ ವ್ಯವಸ್ಥೆಯಿಂದ ಬಳಸುತ್ತಿವೆ. ಆದರೆ ಆಹಾರ ಅಭದ್ರತೆ ಅಂಕಿಅಂಶಗಳು ನೋಡಿದರೆ ಅವು ಪರಿಣಾಮಕಾರಿಯಾಗಿರುವುದು ಕಾಣುತ್ತಿಲ್ಲ. ರೇಶನ್ ವ್ಯವಸ್ಥೆಯಲ್ಲಿ ಸಾರ್ವತ್ರಿಕಗೊಳಿಸುವ ಕ್ರಮಗಳು ಅಗತ್ಯ ಎಂದು ಕಂಡು ಬರುತ್ತಿವೆ.
- ಸಮಗ್ರ ಶಿಶು ಕಲ್ಯಾಣ ಯೋಜನೆ (ಐ.ಸಿ.ಡಿ.ಎಸ್.) ಕಾರ್ಯಕ್ರಮದ ಜಾರೀ ಅತ್ಯಂತ ಅತೃಪ್ತಿಕರವಾಗಿದೆ. ಅದರ ಯಾವುದೇ ಒಂದು ಸೇವೆಯ ಪ್ರಯೋಜನ ಪಡೆದ ಕುಟುಂಬಗಳು ನೂರರಲ್ಲಿ 5 ಕ್ಕಿಂತಲೂ ಕಡಿಮೆ. ಅದಕ್ಕೆ ಬೇಕಾದ ಸಂಪನ್ಮೂಲಗಳು ಮತ್ತು ಜಾರಿಗೆ ಬೇಕಾದ ರಾಜಕೀಯ ನಿಶ್ಚಯದ ತುರ್ತು ಅಗತ್ಯ ಇದೆ.
- ಮಧ್ಯಾಹ್ನದ ಶಾಲಾ ಬಿಸಿಯೂಟ[ದ] ಕಾರ್ಯಕ್ರಮದ ಜಾರಿ ತೃಪ್ತಿಕರವಲ್ಲದಿದ್ದರೂ ಐ.ಸಿ.ಡಿ.ಎಸ್. ನಷ್ಟು ಕಳಪೆ ಇಲ್ಲ. ಶೇ. 33.4 ಕುಟುಂಬಗಳು ಬಿಸಿಯೂಟದ ಪ್ರಯೋಜ[ನ] ಪಡೆದಿವೆ ಎಂದು ಸರ್ವೇ ಹೇಳಿದೆ. ಅಂದ[ರೆ] ಕರ್ನಾಟಕದ ಮೂರರಲ್ಲಿ ಒಂದು ಕುಟುಂಬಗಳ[ು] ಸೇವೆಯ ಪ್ರಯೋಜನ ಪಡೆದಿವೆ. ಅರ್ಧದ[ಷ್ಟು] ಬಡ ಮತ್ತು ಆದಿವಾಸಿ ಕುಟುಂಬಗಳನ್ನು ಸೇ[...] ಮುಟ್ಟಿದೆ ಎನ್ನಲಾಗಿದೆ.
- ಆದರೆ ಇತ್ತೀಚೆಗೆ ಬಿಸಿಯೂಟದ ಕಾರ್ಯಕ್ರ[ಮ] ನಿಧಾನಗೊಂಡಂತೆ ದಿಕ್ಕು ತಪ್ಪಿದಂತೆ ಕಂಡ[ು] ಬರುತ್ತಿದೆ. ಬಿಸಿಯೂಟದ ಪ್ರಯೋಜ[ನ] ಪಡೆಯುತ್ತಿರುವವರ ವಿದ್ಯಾರ್ಥಿಗಳ ಸಂಖ್ಯೆ 2001-2006 ಅವಧಿಯಲ್ಲಿ 55.85 ಲಕ್ಷ (2001-0[2] ರಲ್ಲಿ) ದಿಂದ ಆರಂಭವಾಗಿ 56.21 ಲಕ್ಷಕ್ಕೇರಿ [...] ಮೇಲೆ ಸತತವಾಗಿ ಕಡಿಮೆಯಾಗುತ್ತಿದ್ದು, 2005-0[6] ಸಾಲಿಗೆ 49.62 ಲಕ್ಷಕ್ಕೆ ಇಳಿದಿದೆ. ಇದ[ು] ಆತಂಕಕಾರಿ.
- ಅದೇ ಅವಧಿಯಲ್ಲಿ ಹೆಚ್ಚಿನ ರಾಜ್ಯಗಳಲ್ಲಿ ಮತ[್ತು] ಒಟ್ಟು ಭಾರತದ ಮಟ್ಟದಲ್ಲಿ ಸಹ ಇಂತ[...] ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತಿದೆ. ದೇಶ ಮಟ್ಟದ[...] 10.34 ಕೋಟಿ (2001-02 ರಲ್ಲಿ) ಯಿಂ[ದ] ಆರಂಭವಾಗಿ ಸತತವಾಗಿ ಏರಿ 2005-06 ಸಾಲಿ[ಗೆ] 11.93 ಕೋಟಿಗೆ ಏರಿದೆ. ಶಾಲಾ ಬಿಸಿಯೂಟದ ಪ್ರಯೋಜನ ಪಡೆಯುತ್ತಿರುವವರ ವಿದ್ಯಾರ್ಥಿಗ[ಳ] ಸಂಖ್ಯೆ ಕಡಿಮೆಯಾಗಿರುವ ಏಳು ರಾಜ್ಯಗಳ[ಲ್ಲಿ] ಕರ್ನಾಟಕ ಒಂದು.

ಹಸಿವಿನ ಸಂಕಟ ಅಳತೆಗೋಲಿಗೆ ಸಿಕ್ಕುವಂತಹದ್ದಲ್ಲ. ಆದರೆ ಅದನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗಬಹುದಾದ ವಿಧಾನವಿದೆ

ಹಸಿವನ್ನು ಅಳೆಯುವುದು ಹೇಗೆ?

ಸಿವು, ಬಡತನ ಮತ್ತು ಪೋಷಕಾಂಶಗಳ ರತೆ ಹೋಗಲಾಡಿಸುವ ಪರಿಣಾಮಕಾರೀ ಮಗಳ ಕೊರತೆ ಇಲ್ಲದಿದ್ದರೂ, ಆಳುವವರ ಜಕೀಯ ಇಚ್ಛಾಶಕ್ತಿಯ ಕೊರತೆ ಮತ್ತು ವರ ರಾಜಕೀಯ ಬಲದ ಅಭಾವದಿಂದ ವುಗಳ ಜಾರಿ ಆಗಿಲ್ಲ. 1996 ರ ವಿಶ್ವ ಆಹಾರ ಗಸಭೆಯಿಂದ ಆರಂಭವಾಗಿ ಹಸಿವನ್ನು ದು ಗಂಭೀರ ಜಾಗತಿಕ ಸಮಸ್ಯೆಯಾಗಿ ರಿಗಣಿಸಿ ಅದರ ಪರಿಹಾರಕ್ಕೆ ಅಂತರ್ರಾಷ್ಟ್ರೀಯ ಮಗಳನ್ನು ರೂಪಿಸುವ ಮತ್ತು ಆ ಬಗ್ಗೆ ರ್ಕಾರಗಳಲ್ಲದೆ ಎಲ್ಲಾ ಜನವಿಭಾಗಗಳಲ್ಲಿ ರಿವು ಮೂಡಿಸುವ ಪ್ರಯತ್ನಗಳು ನಡೆದಿವೆ. ದು ದೇಶದ ಹಸಿವಿನ ಪ್ರಮಾಣವನ್ನು ಲ್ಲರೂ ಒಪ್ಪಬಹುದಾದ ವೈಜ್ಞಾನಿಕ ಾನದಂಡಗಳನ್ನು ಬಳಸಿ ಅಳೆಯುವ ವಿಧಾನ ಪ್ರಯತ್ನದ ಭಾಗವಾಗಿ ಮೂಡಿ ಬಂದಿದೆ. ತರ್ರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸ್ಥೆ (ಐ.ಎಫ್.ಪಿ.ಆರ್.ಐ) 'ಹಸಿವಿನ ಚಕ'ವನ್ನು 2006 ರಲ್ಲಿ ರೂಪಿಸಿತು. ಆ ರ್ಷದಿಂದ ಪ್ರತೀ ವರ್ಷ ಎಲ್ಲಾ ಬಡ ದೇಶಗಳ ಸಿವಿನ ಸೂಚಕ'ವನ್ನು ಅಳೆದು ಪ್ರಕಟಿಸುತ್ತಾ ದಿದೆ. ಹಿಂದಿನ ವಿಶ್ವಸಂಸ್ಥೆಯ ಅಂಕೆಸಂಖ್ಯೆಗಳ ಧಾರದ ಮೇಲೆ 1981, 1992, 1997 ಮತ್ತು 03 ರ 'ಹಸಿವಿನ ಸೂಚಕ'ವನ್ನು ಅಳೆದು ಟಿಸಲಾಗಿದೆ. ಹಲವು ದೇಶ-ಪ್ರದೇಶಗಳಲ್ಲಿ ಷ ಘಟನೆಗಳ (ಯುದ್ಧ, ಆಂತರಿಕ ಯುದ್ಧ ್ಯಾದಿ), ಪರಿಸ್ಥಿತಿಗಳ (ಉದಾ: ರಾಜಕೀಯ ರತೆ, ಕ್ಷಾಮ) ಮತ್ತು ನೀತಿ-ಕ್ರಮಗಳ (ವಿಶ್ವ ಂಕ್-ಐ.ಎಂ.ಎಫ್. ಪ್ರೇರಿತ ಅಥವಾ ತ್ರ ನೀತಿಗಳ ಜಾರಿಇತ್ಯಾದಿ) ಣಾಮವಾಗಿ ಹಸಿವಿನ ಪರಿಸ್ಥಿತಿಯಲ್ಲಿ ಲಾವಣೆಯನ್ನು ಗುರುತಿಸಲು ಇವು ಸಹಾಯ ವೆ.

ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಓ.) ನ್ನು ನಿಗದಿತ ಅಗತ್ಯ ಕ್ಯಾಲೋರಿ ಸಹ ರೈಕೆ ಆಗದಷ್ಟು ಆಹಾರ ಸೇವಿಸುವವರ ಾಣದ ಮೂಲಕ ಅಳೆಯುತ್ತಾ ಬಂದಿದೆ. ಮನುಷ್ಯನಿಗೆ ಅವನ ವಯಸ್ಸು, ಕೆಲಸ, ಸುವ ಪ್ರದೇಶ, ಹವಾಮಾನ ಇತ್ಯಾದಿಗಳ ರದ ಮೇಲೆ ಬದುಕಿರಲು ಕನಿಷ್ಟ ಶಕ್ತಿ ವಾ ಚೈತನ್ಯ) ನೀಡುವ ಆಹಾರದ ್ಯಗಳನ್ನು ವೈದ್ಯಕೀಯ ಮತ್ತು ಸಮಾಜ ್ರೀಯ ಅಧ್ಯಯನದಿಂದ ನಿಗದಿ ಸಲಾಗಿದೆ. ಉದಾಹರಣೆಗೆ, ಭಾರತದ ಸ್ಕನಿಗೆ ದಿನಕ್ಕೆ 2100 ರಿಂದ 2400 ಕಿಲೋ ಲೋರಿ ಶಕ್ತಿ ಬೇಕು. ಎರಡು ದೋಸೆ, ು ಕಪ್ ಸಾಂಬಾರು, ಒಂದು ಕಪ್ ಕಾಫಿ ವ ಬೆಳಗಿನ ಉಪಾಹಾರ 435 ಕ್ಯಾಲೋರಿ ುತ್ತದೆ. ಎರಡು ಕಪ್ ಅನ್ನ, ಒಂದು ಕಪ್ ಸಾಂಬಾರು ಮತ್ತು ಪಲ್ಯ ಇರುವ ಊಟ ಕ್ಯಾಲೋರಿ ಕೊಡುತ್ತದೆ. ಗ್ರಾಮೀಣ ಶದಲ್ಲಿ ಹೊಲದಲ್ಲಿ ಕಷ್ಟದ ದುಡಿಮೆ ಡುವವನಿಗೆ 2400 ಕ್ಯಾಲೋರಿ ಬೇಕು. ಕಷ್ಟದ ದುಡಿಮೆ ಮಾಡುವವನಿಗೆ 2100 ಕ್ಯಾಲೋರಿ ಬೇಕು.

ದೈಹಿಕ ಕೆಲಸ ಮಾಡದ ಸರಾಸರಿ ನಗರದ ಮಧ್ಯಮ ವರ್ಗದ ವಯಸ್ಕನಿಗೆ 1600 ಕ್ಯಾಲೋರಿ ಸಾಕು. ಈ ನಿಗದಿತ ಆಹಾರ ಸತತವಾಗಿ ಸಿಗದಿದ್ದರೆ ಅದು ಹಸಿವಿನ ಅಂಚು. ಕ್ಯಾಲೋರಿ ಅಲ್ಲದೆ ಮನುಷ್ಯ ಆರೋಗ್ಯವಾಗಿರಲು ಪಿಷ್ಟ, ಕೊಬ್ಬು, ವಿಟಮಿನ್ ಮತ್ತು ಲವಣಗಳು ಮುಂತಾದ ಪೋಷಕಾಂಶಗಳು ತಕ್ಕ



ಪ್ರಮಾಣದಲ್ಲಿ ಇರಬೇಕು. ಪೋಷಕಾಂಶಗಳ ಅಭಾವವನ್ನು '಼ಣದ ಹಸಿವು' ಎನ್ನುತ್ತಾರೆ. ಬಡವರು ಹೆಚ್ಚಾಗಿ ಕ್ಯಾಲೋರಿ ಮತ್ತು ಪೋಷಕಾಂಶ ಎರಡರಿಂದಲೂ ವಂಚಿತರಾಗುತ್ತಾರೆ.

ಎಫ್.ಎ.ಓ. ಭಾರತೀಯನ ಸರಾಸರಿ ದಿನದ ಕನಿಷ್ಟ ಅಗತ್ಯ 1820 ಕ್ಯಾಲೋರಿ ಎಂದು ನಿರ್ಧರಿಸಿದೆ. ಕನಿಷ್ಟ ಅಗತ್ಯಕ್ಕಿಂತ ಶೇಕಡಾ 80ಕ್ಕೂ(ಅಂದರೆ 1632 ಕ್ಕಿಂತ) ಕಡಿಮೆ ಕ್ಯಾಲೋರಿ ಪಡೆಯುವವರು ಹಸಿವು ಮತ್ತು ಪೋಷಕಾಂಶಗಳಿಂದ ಬಳಲುವವರು ಎಂದು ನಿರ್ಧರಿಸಲಾಗಿದೆ.

ಏನಿದು ಹಸಿವಿನ ಸೂಚಕ?

ಹಸಿವಿಗೆ ಹಲವು ಮುಖಗಳಿವೆ. ಬದುಕಿರಲು ಬೇಕಾದಷ್ಟು ಆಹಾರ ಸಿಗದಿರುವುದು ಒಂದು. ಸತತ ಆಹಾರದ ಮತ್ತು ಪೋಷಕಾಂಶಗಳ ಕೊರತೆಯಿಂದ ನಿಶ್ಶಕ್ತಿ, ತೀವ್ರ ಅನಾರೋಗ್ಯ, ವಿಕಲಾಂಗತೆ, ಅಕಾಲಿಕ ಮರಣ ಇನ್ನೊಂದು ಕಡೆ. ಹಸಿವಿನ ಸೂಚಕ ಈ ಎಲ್ಲಾ ಮುಖಗಳನ್ನು ಹಿಡಿದಿಡಬೇಕು. ಕುಟುಂಬ ಮತ್ತು ವ್ಯಕ್ತಿಯ ಮಟ್ಟದಲ್ಲಿ ಕನಿಷ್ಟ ಶಕ್ತಿ ಕೊಡುವ ಆಹಾರ ದೊರಕದಿರುವುದು, ಕನಿಷ್ಟ ಪೋಷಕಾಂಶಗಳ ಕೊರತೆ ಮತ್ತು ಇವೆಲ್ಲದರ ಒಟ್ಟು ಪರಿಣಾಮವಾಗಿ ಅಕಾಲಿಕ ಮರಣ - ಇವನ್ನು ಬಿಂಬಿಸಬೇಕು. ಆದರೆ ಈ ರೀತಿಯ ಅಂಕೆಸಂಖ್ಯೆ ಸುಲಭವಾಗಿ ದೊರೆಯುವುದಿಲ್ಲ. ಆದ್ದರಿಂದ ಈಗಾಗಲೇ ದೊರೆಯುವ ಅಂಕೆಸಂಖ್ಯೆ ಆಧಾರದ ಮೇಲೆ ಹಸಿವಿನ ಸೂಚಕವನ್ನು ರೂಪಿಸಲು ಐ.ಎಫ್.ಪಿ.ಆರ್.ಐ ತಜ್ಞರು ಪ್ರಯತ್ನಿಸಿದರು.

ಎಫ್.ಎ.ಓ. ಕುಟುಂಬದ ಮಟ್ಟದಲ್ಲಿ ಕನಿಷ್ಟ ಕ್ಯಾಲೋರಿ ಸಿಗದಿರುವ ಜನರ ಅಂಕೆಸಂಖ್ಯೆ ಹಿಂದಿನಿಂದ ಕಲೆ ಹಾಕುತ್ತಾ ಬಂದಿದೆ. ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂ.ಎಚ್.ಓ.) ಸರಾಸರಿಗಿಂತ ಅಸಾಮಾನ್ಯವಾಗಿ ಕಡಿಮೆ ತೂಕ ಇರುವ (ಅಂದರೆ ಪೋಷಕಾಂಶಗಳ ಕೊರತೆಯಿರುವ) 5 ವರ್ಷದ ವರೆಗಿನ ಮಕ್ಕಳ ಅಂಕೆಸಂಖ್ಯೆ ಕಲೆ ಹಾಕುತ್ತಿದೆ. ಅಕಾಲಿಕ ಬಾಲ ಮರಣ (5 ವರ್ಷದ ವರೆಗಿನ ಮಕ್ಕಳ ಮರಣದ ಪ್ರಮಾಣ)ದ ಅಂಕೆಸಂಖ್ಯೆಯನ್ನು ಯುನಿಸೆಫ್ (ವಿಶ್ವಸಂಸ್ಥೆಯ ಮಕ್ಕಳ ಕಲ್ಯಾಣದ ಅಂಗ) ಕಲೆ ಹಾಕುತ್ತಿದೆ. ಇವೆರಡು ಜನಸಂಖ್ಯೆಯ ಒಂದು ವಿಭಾಗದ (5 ವರ್ಷಕ್ಕಿಂತ ಕೆಳಗಿನ ಮಕ್ಕಳು) ಅಂಕೆಸಂಖ್ಯೆ ಆದರೂ ಇದು ಕುಟುಂಬದ ಎಲ್ಲಾ ಸದಸ್ಯರ ಪೋಷಕಾಂಶದ ಅಭಾವ ಮತ್ತು ಅನಾರೋಗ್ಯವನ್ನು ಪ್ರತಿನಿಧಿಸುತ್ತದೆ. ಯಾವುದೇ ಕುಟುಂಬ ಮಕ್ಕಳಿಗೆ ಪೋಷಕಾಂಶ (ಉದಾ: ಹಾಲು, ಮೊಟ್ಟೆ, ತರಕಾರಿ) ಒದಗಿಸಲು ಹೆಣಗುತ್ತದೆ. ಮಕ್ಕಳಿಗೆ ಪೋಷಕಾಂಶ ಸಿಕ್ಕಿಲ್ಲ ಎಂದರೆ, ಕುಟುಂಬದ ಇತರ ಸದಸ್ಯರಿಗೂ ಸಿಕ್ಕಿಲ್ಲ ಎನ್ನುವುದು ಖಚಿತ. ಮಕ್ಕಳ ಮರಣದ ಪ್ರಮಾಣದ ಬಗೆಗೂ ಅಷ್ಟೇ. ಮಕ್ಕಳ ಮರಣದ ಪ್ರಮಾಣ ಹೆಚ್ಚಿದೆಯೆಂದರೆ ತಾಯಿಗೂ ಆಹಾರ ಮತ್ತು/ಅಥವಾ ಪೋಷಕಾಂಶದ ಅಭಾವ ಇತ್ತು, ಇನ್ನೂ ಇದೆ, ಕುಟುಂಬದ ಪರಿಸರ ಸಹ (ಆರೋಗ್ಯ ಸೇವೆ, ಮನೆ, ನೀರು, ಶೌಚಾಲಯ, ನೈರ್ಮಲ್ಯ ಇತ್ಯಾದಿ) ತೀರಾ ಕೆಟ್ಟಿದೆ ಎಂದೇ ಅರ್ಥ. ಇದು ಕುಟುಂಬದ ಎಲ್ಲಾ ಸದಸ್ಯರ ಮೇಲೆ ಪರಿಣಾಮ ಬೀರುವಂತದ್ದು. ಅಲ್ಲದೆ ಕಡಿಮೆ ತೂಕ ಇರುವ ಮಕ್ಕಳ ಮತ್ತು ಅವರ ಮರಣದ ಪ್ರಮಾಣವೇ ಕುಟುಂಬದ ಹಸಿವಿನ ಮತ್ತು ಆಹಾರ ಭದ್ರತೆಯ ಅಭಾವದ ಸೂಚಕ.

ಹೀಗೆ ಹಸಿವಿನ ಸೂಚಕ ಕೆಳಕಂಡ ಮೂರು ಪ್ರಮುಖ ಸಂಖ್ಯೆಗಳ ಸರಾಸರಿ (ಅವು ಮೂರನ್ನು ಕೂಡಿ ಮೂರರಿಂದ ಭಾಗಿಸಿದರೆ ಬರುವ ಸಂಖ್ಯೆ)

- ಕನಿಷ್ಟ ಕ್ಯಾಲೋರಿ ಸಹ ಪೂರೈಕೆ ಆಗದಷ್ಟು ಆಹಾರ ಸೇವಿಸುವವರ ಶೇಕಡಾವಾರು ಪ್ರಮಾಣ
- ಸರಾಸರಿ ತೂಕಕ್ಕಿಂತ ಅಸಾಮಾನ್ಯವಾಗಿ ಕಡಿಮೆ ತೂಕ ಇರುವ 5 ವರ್ಷದ ವರೆಗಿನ ಮಕ್ಕಳ ಶೇಕಡಾವಾರು ಪ್ರಮಾಣ
- 5 ವರ್ಷದ ವರೆಗಿನ ಮಕ್ಕಳ ಮರಣದ ಶೇಕಡಾವಾರು ಪ್ರಮಾಣ

ಹಸಿವಿನ ಸೂಚಕ ಸಹ ಒಂದು ಶೇಕಡಾ ಸಂಖ್ಯೆ. ಅಂದರೆ ಸೊನ್ನೆ ಮತ್ತು ನೂರರ ನಡುವಿನ ಒಂದು ಸಂಖ್ಯೆ. ಸೂಚಕ ಸೊನ್ನೆ ಎಂದರೆ ಹಸಿವು ಇಲ್ಲವೇ ಇಲ್ಲ ಅಂತ. ಸೂಚಕ ನೂರು ಎಂದರೆ ಇಡೀ ಜನಸಂಖ್ಯೆ ಹಸಿವಿನಿಂದ ಬಳಲುತ್ತಿದೆ ಅಂತ. ಆದರೆ ನಿಜವಾಗಿ ಯಾವುದೇ ದೇಶದ ಸೂಚಕ ಸೊನ್ನೆ ಮತ್ತು ನೂರು ಇರುವುದಿಲ್ಲ. 2008 ರ ವರದಿ ಪ್ರಕಾರ ಗರಿಷ್ಟ ಹಸಿವಿನ ಸೂಚಕ ಕಾಂಗೋ (ಆಫ್ರಿಕನ್ ದೇಶ)ದ್ದು 42.7. ಅತ್ಯಂತ ಕಡಿಮೆ ಸೂಚಕ 5.0 ಮಾರಿಶಸ್‌ನದ್ದು. ಭಾರತದ್ದು 23.7. ಐ.ಎಫ್.ಪಿ.ಆರ್.ಐ ಸೂಚಕದ ಆಧಾರದ ಮೇಲೆ ಹಸಿವಿನ ಪರಿಸ್ಥಿತಿಯ ಕಡಿಮೆ/ಸಾಧಾರಣ (10 ಕ್ಕಿಂತ ಕಡಿಮೆ), ಗಂಭೀರ (10 ರಿಂದ 20), ಅಪಾಯಕಾರಿ (20 ರಿಂದ 30), ಮತ್ತು ತೀರಾ ಅಪಾಯಕಾರಿ (30ಕ್ಕಿಂತ ಹೆಚ್ಚು) ಎಂಬ ಐದು ಮಟ್ಟಗಳನ್ನು ಗುರುತಿಸುತ್ತದೆ. ಸೂಚಕದ ಮೂರು ಭಾಗಗಳು ಅದರದೇ ಕಥೆ ಹೇಳುತ್ತವೆ. ಉದಾಹರಣೆಗೆ 1990 ರಲ್ಲಿ ಜಗತ್ತಿನ ಹಸಿವಿನ ಸೂಚಕ 20.9 ಇತ್ತು. ಕನಿಷ್ಟ ಕ್ಯಾಲೋರಿ ಇಲ್ಲದವರ ಪ್ರಮಾಣ ಶೇ. 19.9 ಇತ್ತು. ಕಡಿಮೆ ತೂಕ ಇರುವ ಮಕ್ಕಳ ಪ್ರಮಾಣ ಶೇ. 32.8. ಇತ್ತು. ಬಾಲ ಮರಣದ ಪ್ರಮಾಣ ಶೇ. 9.9 ಇತ್ತು. 2003 ರಲ್ಲಿ ಜಗತ್ತಿನ ಹಸಿವಿನ ಸೂಚಕ 16.8 ಆಯಿತು. ಕನಿಷ್ಟ ಕ್ಯಾಲೋರಿ ಇಲ್ಲದವರ ಪ್ರಮಾಣ ಶೇ. 16.5. ಕಡಿಮೆ ತೂಕ ಇರುವ ಮಕ್ಕಳ ಪ್ರಮಾಣ ಶೇ. 26 ಮತ್ತು ಬಾಲ ಮರಣದ ಪ್ರಮಾಣ ಶೇ. 7.9 ಆಯಿತು. ○

ಸ್ಪಷ್ಟೀಕರಣ

ನವೆಂಬರ್ 7, 2009 ಅಕ್ಟೋಬರ್ ಕ್ರಾಂತಿ ದಿನಾಚರಣೆಯಂದು ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯಲ್ಲಿ ನಿರ್ಮಾಣವಾಗುತ್ತಿರುವ ಇ.ಎಂ.ಎಸ್. ಭವನವು ಉದ್ಘಾಟನೆಗೊಳ್ಳಲಿದೆ ಎಂದು ಈ ಹಿಂದೆ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಕಾರಣಾಂತರಗಳಿಂದ ನವೆಂಬರ್ 7 ಭವನ ಉದ್ಘಾಟನೆ ಆಗುತ್ತಿಲ್ಲ. ಉದ್ಘಾಟನೆಯ ದಿನಾಂಕ ವಿವರಗಳನ್ನು ತಿಳಿಸಲಾಗುವುದು ಎಂದು ಎ.ಕೆ.ಜಿ. ಟ್ರಸ್ಟ್ ತಿಳಿಸಿದೆ.

ಸಾವಿರ ಪುಸ್ತಕಗಳಿವೆ..... ಬೇಕಾ...!?

ಅಂದು ಸಂಜೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೈಸೂರು ಕಛೇರಿಗೆ ಹೋದಾಗ ಏನಿಲ್ಲವೆಂದರೂ ಸಾವಿರ ಪುಸ್ತಕಗಳು ಗಂಟು ಕಟ್ಟಿಕೊಂಡು ಕೂತಿದ್ದವು. ಹಳೇ ಅಫೀಸಿನಿಂದ ಕೊಂಡು ತಂದದ್ದೆಂದು ಸುಮ್ಮನಿದ್ದೆ. ಆದರೆ ನನ್ನ ಎಣಿಕೆ ತಪ್ಪು. ಆ ಪುಸ್ತಕಗಳ ಹಿಂದೆ ಕಾಮ್ರೇಡರೊಬ್ಬರ ಅದ್ಭುತವಾದ ಕಥೆ ಇತ್ತು. ಹೌದು, that is a wonderful story.

ಬೋರಯ್ಯ ಎಂಬ ಒಬ್ಬ ವ್ಯಕ್ತಿ. 1934ನೇ ಇಸವಿಯಲ್ಲಿ ಎಸ್.ಎಸ್.ಎಲ್.ಸಿ ಯಲ್ಲಿ ಎಲ್ಲ ವಿಷಯದಲ್ಲೂ ತೇರ್ಗಡೆಯಾಗಿ ಕನ್ನಡದಲ್ಲಿ 34½ marks ನೊಂದಿಗೆ ನಪಾಸಾಗಿದ್ದರು. ಹಾಗಾಗಿ EPS ಎಂಬ (EPS = Eligible for Public Service) ಸರ್ಟಿಫಿಕೇಟು ಸಿಕ್ಕಿತು. ಬಡ ದಲಿತ ಮನುಷ್ಯ. ರೈಲ್ವೆ ಇಲಾಖೆಯಲ್ಲೊಂದು ನೌಕರಿ ದೊರೆಯಿತು. ಹೇಳಿ ಕೇಳಿ ಸ್ವಾತಂತ್ರ್ಯಪೂರ್ವ ಕಾಲ. ದಲಿತರ ಮೇಲಿನ ದೌರ್ಜನ್ಯ, ಸಾಮಾಜಿಕ ತಾರತಮ್ಯ ದಟ್ಟವಾಗಿದ್ದ ಕಾಲ. ಇಲಾಖೆಯಲ್ಲಿ ಬೋರಯ್ಯರಿಗೆ ಕಿರಿ ಕಿರಿ ಶುರುವಾಯ್ತು. ಎಷ್ಟು ತಡೆದುಕೊಂಡರು ವಿಪರೀತವಾದಾಗ ಬೋರಯ್ಯರ ಅಂತಃಶಕ್ತಿ ದಬ್ಬಾಳಿಕೆಯನ್ನು ವಿರೋಧಿಸಿತು. ಆಗ 'ನೀನೇನು ಸ್ಟಾಲಿನ್‌ಗೆ ಹುಟ್ಟಿದವನ?' ಎಂಬ ಮೂದಲಿಕೆ ಎದಿರಾಯ್ತು. ಅದನ್ನು ಗಂಭೀರವಾಗಿ ಪರಿಗಣಿಸಿದ ಬೋರಯ್ಯ ಸ್ಟಾಲಿನ್ ಬಗೆಗೆ ಚಿಂತಿಸಲಾರಂಭಿಸಿದರು. ಸಿಕ್ಕಲ್ಲಿ ಸ್ಟಾಲಿನ್ ಬಗೆಗೆ ಓದಿದರು. ಪುಸ್ತಕಗಳನ್ನು ಕೊಂಡುಕೊಂಡರು. ಜೊತೆಯಲ್ಲೇ ಕಮ್ಯೂನಿಸ್ಟ್ ಪಕ್ಷದ ಸಂಪರ್ಕ ದೊರೆಯಿತ್ತು. ಪಕ್ಷ ಆಗ ಭೂಗತವಾಗಿತ್ತು. ಹಾಗಿದ್ದರೂ, ಎ.ಕೆ. ಗೋಪಾಲನ್, ಇ.ಎಂ.ಎಸ್. ನಂಬೂದರಿ ಪಾಡ್, ಬಾಲ್‌ರಾಜ್ ಸಹಾನಿ ಮುಂತಾದವರೆಲ್ಲರೂ ಮೈಸೂರಿಗೆ ಬಂದರೆಂದರೆ ಬೋರಯ್ಯನವರ ಮನೆಯೇ ಅವರಿಗೆ ರೆಸ್ಟೋರೆಂಟು, ಮೀಟಿಂಗ್ ಸ್ಪಾಟು. ನಂಬೂದರಿ ಪಾಡ್‌ರು ಸ್ವತಃ ತಾವೇ ಬೋರಯ್ಯನವರ ಮನೆಗೆ ಹೋಗುತ್ತಿದ್ದುದನ್ನು ನೆನಪಿಸಿಕೊಳ್ಳುತ್ತಿದ್ದರು. 1964ರಲ್ಲಿ ಪಕ್ಷ ಇಬ್ಭಾಗವಾದ ನಂತರವೂ ಬೋರಯ್ಯ ಎಂ.ಎನ್. ಉಗ್ರಪ್ಪ ಹಾಗೂ ಇನ್ನಿತರ ಕ್ರಾಂತಿಕಾರಿಗಳೊಂದಿಗೆ ಸಂಬಂಧ ಕಡಿದುಕೊಳ್ಳದೇ 1995ರ ವರೆಗೂ ಒಬ್ಬ ಕಮ್ಯೂನಿಸ್ಟ್ ಆಗಿ ಬದುಕಿದರು. ನಂತರ ಅವರು ಸಂಗ್ರಹಿಸಿಟ್ಟಿದ್ದ ಮಾರ್ಕ್ಸ್‌ವಾದಿ ಸಾಹಿತ್ಯ ಕುರಿತ ಶಾಸ್ತ್ರೀಯ ಗ್ರಂಥಗಳು ಅವರ ನೆನಪನ್ನು ಹಸನಾಗಿಟ್ಟಿವೆ. ಸಿಪಿಎಂನ ರಾಜ್ಯ ಸಮಿತಿಗೆ ಆ ಪುಸ್ತಕಗಳು ಹೋಗಲಿವೆ. ಒಂದು ಸಣ್ಣ ಬೈಗಳದ ಆಳವನ್ನು ಬೆನ್ನಟ್ಟಿದ ಬೋರಯ್ಯ ನಿಜವಾದ ಕ್ರಾಂತಿಕಾರಿಯಾಗಿ ರೂಪುಗೊಂಡರು. ಎಲ್ಲರೂ ಆ ಕೆಚ್ಚನ್ನು ರೂಢಿಸಿಕೊಂಡರೆ ಎಷ್ಟು ಚೆನ್ನ ಅಲ್ವ..

ಈ Information ಕೊಟ್ಟು Help ಮಾಡಿದ್ದು ಜಗನ್ನಾಥ್.

ಬರೆದದ್ದು: ವಿನಯ್ ಕುಮಾರ್ ಎಂ.ಜಿ.

ಆ ಅಪ್ಪುಗೆ, ಆ ಪ್ರೀತಿ, ಆ ನಗು, ಅವು ಹೇಳಿದವು, ಇವಳೇ ಪದ್ದಕ್ಕ....... ಆದರೆ ಅವಳಿಗೂ ಈ ಬಿಳಿ ಸೀರೆಯ ಪದ್ಮಿನಿ ನನ್ನಷ್ಟೇ ಅಪರಿಚಿತಳು ಅಂತ ತಿಳೀತು.

ಕಥೆ

ಮುಖತಃ

ಸುಷ್ಮಾ

"ಉಳಿದೆಲ್ಲ ಮುಖತಃ" ಇದು ಆ ಪತ್ರದ ಕೊನೆಯ ಸಾಲು. ಅದೊಂದು ಔಪಚಾರಿಕ ವಾಕ್ಯ. 'ಸರಿ ಸಿಗುವ' ಅಂತ ಹೊರಡೋ ವೇಳೆ ಹೇಳ್ತೀವಲ್ಲ ಹಾಗೆ.

ಮತ್ತೆ ಮತ್ತೆ ಇಡೀ ಪತ್ರ ಓದಿದೆ. ಅದೆಷ್ಟೋ ವರ್ಷಗಳೇ ಕಳೆದಿದ್ದವು. ಆ ನೀಲಿ ಇನ್‌ಲ್ಯಾಂಡ್ ಲೆಟರ್‌ನಲ್ಲಿ ಕನ್ನಡ ಅಕ್ಷರಗಳನ್ನು ಓದಿ. ಅಣ್ಣ ಬೆಂಗಳೂರಿಗೆ ಬರೋ ಮೊದಲು ಬರೆದದ್ದೇ ಕೊನೆಯ ಪತ್ರ. ಆಗ ನಾನು ಇನ್ನೂ 10ನೇ ಕ್ಲಾಸ್ ಅಲ್ಲಲ್ಲ. ಎಸ್‌ಎಸ್‌ಎಲ್‌ಸಿ ಆ 10ನೇ ಕ್ಲಾಸ್ ಮುಗಿಸಿ 2 ವರ್ಷ ಕಳೆದಿದೆ. ಆದ್ರೆ ಆ ಪತ್ರಗಳ ಬರೆಯುವುದು, ಪತ್ರಕ್ಕಾಗಿ ಕಾಯೋದು ಇನ್ನೂ ಥ್ರಿಲ್ ಅನ್ನಿಸತ್ತೆ.

ಆ ಪತ್ರದಲ್ಲೇ ಇರಬೇಕು, ಅಣ್ಣ ಬರೆದಿದ್ದು, ಪದ್ದಕ್ಕನ ಮದುವೆ ನಿಶ್ಚಯ ಆಗಿದೆ. ಮುಂದಿನ ಏಪ್ರಿಲ್‌ನಲ್ಲಿ ಅಂತ.

'ಪದ್ದಕ್ಕ' ಪಕ್ಕದ ಮನೆಯ ಪದ್ಮಿನಿ. ಊರಿನ 'ಕೂಸು'. ಎಲ್ಲರ ಮುದ್ದಿನ ಪದ್ದು. ಚಿಕ್ಕಪ್ಪಂದಿರ ತಮಾಷೆಯಿಂದ 'ಪೆದ್ದು' ಆಗಿ ಅತ್ತವಳು. ಎಲ್ಲರ ಕಣ್ಮಣಿ.

ನಮಗೂ 'ಪದ್ದಕ್ಕ' ತುಂಬಾ ಆತ್ಮೀಯಳು. ಎಂದೂ ಸಿಡುಕ್ಕಿದ್ದೆ ಇಲ್ಲ. ಬಸ್ ಇಳಿದೊಡನೆ ಅವರ ಮನೆಯ ಜಗುಲಿಯಿಂದ, ಏನೇ ಪುಟ್ಟಿ ಅಂತ ಪ್ರೀತಿಯಿಂದ ತಬ್ಬಿ ಮುದ್ದಾಡಿ, ನಾನು ನಮ್ಮ ಮನೆ ತಲುಪಿ 'ಆಸರಿಗೆ ಕುಡಿಯೋತನಕ ಹರಟಿ, ಜೊತೆಗಿದ್ದು, ನಿಂಗ ಊಟ ಮಾಡಿ ಆರಾಮ್ ಮಾಡಿ, ಸಂಜೆ ಮೇಲೆ ಬತ್ತಿ' ಎಂದು ಓಡಿ ಹೋದವಳು.

ಸೌಮ್ಯ ಸ್ವಭಾವದ ಸಿಂಪಲ್ ವಿಲೇಜ್ ಗರ್ಲ್. ಯಾವಾಗ್ಲೂ ನಗುಮುಖಿ. ಪದ್ದಕ್ಕ ಜಗುಲಿ ದಾಟಿದರೆ ಒಳಮನೆಯ ತನಕ ತಿಳಿಯುತ್ತಿತ್ತು. ಅವಳ ಮಾತು, ಆರ್ಭಟ ಅಲ್ಲ. ಅವಳ ಗೆಜ್ಜೆ ಸದ್ದು. ಹಂಗಂತ, ಕನ್ನಡ ಸಿನಿಮಾದ ಮೋಹಿನಿ ಸದ್ದಲ್ಲ, ಎಲ್ಲೋ ದೂರದಲ್ಲಿ ಜಣ್ ಅನ್ನೋ ಮೂರೇ ಗೆಜ್ಜೆ ಇದ್ದ ಕಾಲು ಚೈನು ಅದು.

ಸಂಜೆಯಾದೊಡನೆ ಊರಿನ ಚಿಳ್ಳೆ ಪಿಳ್ಳೆಗಳನ್ನೆಲ್ಲಾ ಒಟ್ಟು ಹಾಕಿ 'ಕೌಳಿ ಹಣ್ಣಿಗೆ' ಬ್ಯಾಣಕ್ಕೆ ಕರೆದೊಯ್ಯುತಿದ್ಲು. ಪದ್ದಕ್ಕನ ಕಥೆ ಕೇಳೋದೇ ಚಂದ. ಎಲ್ಲವನ್ನೂ ತಾನೇ ನೋಡಿದ ಹಾಗೆ ಬಣ್ಣಿಸುತ್ತಿದ್ಲು.

ಕಾಡಿಗೆ ಹಾಕಿದ ಕಣ್ಣರಳಿಸಿ 'ಎಂತದು ಗೊತ್ತಿದ್ದಾ' ಅಂದ್ರೆ ಇನ್ನೊಂದು ರಸಮಯ ಗಾಥೆ ಶುರು. ಹಾಗಂತ ಈ B'lore ಹೆಂಗಸರ ಥರ ಅವರಿವರ ಸಂಸಾರದ ಕಥೆ ಎಂದೂ ಹೇಳಿಲ್ಲ.

ಬೇಸಿಗೆ ರಜೆಯಲ್ಲಿ, ಬಳೆಗಾರ ಬಂದಾಗ, ಸಿಟಿ ಹುಡುಗಿಯರು ನಮಗೆ ಏನೋ ಖುಷಿ. ಗಾಜಿನ ಬಳೆ, ಬಳೆಗಾರ ತೊಡಿಸೋದು ಎಲ್ಲ. ಪದ್ದಕ್ಕಳಿಗೆ ಇದು ಎರಡು ತಿಂಗಳಿಗೊಮ್ಮೆ ಸಿಗೋ ಸೌಭಾಗ್ಯ. ಆದರೆ ಪ್ರತಿ ಸಲವೂ ಅವಳಿಗೆ ಅಷ್ಟೇ ಸಂಭ್ರಮ. ನಮಗೆಲ್ಲಾ ಬಣ್ಣದ ಬಳೆ, ಚುಕ್ಕಿ ಬಳೆ ಅಂತ ಆರಿಸಿ ಕೊಡೋಳು ಅವಳೇ. ಪದ್ದಕ್ಕನ ಕೈಲಿ ಬಳೆ ಇಲ್ಲದ ದಿನವೇ ಇಲ್ಲ.

ಹಣೆಗೆ ಸುಂದರ 'ಬಿಂದಿ' ನಿತ್ಯ ಕಣಗಲ ಹೂವಿಂದ ಮಾಡಿದ ಕಪ್ಪಿನಲ್ಲಿ ಹಣೆಯ ಮೇಲೆ ಅರಳುತ್ತಿತ್ತು ಪದ್ದಕ್ಕನ ಆರ್ಟ್.

ಎಷ್ಟು ವರ್ಷಗಳಾಯ್ತು ಪದ್ದಕ್ಕನ ಭೇಟಿ ಮಾಡದೆ. ಮದುವೆಗೆ ಹೋಗಿದ್ದೆ. ನಾನೊಬ್ಬಳೇ ಏನು, ಇಡೀ ಊರಿನ ಮನೆ ಮಂದಿಯೆಲ್ಲಾ. ಎಲ್ಲರಿಗೂ ಮನೆ ಮಗಳು ಅವಳು. ಅವಳ ಬೀಳ್ಕೊಡುಗೆ, ಅದೇ ರೀತಿ ಹೆಣ್ಣೊಪ್ಪಿಸುವ ಶಾಸ್ತ್ರದಲ್ಲಿ ಅಳದವರೇ ಇಲ್ಲ. ಆಚೆ ಮನೆ ಅತ್ತೆ, ಮೂಲೆ ಮನೆ ಅಮ್ಮಮ್ಮ ಕೆಳಗಿನ ಮನೆ ಕಕ್ಕ ಅಂದ್ರೆ ಚಿಕ್ಕಪ್ಪ, ಹೀಗೆ ಎಲ್ಲರೂ ಕಣ್ಣೀರಿಟ್ಟವರೇ. ಕಡೆಗೆ ಪಕ್ಕದ ಮನೆ ಅಣ್ಣಯ್ಯ 2 ವರ್ಷದ ಕೂಸು "ಯಂಗೆ ಊಟ ಮಾಡ್ಸಲೆ ಯಾರು ಇನ್ನು" ಅಂತ ಗೊಳೋ ಎಂದಿತು. ಅದೇ ಕೊನೆ. ಊರಿನ ಎಲ್ಲರೂ ಒಂದೇ ಸಮಯಕ್ಕೆ ಒಟ್ಟಿಗೆ ಸೇರಿದ್ದು.

ಮತ್ತೆ ಪದ್ದಕ್ಕನ್ನ ಕಂಡಿದ್ದು ಅವಳ ಬಾಳಂತನದಲ್ಲೇ. ಅದೇ ದುಂಡು ಮುಖ. ಚಂದದ ನಗು. ಕಪ್ಪು ಹಚ್ಚಿದ ಕಂಗಳಲ್ಲಿ ಕರಗದ ಉತ್ಸಾಹ. ಅದ ಗಲ್ ಅನ್ನೋ ಗೆಜ್ಜೆ, ಜಲ್ ಎನ್ನೋ ಬಳೆಗಳು.

ಅವಳ ಮಡಿಲಿನ ಕಂದಮ್ಮನ ನೋಡಿ ಅಸೂಯೆಪಟ್ಟಿದ್ದೆ. ಇನ್ನು ಇವನಿ ಮಾತ್ರ ಅಲ್ವ ನಿನ್ನ ಪ್ರೀತಿ ಮುದ್ದು, ಕಥೆ ಎಲ್ಲ ಅಂತ. ನಾನು ಮಾತ್ರ ಅ ಎಲ್ಲರಿಗೂ ಅನ್ನಿಸಿತ್ತು. ಆದರೆ ಪ್ರೀತಿಯ ಸೆಲೆ ಅವಳು, ಅಷ್ಟೇ ಪ್ರೀತಿಸಿ ಮುದ್ದಿಸಿ ನನ್ನ ಕೆನ್ನೆ ಚಿವುಟಿ ಹೇಳಿದ್ಲು, ನೀವೆಲ್ಲಾ ನಂಗೆ ಯಾವಾಗ ಮಕ್ಳೇ ಕೂಸೆ. ಇದ್ದಕ್ಕಿದ್ದ ಹಾಗೆ ಆಸೆ ಆಯ್ತು. ಮತ್ತೆ ಅವಳ ತೊಡೆಯ ಮೇಲೆ ಮಲಗಿ ಕಥೆ ಕೇಳಬೇಕು ಅಂತ.

ಅಯ್ಯೋ ಏನೇನೋ ಹೇಳ್ತಾ ಇದ್ದೀನಿ ನೋಡಿ. ಊರಿನ ವಿಷಯ ಅಂದ್ರೆ, ಹೀಗೆ ಒಂದಕ್ಕೊಂದು ಸೇರಿ ಸೆಣೆದು ಎಲ್ಲೋ ಹೋಗುತ್ತ ನೆನಪಿನಾಳಕ್ಕೆ. ಹೋಗ್ಲಿ ಬಿಡಿ, ಇಷ್ಟು ವರ್ಷ ಕಳೆದು, ಈಗ ಪದ್ದ ಬೆಂಗಳೂರಿಗೆ ಬಂದಿದ್ದಾಳಂತೆ. ಭಾವ ಹೋಗಿ 5 ವರ್ಷ ಆಯ ಆಕ್ಸಿಡೆಂಟ್‌ನಲ್ಲಿ. ಈಗ ಮಗನನ್ನು ಇಲ್ಲೇ ಕಾಲೇಜ್ ಸೇರಿಸೋಕೆ ಮೈದುನ ಮನೆಗೆ ಬರುತ್ತೇನೆ. "ಉಳಿದೆಲ್ಲ ಮುಖತಃ" ಅಂತ ಪತ್ರ ಬರೆದಿದ್ದಾಳೆ

ಅದೆಷ್ಟೋ ಖುಷಿಯಿಂದ ಹೋದೆ, ಬನಶಂಕರಿ ಬಸ್ ಸ್ಟಾಪ್ ನಲ್ಲಿದ್ದೇನ ಮೈದುನನ ಜೊತೆ ಅಂತ ಫೋನ್ ಮಾಡಿದ್ಲು. ಪೆಟ್ರೋಲ್ ಬಂಕ ಎದುರು ಯಾರೂ ಕಾಣಲಿಲ್ಲ. ಹುಡುಕಾಡಿ ಮತ್ತೆ ಡಯಲ್ ಮಾಡಿದ

ಇಲ್ಲೇ ಇದ್ನಲೆ ಕೂಸೆ "ಇಲ್ಲಿ ನೋಡು" ಎಂದು ಆಚೆ ರೋಡ್ ಇಂ ಕೈ ಎತ್ತಿದಳು. ನಂಬಲಾಗಲಿಲ್ಲ ನನ್ನ ಕಣ್ಣನ್ನು. ಅದೇ ದುಂಡು ಮುಖ ಕಪ್ಪಿಲ್ಲದ ಕಣ್ಣು, ಬಳೆ ಇಲ್ಲದ ಕೈ, ಗೆಜ್ಜೆ ಇಲ್ಲದ ಕಾಲು, ಬಿಳಿ ಸೀರೆ, ಮಾತ ಕಟ್ಟಿತು. ಮನಸ್ಸಿಗೆ ಅವಳು ಪದ್ದಕ್ಕ ಅಂತ ನಂಬಲಸಾಧ್ಯ.

ಆ ಅಪ್ಪುಗೆ, ಆ ಪ್ರೀತಿ, ಆ ನಗು, ಅವು ಹೇಳಿದವು, ಇವಳೇ ಪದ್ದಕ್ಕ ಯೋಚಿಸಿದೆ, ಇವಳು ಭಾವ ಹೋದ ಮೇಲೆ ಇರುವ ಭಾವನ ಹೆಂಡ ಅಷ್ಟೇ. ಭಾವ ಇನ್ನು ಭಾವ ಆಗಿಲ್ಲದಾಗ, ಪದ್ದಕ್ಕ. ಬಳೆ, ಗೆಜ್ಜೆ, ಕುಂಕುಮ ಹೂವ, ಸಿಂಗಾರ ಎಲ್ಲವನ್ನೂ ತನಗಾಗಿಯೇ ಎಂಬಂತೆ ಧರಿಸಿ ಮೆರೆದಿದ್ದಳ ಈಗ ಭಾವನ ಜೊತೆ ಯಾಕೆ ಎಲ್ಲವನ್ನೂ ತ್ಯಜಿಸಿದಳು. ಭಾವ ಆಗಲು ಇರಲಿಲ್ಲ. ಈಗಲೂ ಇಲ್ಲ. ಅವರಿಲ್ಲದ ನೋವು ನಮಗೂ ಇದೆ. ಇವಳಿ ಹೆಚ್ಚು ಒಪ್ಪುತ್ತೇನೆ ನಿಜ, ಆದ್ರೆ ಭಾವನ ಜೊತೆ ಬಂದವು ಯಾವುವೂ ಅಲ್ಲ. ಪದ್ದಕ್ಕನ ವ್ಯಕ್ತಿತ್ವ ರೂಪಿಸಿದ ಸಿಂಗಾರಗಳಿಲ್ಲದ ಅವಳು.

ಅವಳಾಗೇ ತ್ಯಜಿಸಿದಳೋ, ಎಲ್ಲರ ಒತ್ತಡಕ್ಕೋ, ಪರಿಸ್ಥಿತಿಯ ಕೈಗೊಂಬೆಯೋ ಇಲ್ಲ ಅವರಿಲ್ಲದೆ ನನಗೇಕೆ ಎಂಬ ಭಾವನೆಯೋ ಗೊತ್ತಿಲ್ಲ

ಆದರೆ ಅವಳಿಗೂ ಈ ಬಿಳಿ ಸೀರೆಯ ಪದ್ಮಿನಿ ನನ್ನಷ್ಟೇ ಅಪರಿಚಿತಳ ಅಂತ ತಿಳೀತು. ಮತ್ತೆ ಕೆದಕಲಿಲ್ಲ. ಅವಳ ಮಡಿಲಲ್ಲಿ ತಲೆ ಇಟ್ಟು ಕೇಳಿದ 'ಕಥೆನಾದ್ರು ಹೇಳೆ". ಎಂತಾ ಕಥೇನೇ ಕೂಸೆ ಎಲ್ಲ ಮುಗಿದುಹೋಯಿತು ಶುರು ಆಗೋ ಹೊತ್ತಿಗೆ. ಹುಟ್ಟುವ ಮುನ್ನ ಸತ್ತಿತ್ತು ಅವಳ ಕಥೆ.

ಇನ್ನೆಷ್ಟು 'ಪದ್ದಕ್ಕ' ರು ಹೀಗೆ ಗುರುತಿಲ್ಲದ ಬಿಳಿ ಸೀರೆಯ ಪದ್ಮಿನಿಯಾಗಿ ಸತ್ತವರ ನೆರಳಲ್ಲಿ ಬದುಕುತ್ತಿರಬಹುದೋ ಗೊತ್ತಿಲ್ಲ. ಮನೆಗೆ ಬಂದ ಮರುದಿನ ಒಂದು ಪುಟ್ಟ ಕಾಗದದ ಪೊಟ್ಟಣ ಕೈಗಿತ್ತೆ.

"ಯಾವಾಗ್ಲೋ ಹೇಳಿದ್ನಲ್ಲ ಪದ್ದಕ್ಕ ನೀನು ಹೇಳಿದ ಹರಸಿದ ಹಾ ನಂಗೆ ಕೆಲಸ ಸಿಕ್ರೆ ಫಸ್ಟ್ ಸ್ಯಾಲರಿಯಲ್ಲಿ ನಿಂಗೆ ಬಳೆ ಕೊಡಿಸ್ತಿನಿ ಅಂತ. ಆ ತೊಗೊಂಡು ಇಟ್ಟಿದ್ದೆ. ಪುಟ್ಟ ತಂಗಿಯ ಮೊದಲ ಸಂಬಳದ ಪುಟ್ಟ ಗಿಫ್ಟ ಕೈಗಿತ್ತು ರೂಮಿನಿಂದ ನಡೆದು ಹೋದೆ.

ಹಣಕಾಸು ಶಿಸ್ತು ಎಂದರೆ ರಸಗೊಬ್ಬರ, ಪೆಟ್ರೋಲ್ ಬೆಲೆಯೇರಿಕೆ?

ರ್ಥಿಕ ಹಿಂಜರಿತದ ಸಂದರ್ಭದಲ್ಲಿ ುದ್ಯಮಗಳಿಗೆ ನೀಡಿರುವ ಪ್ರೋತ್ಸಾಹಕ ಾಕೇಜುಗಳನ್ನು ಸದ್ಯಕ್ಕೆ ಹಿಂತೆಗೆದುಕೊಳ್ಳುವ ೋಚನೆಯಿಲ್ಲ ಎಂದು ಕೇಂದ್ರ ಹಣಕಾಸು ಂತ್ರಿಗಳು ಉದ್ದಿಮೆದಾರರಿಗೆ ಭರವಸೆ ನೀಡಿದ್ದಾರೆ. ದರೆ ಸಾಧ್ಯವಾದಷ್ಟು ಬೇಗನೇ 'ಹಣಕಾಸು ಶಿಸ್ತಿ'ಗೆ ುರಳಬೇಕಾಗಿದೆ ಎಂದೂ ಅವರು ಹೇಳಿದ್ದಾರೆ. ನಿದು ಹಣಕಾಸು ಶಿಸ್ತು? ಶ್ರೀಮಂತರಿಗೆ ಟ್ಟಿರುವ ರಿಯಾಯ್ತಿಗಳನ್ನು ನಿಲ್ಲಿಸುವುದೇ? ಅಲ್ಲ, ಸಗೊಬ್ಬರ ಮತ್ತು ಪೆಟ್ರೋಲಿಯಂ ಉತ್ಪನ್ನಗಳಿಗೆ ೀಡುತ್ತಿರುವ ಸಬ್ಸಿಡಿ ವಿಪರೀತವಾಗಿದೆ, ,000ಕೋಟಿ ರೂ. ಆಗುತ್ತದೆ, ಅದನ್ನು ಕಡಿತ ಾಡುವುದು. ಅಂದರೆ ಅವುಗಳ ಬೆಲೆಯೇರಿಕೆ. ತೆಗೆ 'ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ'ಯೂ ಮ್ಮ ಸರಕಾರದ ಮುಂದಿರುವ ಸವಾಲು ಎಂದೂ ವರು ಹೇಳಿದ್ದಾರೆ.

ಇದೇ ವೇಳೆಗೆ ವಿಶ್ವಾದ್ಯಂತ ಬಂಡವಾಳಿಗರಿಗೆ ಾಟ್ಟ 'ಪ್ರೋತ್ಸಾಹಕ'ಗಳನ್ನು ಂತೆT ದುಕೊಳ್ಳಬಹುದು ಎಂಬ ಹಾಪೋಹಗಳಿಂದಾಗಿ ವಿಶ್ವದಲ್ಲೆಲ್ಲಾ ಶೇರು ೆಗಳು ಕುಃದಿವೆ, ಅದಕ್ಕೆ ಅನುಗುಣವಾಗಿ ರತದಲ್ಲೂ ಪರುಮುಖವಾಗಲಾರಂಭಿಸಿದ ು ಸೂಚ್ಯಂಕ ಕಳೆದ ಎರಡು ತಿಂಗಳ ಕನಿಷ್ಠ ಟ್ಟಕ್ಕೆ ಇಳಿದಿದೆ.

್ನ ಖರೀದಿಸಿದರೂ ಡಾಲರೇ ಇಷ್ಟ !

ೀಗೆಂದವರು ನಮ್ಮ ಕೇಂದ್ರೀಯ ಹಣಕಾಸು ಂತ್ರಿಗಳು. ಐಎಂಎಫ್ ತನ್ನ ಸ-ಕಾರ್ಯಗಳನ್ನು ಹೆಚ್ಚಿಸಲು, ಬಡದೇಶಗಳಿಗೆ ಯಾಯ್ತಿ ದರದಲ್ಲಿ ಸಾಲ ನೀಡಲು" ಎಂದು ತನ್ನ ಯಿರುವ ಚಿನ್ನದಲ್ಲಿ 400 ಟನ್ನುಗಳನ್ನು ಮಾರಲು ರ್ಧರಿಸಿದ್ದು ಅದರಲ್ಲಿ ಅರ್ಧದಷ್ಟು ಭಾರತ ಖರೀದಿಸಿದೆ, ಅದೂ ಮಾರುಕಟ್ಟೆ ದರದಲ್ಲಿ. ಇದರಿಂದ ಐಎಂಎಫ್‌ಗೆ ಬಹಳ ಸಂತೋಷವಾಗಿದೆಯಂತೆ. ಈ ಖರೀದಿಯ ನಂತರ ಭಾರತದ ರಿಝರ್ವ್ ಬ್ಯಾಂಕ್ ಬಳಿಯಿರುವ ಚಿನ್ನದ ದಾಸ್ತಾನಿನಲ್ಲಿ 55ಶೇ. ಹೆಚ್ಚಳವಾಗಿದೆ. ಎರಡು ದಶಕಗಳ ಹಿಂದೆ ವಿದೇಶಿ ಸಾಲ ತೀರಿಸಲು ಆಗಿನ ಚಂದ್ರಶೇಖರ್ ಸರ್ಕಾರ 20ಟನ್ ಚಿನ್ನ ಒತ್ತೆಯಿಟ್ಟಿತ್ತು, ಹಿಂದಿನ (ರಾಜೀವ್ ಗಾಂಧಿ) ಸರಕಾರದ ನೀತಿಗಳೇ ಅದಕ್ಕೆ ಕಾರಣ ಎಂದು ಆಗ ಹೇಳಲಾಗಿತ್ತು. ನಂತರ ನರಸಿಂಹರಾವ್ ಸರಕಾರ ಕೂಡ 48ಟನ್ ಒತ್ತೆಯಿಟ್ಟಿತ್ತು. ಆಗ ಹೋದ ಮಾನ ಈಗ ಮರಳಿದೆ ಎಂದು ಈ ಯುಪಿಎ-2 ಸರ್ಕಾರಕ್ಕೆ ಸಮಾಧಾನವಾಗಿದೆಯಂತೆ. ಭಾರತ ವಿಶ್ವದಲ್ಲಿ ಚಿನ್ನದ ಅತಿ ದೊಡ್ಡ ಬಳಕೆದಾರ ದೇಶ ಎಂದು ಹೇಳಲಾಗಿದೆ. ಪ್ರತಿವರ್ಷ 700-800 ಟನ್ ಚಿನ್ನ ಇಲ್ಲಿಗೆ ಆಮದಾಗುತ್ತದೆ. ಇದು ಜಗತ್ತಿನ ಚಿನ್ನ ವ್ಯಾಪಾರದ 20ಶೇ. ಇಷ್ಟೊಂದು ಚಿನ್ನ ಖರೀದಿಸಿದ್ದರ ಅರ್ಥ ನಮಗೆ ಡಾಲರಿನ ಬಗ್ಗೆ ಪ್ರೀತಿ ಕಡಿಮೆಯಾಗಿದೆ, ಚಿನ್ನದ ಪ್ರೀತಿ ಹೆಚ್ಚಿದೆಯೆಂದೇನಲ್ಲ ಎಂದು ಹಣಕಾಸು ಮಂತ್ರಿಗಳು ಭರವಸೆ ನೀಡಿದ್ದಾರೆ! ಯಾರಿಗೆ? ಅವರು ಏನೇ ಹೇಳಿದರೂ ವಿಶ್ವಾದ್ಯಂತ ಎಲ್ಲಾ ಕೇಂದ್ರೀಯ ಬ್ಯಾಂಕುಗಳೂ ಡಾಲರಿನ ದುರ್ಬಲತೆಯಿಂದ ತಮ್ಮ ದೇಶಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಚಿನ್ನದ ಖರೀದಿಯತ್ತ ಹೊರಳುತ್ತಿದ್ದಾರೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ. ಈ ಚಿನ್ನ ಖರೀದಿಯ ನಂತರ ಭಾರತದ ಚಿನಿವಾರ ಪೇಟೆಯಲ್ಲಿ ತೇಜಿ ಬಂದಿದೆ. ಚಿನ್ನದ ಬೆಲೆಯೇರುತ್ತಿದೆ.


ಶೇ. 28 ಉದ್ಯೋಗಸ್ಥರು ಬಡತನದ ರೇಖೆ ದಾಟಲಾರದವರು

"ಭಾರತದ ಜನಸಂಖ್ಯೆಗೆ ಹೋಲಿಸಿದರೆ ನಿರುದ್ಯೋಗಿಗಳ ಪ್ರಮಾಣ ಅಷ್ಟೇನೂ ಆತಂಕಕಾರಿಯಾಗಿರದಿದ್ದರೂ, ಅರೆ-ಉದ್ಯೋಗದ ಸ್ಥಿತಿ ಇನ್ನಷ್ಟು ಆತಂಕಕಾರಿ"-ಹೀಗೆಂದವರು ದೇಶದ ಕಾರ್ಮಿಕ ಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರು. 2004-05ರ ಅಂಕಿ-ಅಂಶಗಳ ಪ್ರಕಾರ 28ಶೇ. ಉದ್ಯೋಗಸ್ಥರಿಗೆ ತಮ್ಮ ಕುಟುಂಬಗಳನ್ನು ಬಡತನದ ರೇಖೆಯ ಮೇಲೊಯ್ಯಲು ಈಗಲೂ ಸಾಧ್ಯವಾಗುತ್ತಿಲ್ಲ. ಸ್ಥಾಯೀ ಕಾರ್ಮಿಕ ಸಮಿತಿಯ 43ನೇ ಅಧಿವೇಶನದಲ್ಲಿ ಅವರು ಈ ಅಂಶವನ್ನು ತಿಳಿಸಿದರು. ಈ ಅಧಿವೇಶನದಲ್ಲಿ ಇಂಟಕ್ ಕೂಡಾ ಸೇರಿದಂತೆ ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕಡಿಮೆ ಕೂಲಿ, ಕಾಂಟ್ರಾಕ್ಟ್ ದುಡಿಮೆ ಮತ್ತು ಬೆಲೆಯೇರಿಕೆಯ ಪ್ರಶ್ನೆಗಳ ಬಗ್ಗೆ ಸರಕಾರ ಚರ್ಚಿಸಬೇಕು ಎಂದು ಒತ್ತಾಯಿಸಿದರು. ಈ ಸಮಿತಿ ಕೇವಲ ಕಾಟಾಚಾರಕ್ಕೆ, ಕಾರ್ಮಿಕ ಸಚಿವಾಲಯವೂ ಅಧಿಕಾರಹೀನವಾಗಿದೆ ಎಂದು ಸಿಐಟಿಯು ಅಧ್ಯಕ್ಷ ಪಂಧೆ ಅಭಿಪ್ರಾಯ ಪಟ್ಟರು.

ಈಶಾನ್ಯ ರಾಜ್ಯಗಳ ಆದಾಯ ಇಳಿಯುತ್ತಿದೆ

ಎಂಟು ಈಶಾನ್ಯ ರಾಜ್ಯಗಳಲ್ಲಿ ಏಳು ರಾಜ್ಯಗಳ ಆದಾಯ ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಾಗಿದೆ. 15 ವರ್ಷಗಳ ಹಿಂದೆ ಇವುಗಳಲ್ಲಿ 4 ರಾಜ್ಯಗಳು ಮಿಜೊರಾಂ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್ ಮತ್ತು ಸಿಕ್ಕಿಂನ ತಲಾ ಆದಾಯ ರಾಷ್ಟ್ರೀಯ ಆದಾಯಕ್ಕಿಂತ 10ರಿಂದ 20ಶೇ. ಹೆಚ್ಚಿತ್ತು. ಈಗ ಮಿಜೊರಾಂ ಮಾತ್ರವೇ ರಾಷ್ಟ್ರೀಯ ಆದಾಯಕ್ಕಿಂತ ಮೇಲಿದೆ. ಇತರ ಮೂರು ರಾಜ್ಯಗಳು ರಾಷ್ಟ್ರೀಯ ಆದಾಯದ ಮಟ್ಟಕ್ಕಿಂತ ಕೆಳಗಿವೆ- ಸಿಕ್ಕಿಂ 2ಶೇ.ದಷ್ಟು, ಅರುಣಾಚಲ ಪ್ರದೇಶ 15ಶೇ.ದಷ್ಟು ಮತ್ತು ನಾಗಾಲ್ಯಾಂಡ್ 25ಶೇ.ದಷ್ಟು ಕೆಳಗೆ. ಉಳಿದ ರಾಜ್ಯಗಳ ಆದಾಯವೂ ಕೆಳಗಿಳಿದಿದೆ. ತ್ರಿಪುರಾ ರಾಜ್ಯ ಮಾತ್ರವೇ ಇದಕ್ಕೆ ಅಪವಾದ. 1993-94ರಲ್ಲಿ ಇಲ್ಲಿಯ ತಲಾ ಆದಾಯ ರಾಷ್ಟ್ರೀಯ ಸರಾಸರಿಗ್ಗಿಂತ 30ಶೇ. ಕೆಳಗಿತ್ತು; 2007-08ರಲ್ಲಿ ಆ ಅಂತರ 5ಶೇ.ಕ್ಕೆ ಇಳಿದಿದೆ.

ಯುಪಿಎ II ದರ್ಬಾರ್‌ನಲ್ಲಿ



ಮಹಾರಾಷ್ಟ್ರ ಕಾಂಗ್ರೆಸಿನದ್ದು ಸಾಯಿಬಾಬಾ ಮಾರ್ಗ?

ಹೊಸ ಕಾಂಗ್ರೆಸ್ ಮುಖ್ಯಮಂತ್ರಿಯನ್ನು ಆಶೀರ್ವದಿಸಲು ಸತ್ಯ ಸಾಯಿಬಾಬಾ ಮುಂಬೈಗೆ ಆಗಮಿಸುವ ಸುದ್ದಿಯ ಬಗ್ಗೆ ಓದಿದ್ದೀರಿ. ಅವರು ಬಂದರು, ಆಶೀರ್ವದಿಸಿದರು. ತಮ್ಮ ಸರಕಾರ ಅವರ ನೀತಿಗಳಂತೆ ನಡೆಯುತ್ತದೆ ಎಂದು ಹೊಸ ಮುಖ್ಯ ಮಂತ್ರಿಗಳು ಸಾರಿದರು. ಯುಪಿಎ ಯ 'ಆಮ್ ಆದ್ಮಿ'ಗೂ ಇದಕ್ಕೂ ಸಂಬಂಧವೇನು ಎಂದೇನೂ ವಿಶದ ಪಡಿಸಲಿಲ್ಲ. ಆದರೆ ಇದರ ಸೂಚನೆಯಂತೂ ಸಿಕ್ಕಿದೆ. ಏಕೆಂದರೆ ಕಳೆದ ಭಾನುವಾರ ಸಾಯಿಬಾಬಾ ಮುಂಬೈಗೆ ಆಗಮಿಸಿದ್ದಾಗ ಕಾಂಗ್ರೆಸ್ ಮುಖ್ಯಮಂತ್ರಿಗಳು ಮಾತ್ರವಲ್ಲ, ಇತರ ಬಂಡವಾಳಶಾಹಿ ಪಕ್ಷಗಳ ಮುಖಂಡರಷ್ಟೇ ಅಲ್ಲ, ಬಂಡವಾಳ ಜಗತ್ತಿನ ಅತಿರಥ ಮಹಾರಥರೂ ಸಾಲುಗಟ್ಟಿ ನಿಂತಿದ್ದರಂತೆ-ಐಸಿಐಸಿಐ ಬ್ಯಾಂಕಿನ ಅಧ್ಯಕ್ಷರು, ಯೂನಿಯನ್ ಬ್ಯಾಂಕಿನ ಎಂಡಿ , ಕೋಟಕ್ ಬ್ಯಾಂಕಿನ ಉಪಾಧ್ಯಕ್ಷ, ಭಾರತದಲ್ಲಿ ಜರ್ಮನಿಯ ಡೋಯ್ಷ್ ಬ್ಯಾಂಕಿನ ಅಧ್ಯಕ್ಷರು, ಅಂಬಾನಿಯ ರಿಲಯನ್ಸ್ ಇಂಡಸ್ಟ್ರಿಯ ಒಬ್ಬ ನಿರ್ದೇಶಕರು ಇತ್ಯಾದಿ. ಇದಕ್ಕೆ ಮೊದಲು ಬಾಬಾರ ಪುಟ್ಟಪರ್ತಿಯಲ್ಲಿ "ನೈತಿಕತೆ ಮತ್ತು ಹಣಕಾಸು ಜಗತ್ತು"(!) ಎಂಬ ಸಮ್ಮೇಳನ ನಡೆದಿತ್ತಂತೆ. ಅದರಲ್ಲಿ ಈ ಮೇಲೆ ಹೇಳಿದ ಅತಿರಥ, ಮಹಾರಥರು, ರಿಜರ್ವ್ ಬ್ಯಾಂಕಿನ ಹಾಲಿ ಮತ್ತು ಮಾಜಿ ಗವರ್ನರುಗಳೂ ಭಾಗವಹಿಸಿದ್ದರಂತೆ.

ುರಿ ಕಾಯುವ ತೋಳಗಗಳ ಅಸಲಿ ಮುಖ

ದ ಬಿಜೆಪಿಯಲ್ಲಿ ಭಿನ್ನಮತ ಎಂಬುದು ಭುಗಿಲೆದ್ದ ಲೆ, ರಾಜ್ಯದ ಅಗಾಧ ನೈಸರ್ಗಿಕ ಸಂಪನ್ಮೂಲಗಣನ್ನು ಲೂಟಿ ಮಾಡಲು ಕರ್ನಾಟಕ ರ್ಕಾರ, ಅಷ್ಟು ಮಾತ್ರವಲ್ಲ ನೆರೆಯ ಆಂಧ್ರ ಪ್ರದೇಶದ ಸರ್ಕಾರವೂ ಕೂಡ ಮುಕ್ತವಾದ ಅವಕಾಶ, ಮಾಡಿಕೊಟ್ಟು ಅದಕ್ಕೆ ಕಾನೂನುಬಾಹಿರ ರಕ್ಷಣೆಗಳನ್ನು, ಮಾರ್ಗಗಳನ್ನು ನೀಡಿರುವುದು ಬೆಳಕಿಗೆ ಬಂದಿದೆ.



ಜೆಪಿ ದರ್ಬಾರ್

ಕರ್ನಾಟಕದ ರಾಜ್ಯದಲ್ಲಿ ಜನಪರ ಸಂಘಟನೆಗಳು, ಚಿಂತಕರು ಎಷ್ಟೆಲ್ಲಾ ಪ್ರತಿಭಟನೆ, ಹೋರಾಟ, ಜಾಥಾಗಳನ್ನು ನಡೆಸಿದರೂ, ಸತ್ಯ ಶೋಧನಾ ತಂಡಗಳು ಸಮೀಕ್ಷೆ ನಡೆಸಿ ಅಕ್ರಮ ಬಹಿರಂಗಗೊಳಿಸಿದರೂ ಸಹ ಏನೊಂದು ಕ್ರಮ ವಹಿಸದ ಸರ್ಕಾರಗಳು ಇದೀಗ ಭಿನ್ನಮತ ಶುರುವಾದ ಮೇಲೆ ಗಣಿಧಣಿಗಳ ಮೇಲೆ ಮುಗಿಬಿದ್ದಿದ್ದಾರೆ.

ಗಣಿಗಾರಿಕೆಯಲ್ಲಿ ಅದಿರು ಸಾಗಾಣಿಕೆಗೆ ಬಳಕೆಯಾಗುತ್ತಿರುವ ದೊಡ್ಡ ಸಂಖ್ಯೆಯ ವಾಹನಗಳಿಗೆ ಪರವಾನಿಗೆಯೇ ಇಲ್ಲ!! ಇದೀಗ ಅವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇಂತಹ ಟ್ರಕ್ಕುಗಳಿಗೆ ಕಾನೂನಿನಲ್ಲಿ ಅವಕಾಶವಿರುದಕ್ಕಿಂತ ಭಾರಿ ಅಧಿಕ ತೂಕದ ಅದಿರನ್ನು ಸಾಗಿಸಲಾಗುತ್ತಿತ್ತು. ಆ ವಿಚಾರವಾಗಿ ಈಗ ವ್ಯಾಪಕ ತಪಾಸಣೆ ಕೈಗೊಳ್ಳಲಾಗು ತ್ತಿದೆ. ಅನುಮತಿ ಇಲ್ಲದ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುತ್ತಿರುವುದನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲಾಗಿದೆ ಎಂಬ ವರದಿಗಳು ಹೊರಬೀಳುತ್ತಿವೆ.

ಅನುಮತಿ ನೀಡಿರುವುದಕ್ಕಿಂತ ಬಾರಿ ದೊಡ್ಡ ಪ್ರಮಾಣದಲ್ಲಿ ಅದಿರು ತೋಡುವ ಅಧಿಕ ಸಾಮರ್ಥ್ಯದ ಯಂತ್ರಗಳು ಬಳಕೆಯಾಗುತ್ತಿರುವುದೂ ಕೂಡ ಪತ್ತೆಯಾಗಿದೆ. ಈ ಕ್ರಮಗಳಿಂದಾಗಿ ಅರ್ಧಕ್ಕಿಂತ ಹೆಚ್ಚಿನ ವಾಹನಗಳ ಓಡಾಟ ಕಡಿಮೆಯಾಗಿದೆಯಂತೆ.

ಇಷ್ಟೆಲ್ಲಾ ಅಕ್ರಮ ಹಲವಾರು ವರ್ಷಗಳಿಂದ ನಿರಂತರವಾಗಿ ನಡೆಯುತ್ತಾ ಬಂದಿದ್ದವು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಮೇಲಂತೂ ಕುರಿ ಹಿಂಡು ಕಾಯುವ ಜವಾಬ್ದಾರಿಯನ್ನು ತೋಳಗಳಿಗೆ ನೀಡಿದಂತಾಗಿ ಗಣಿ ಲೂಟಿಕೋರರರೇ ರಾಜ್ಯದ ಮಂತ್ರಿ, ಮಹೋದಯರಾಗಿ ಮೆರೆಯುವಂತಹ ಪರಿಸ್ಥಿತಿ ಬಂದಿತ್ತು. ಬಿಜೆಪಿ ಪಕ್ಷದ ಸರ್ಕಾರ ನೈತಿಕ ತಳಹದಿ ಎಷ್ಟೊಂದು ಹೊಲಸಾಗಿದೆ ಎಂಬುದಕ್ಕೆ ಇದಕ್ಕಿಂತ ಇನ್ನೇನಾದರೂ ಸಾಕ್ಷಿ ಬೇಕಾ?

ಪಕ್ಷ ರಾಜಕಾರಣ ಮೀರಿದ ಲೂಟಿ

ಗಣಿ ಲೂಟಿಕೋರರು ತಮ್ಮ ಲೂಟಿಗೆ ಕರ್ನಾಟಕ, ಆಂಧ್ರ ರಾಜ್ಯಗಳ ಗಡಿ ಗುರುತುಗಳನ್ನೇ ಕಿತ್ತೆಸೆದು, ಕರ್ನಾಟಕದ ನೆಲವನ್ನು ಆಂಧ್ರದ ಭಾಗವಾಗಿ ತೋರಿಸಿ ಗಣಿ ಲೂಟಿ ಮಾಡಿದರೆನ್ನುವುದು ಈಗಾಗಲೇ ಜಗಜ್ಜಾಹೀರಾಗಿರುವ ವಿಚಾರ. ಈ ಅಕ್ರಮದಲ್ಲಿ ಆಂಧ್ರದ ಕಾಂಗ್ರೆಸ್ ಸರ್ಕಾರ ಮುಖ್ಯಮಂತ್ರಿಯಾಗಿದ್ದ ವೈ.ಎಸ್.ರಾಜಶೇಖರ ರೆಡ್ಡಿಯವರೂ ಶಾಮೀಲಾಗಿದ್ದರು ಎಂಬುದು ಒಂದು ಬಗೆಯ ಬಹಿರಂಗ ರಹಸ್ಯ. ಇಂದು ವೈಎಸ್‌ಆರ್ ಇಲ್ಲ. ರೋಸಯ್ಯ ಆಂಧ್ರದ ಮುಖ್ಯಮಂತ್ರಿ.

ಈ ಹಿಂದೆ ಅರಣ್ಯ ಕಾಯ್ದೆಯನ್ನು ಉಲ್ಲಂಘಿಸಿ ಈ ಗಣಿ ಲೂಟಿಕೋರರ ಲೂಟಿಗೆ ಸರ್ಕಾರ ನೇರವಾಗಿ ನಿಂತು ಸಹಕಾರ ನೀಡಿರುವುದಕ್ಕೆ ಈಗ ಸಾಕ್ಷಿಗಳೆಲ್ಲಾ ಲಭ್ಯವಾಗುತ್ತಿವೆ. ಅರಣ್ಯ ಕಾಯ್ದೆಗೆ ವಿರುದ್ಧವಾಗಿ ಅದಿರು ಸಾಗಾಣೆಗೆ ರಸ್ತೆ ನಿರ್ಮಿಸಲು ಅವಕಾಶ ಮಾಡಿಕೊಡಲಾಗಿದೆ.

ಅನುಮತಿ ಇಲ್ಲದ, ಉತ್ಕೃಷ್ಟ ದರ್ಜೆಯ ಅದಿರು ದೊರೆಯುವ ಪ್ರದೇಶದಿಂದ ಲಕ್ಷಾಂತರ ಟನ್ ಅದಿರು ತೋಡಿ, ಈ ಅಕ್ರಮ ರಸ್ತೆಯ ಮೂಲಕ ಆಂಧ್ರ ಪ್ರದೇಶಕ್ಕೆ ಸಾಗಿಸಲಾಗಿದೆಯಂತೆ.

ಈ ಅಕ್ರಮಗಳ ಕುರಿತು ಹೀಗೆ ತೋಡುತ್ತಾ ಹೋದರೆ ಇನ್ನೂ ಎಂತೆಂತಹ ದುಷ್ಕೃತ್ಯಗಳು ಬಯಲಾಗುತ್ತವೋ ಏನೋ. ಆದರೆ ನಿಷ್ಪಕ್ಷಪಾತ ತನಿಖೆ ನಡೆಯುತ್ತದೆಯೇ? ಮುಂದುವರಿಯುತ್ತದೆಯೇ? ಎಂಬುದು ಪ್ರಶ್ನೆ. ಏಕೆಂದರೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ. ಆಂಧ್ರದಲ್ಲಿ ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ, ಯಾವ ಹಂತದಲ್ಲಿ ಎಲ್ಲಿಂದ ಯಾವ ಒತ್ತಡ ಎದ್ದುಬರುತ್ತದೋ! ರೋಸಯ್ಯ ಸರ್ಕಾರದ ಮೇಲೆ ಈಗಾಗಲೇ ಅಂತಹ ಒತ್ತಡ ಬಿದ್ದಿದೆ ಎಂಬಂತಹ ಲಕ್ಷಣಗಳು ಕಂಡುಬರುತ್ತಿವೆ.

ಜಗದಗಲ

ಶರತ್‌ಚಂದ್ರ

ಒಬಾಮಾ ಸಾರ್ ! ಅಮೆರಿಕದ ಪಡೆಗಳನ್ನು ಅಫಘಾನಿಸ್ತಾನದಿಂದ ವಾಪಸು ಕರೆಸಿಕೊಂಡು, ನೀವು ಶಾಂತಿ ಪ್ರಶಸ್ತಿಗೆ ಹಕ್ಕುದಾರ ಯಾಕೆ ಆಗಬಾರದು ?

ಇತ್ತೀಚಿಗೆ ನಡೆದ - ಪಾಕಿಸ್ತಾನದ ಭದ್ರತಾ ಪಡೆಗಳ ಪ್ರಮುಖ ತಾಣಗಳ ಮೇಲೆ ದಿಟ್ಟ ದಾಳಿ, ಪೇಶಾವರ್‌ನ ಪ್ರಸಿದ್ಧ ಮೀನಾ ಬಜಾರ್‌ನಲ್ಲಿ ನರಮೇಧ, ಕಾಬೂಲ್‌ನಲ್ಲಿ ಭಾರತೀಯ ರಾಯಭಾರ ಕಚೇರಿ ಮೇಲೆ ದಾಳಿ - ಒಂದು ಆತಂಕಕಾರಿ ಬೆಳವಣಿಗೆ. ಪಾಕಿಸ್ತಾನ ಮತ್ತು ಅಮೆರಿಕನ್ ಪಡೆಗಳು ನಡೆಸುತ್ತಿರುವ ದಾಳಿಯಿಂದ ತಾಲಿಬಾನ್ ಹುಟ್ಟಡಗ್ಗಿಸಲಾಗಿದೆ, ಅದು ಬಲಹೀನವಾಗಿದೆ ಎಂಬ ಆ ಸರ್ಕಾರಗಳ ಹೇಳಿಕೆಗಳು ನಿಜವಲ್ಲ. ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದಲ್ಲಿ ತಾಲಿಬಾನ್ ಭಯೋತ್ಪಾದನೆ ಹಿಂದಿಗಿಂತಲೂ ಪ್ರಬಲವಾಗುತ್ತಿದೆ ಎಂದು ಇದು ತೋರಿಸುತ್ತದೆ. ಕಳೆದ 8 ವರ್ಷಗಳಲ್ಲಿ ಅಫ್ಘಾನಿಸ್ತಾನದಲ್ಲಿ ಅಮೆರಿಕ ಆರಂಭಿಸಿದ 'ಭಯೋತ್ಪಾದನೆ ವಿರುದ್ಧ ಕೊನೆಯಿಲ್ಲದ ಹೋರಾಟ'ಕ್ಕೆ ನಿಜವಾಗಲೂ ಕೊನೆಯಿದ್ದಂತಿಲ್ಲ. ಆ ಹೋರಾಟದಲ್ಲಿ ಅದು ಗೆಲ್ಲುವ ಯಾವ ಲಕ್ಷಣಗಳೂ ಇಲ್ಲ. ಬದಲಾಗಿ ಅದರ 'ಹೋರಾಟ' ಭಯೋತ್ಪಾದನೆಯನ್ನು ಬಲ ಪಡಿಸಿದೆ. ದಕ್ಷಿಣ ಏಶ್ಯಾದ ಇಡೀ ಪ್ರದೇಶವನ್ನು ಇನ್ನಷ್ಟೂ ಹೆಚ್ಚು ಆತಂಕ, ಅಭದ್ರತೆಗೆ ತಳ್ಳಿದೆ.

ಅಮೆರಿಕದ ಅಫ್ಘಾನ್-ಪಾಕ್ ನೀತಿ ವಿಫಲವಾಗಿದೆ ಎಂದು ಅಧ್ಯಕ್ಷ ಒಬಾಮಾ ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಆದರೆ ಅಮೆರಿಕದ ಹಿಂದಿನ ಎಲ್ಲಾ ಅಧ್ಯಕ್ಷ ಮತ್ತು ಸರ್ಕಾರಗಳಂತೆ ಮಿಲಿಟರಿ ನೀತಿ ವಿಫಲವಾದಾಗ ಇನ್ನಷ್ಟು ಮಿಲಿಟರಿ ಪಡೆಗಳನ್ನು ಕಳಿಸುವ ಹಾಸ್ಯಾಸ್ಪದ ನೀತಿ ಅನುಸರಿಸಲು ಅವರ ಮೇಲೆ ತೀವ್ರ ಒತ್ತಡ ಇದೆ. ಅಫ್ಘಾನಿಸ್ತಾನದಲ್ಲಿ ಅಮೆರಿಕನ್ ಪಡೆಗಳ ಮುಖ್ಯಸ್ಥ 40 ಸಾವಿರ ಹೆಚ್ಚುವರಿ ಪಡೆಗಳನ್ನು ಕಳಿಸಲು ಕೇಳಿದ್ದಾರೆ. ಒಬಾಮಾ ಈ ವರೆಗೆ ಈ ಸಲಹೆಗೆ ಒಪ್ಪಿಗೆ ನೀಡದಿದ್ದರೂ ಪಡೆಗಳನ್ನು 'ಬಲ ಪಡಿಸುವುದು' ಅಗತ್ಯ ಎಂದಿದ್ದಾರೆ. ಇತರ ನಾಟೋ ದೇಶಗಳು ಹೆಚ್ಚುವರಿ ಪಡೆಗಳನ್ನು ಕಳಿಸುವ ಬದಲು ಅಲ್ಲಿಂದ ಕಾಲ್ತೆಗೆಯುವ ಹವಣಿಕೆಯಲ್ಲಿವೆ. ಮಧ್ಯ ಏಶ್ಯಾದ ತೈಲ-ಗ್ಯಾಸ್ ಶ್ರೀಮಂತ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸುವುದು ಅಮೆರಿಕದ ನಿಜವಾದ ಉದ್ದೇಶ ಎಂಬುದು ಯಾರಿಗೂ ತಿಳಿಯದ ವಿಷಯವಲ್ಲ. ಅದಕ್ಕಾಗಿ ಈ ಪ್ರದೇಶದಲ್ಲಿ ಮೂಗು ತೂರಿಸಲು 1980 ರ ದಶಕದಲ್ಲಿ ಅದು 'ಇಸ್ಲಾಮಿಕ್ ಭಯೋತ್ಪಾದನೆ' ಯನ್ನು ಹುಟ್ಟು ಹಾಕಿತ್ತು. ಅದರಲ್ಲಿ ಪಾಕಿಸ್ತಾನದ ಮಿಲಿಟರಿ ಸಕ್ರಿಯವಾಗಿ ಸಹಕರಿಸಿತ್ತು. ಅಮೆರಿಕ-ಪಾಕಿಸ್ತಾನಗಳ ಸರ್ಕಾರ-ಮಿಲಿಟರಿಗಳು ಹುಟ್ಟು ಹಾಕಿದ ಈ ಪೆಡಂಭೂತ ಅವರನ್ನೇ ಬೆದರಿಸುತ್ತಿವೆ. ಅವರ ಈ ಕುಕೃತ್ಯಗಳ ನಷ್ಟದ ವೆಚ್ಚವನ್ನು ಮತ್ತು ದುಷ್ಪರಿಣಾಮಗಳನ್ನು ಎಲ್ಲರೂ ಹಂಚಿಕೊಳ್ಳುವಂತೆ ಮಾಡುವುದು 'ಭಯೋತ್ಪಾದನೆ ವಿರುದ್ಧ ಕೊನೆಯಿಲ್ಲದ ಹೋರಾಟ' ದ ನಿಜವಾದ ಉದ್ದೇಶ. ಆ ಹೋರಾಟದ ಪೊಳ್ಳು ಈಗ ಬಯಲಾಗಿದೆ. ಅವರ ಯುರೋಪಿಯನ್ ನಿಕಟ ಮಿತ್ರರು ಸಹ ಈ ಭಾರ ಹೊರಲು ತಯಾರಿಲ್ಲ. ಆದ್ದರಿಂದ ಅದರ ಭಾರ ಹೊರಲು ಹೊಸ 'ಬಕರಾ' ಗಳಿಗೆ ಹುಡುಕಾಟ ನಡೆದಿದೆ. ಅಫ್ಘಾನಿಸ್ತಾನದ ಸಮಸ್ಯೆ ಬಗೆಹರಿಸಲು ವಿಶ್ವ ಸಂಸ್ಥೆಯ ಮಹಾ ಕಾರ್ಯದರ್ಶಿ ಒಂದು ಅಂತರ್‍ರಾಷ್ಟ್ರೀಯ ಸಮ್ಮೇಳನ ಕರೆಯಬೇಕು ಅಂತ ಜರ್ಮನಿ ಮತ್ತು ಬ್ರಿಟನ್ ಸಲಹೆ ಮಾಡಿವೆ. ಅಮೆರಿಕದ ಸೈನ್ಯದ ಬದಲು ವಿಶ್ವ ಸಂಸ್ಥೆಯ ನಾಯಕತ್ವದಲ್ಲಿ ಇಸ್ಲಾಮಿಕ್ ದೇಶಗಳ ಪಡೆಗಳು ಅಫ್ಘಾನಿಸ್ತಾನದ 'ಕಾನೂನು ವ್ಯವಸ್ಥೆ'ಯ ಉಸ್ತುವಾರಿ ಮಾಡಬೇಕು ಎಂದು ಆ ದೇಶದ ಒಬ್ಬ ಮಾಜೀ ವಿದೇಶ ಮಂತ್ರಿ ಸಲಹೆ ಮಾಡಿದ್ದಾರೆ. ಭಾರತವನ್ನೂ ಈ 'ಬಕರಾ' ಕೆಲಸಕ್ಕೆ ಎಳೆಯುವ ಹುನ್ನಾರ ನಡೆಯಬಹುದು.

ಆದರೆ ಈ 'ಹೊಸ' ನೀತಿ ಹಳೆಯ ಸಾಮ್ರಾಜ್ಯಶಾಹಿ ಮಿಲಿಟರಿ ನೀತಿಯ ಹೊಸ ರೂಪ ಎಂದು ತಿಳಿಯಬೇಕು. ಯಾವುದೇ ದೇಶದ ಜನ ತಮ್ಮ ಬದುಕು, ಭವಿಷ್ಯ ರೂಪಿಸಲು ಸ್ವತಂತ್ರರಿರಬೇಕು. ಹೊರಗಣ ಶಕ್ತಿಗಳು ಅದನ್ನು ಮಾಡಲು (ಅದರಲ್ಲೂ ಮಿಲಿಟರಿ ಬಲ ಪ್ರಯೋಗದ ಮೂಲಕ) ಪ್ರಯತ್ನಿಸಿದರೆ ಅದು ಸಫಲವಾಗದು. ಅಫ್ಘಾನಿಸ್ತಾನದ

ಮಟ್ಟಿಗೆ ಇದು ಹೆಚ್ಚು ನಿಜ. ಅದನ್ನು ಮ
ಜಗತ್ತಿನ ಸೂಪರ್ ಪವರ್ ಆಗಿದ್ದಾಗ ಬ್ರಿ
ಮೂರು ಯುದ್ಧಗಳ ನಂತರವೂ ಆಗಲಿಲ್ಲ.
ಹಿಂದೆ ಮೊಗಲರಿಗೂ ಆಗಿರಲಿಲ್ಲ. ಈಗಿನ ಸ
ಪವರ್ ಅಮೆರಿಕ ಸಹ ಅದರಲ್ಲಿ ವಿಫಲ
ಆದ್ದರಿಂದ ಎಲ್ಲಾ ಪಡೆಗಳು ಆ ದೇಶದಿಂದ ಕ
ಅಫ್ಘನರಿಗೆ ಅವರ ಭವಿಷ್ಯ ರೂಪಿಸಲು ಬಿಡ
ಒಂದೇ ಪರಿಹಾರ.

ಈ ನಡುವೆ ಅಫ್ಘಾನಿಸ್ತಾನದ ಅ
ಚುನಾವಣೆಯ ಪ್ರಹಸನ ಹೊಸ ರೋಚಕ
ಪಡೆದಿದೆ. ಚುನಾವಣೆಯಲ್ಲಿ ಮೋಸ ನ
ಕರ್ಜಾಯಿಗೆ ಶೇ. 50 ಮತ ಸಿಕ್ಕಿಲ್ಲ
ಒಪ್ಪಿಕೊಂಡು, ಎರಡನೇ ಸುತ್ತಿನ ಚುನಾ
ಆದೇಶವಾಗಿತ್ತು. ಆದರೆ ವಿರೋಧ ಪಕ್ಷದ ಅ
ತಾನು ಈ ಚುನಾವಣೆಯಿಂದ ಹಿಂತೆಗೆಯು
ಘೋಷಿಸಿದ್ದಾರೆ. ಹಾಗೆ ಮಾಡುವುದು ಕ
ಮತ್ತು ಸಂವಿಧಾನದ ಪ್ರಕಾರ ಸಾಧ್ಯವೇ
ಯಾರಿಗೂ ಗೊತ್ತಿಲ್ಲ. ಅಮೆರಿಕದ ಕೈಗ
ಕರ್ಜಾಯಿ ಅಧಿಕಾರದಲ್ಲಿ ಮುಂದುವರೆಯ
ಆದರೆ ತಾನು ಎರಡನೇ ಬಾರಿ 'ಚುನಾಯಿತ
ಅಂತ ಅಮೆರಿಕನ್ನರ ಜತೆ 'ಗಾಂ
ಮಾಡಬಾರದು. ಇದಕ್ಕಾಗಿ ಇದು ಅಮೆರಿಕ ಪ
ನಾಟಕ ಅಂತ ರಾಜಕೀಯ ವೀಕ್ಷಕರ ಗುಸು

ಅಮೆರಿಕದ ಪಡೆಗಳನ್ನು ಅಫ್ಘಾನಿಸ್ತಾ
ವಾಪಸು ಕರೆಸಿಕೊಂಡು, 'ಭಯೋತ್ಪಾದನೆ
ಯುದ್ಧ' ಮತ್ತು 'ಅಫ್ಘಾನಿಸ್ತಾನದಲ್ಲಿ ಪ್ರಜಾ
ಸ್ಥಾಪಿಸುವ ಪ್ರಹಸನ' ಗಳನ್ನು ನಿಲ್ಲಿಸಿ ಅಧ್ಯಕ್ಷ ಒ
ನಿಜವಾಗಿಯೂ ನೊಬೆಲ್ ಶಾಂತಿ ಪ್ರಶಸ್ತಿಗೆ ಹ
ಆಗಬಾರದು ?

ಒಬಾಮಾ ಸರ್! ನಿಮ್ಮನ್ನೇ ಕೇಳುತ್ತಿರು

ಗ್ರೀಕ್ ಮತ್ತು ಪೋರ್ಚುಗಲ್ ಸೋಶಲಿಸ್ಟರಿಗೆ ಜಯ

ಗ್ರೀಕ್ ಚುನಾವಣೆಗಳಲ್ಲಿ ಪಾಸೊಕ್ ಎಂದು ಕರೆಯಲಾಗುವ ಗ್ರೀಕ್ ಸೋಶಲಿಸ್ಟ್ ಪಾರ್ಟಿ, ಹಿಂದೆ ಆಳುತ್ತಿದ್ದ ಎನ್.ಡಿ. (ಬಲಪಂಥೀಯ) ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸಿದೆ. ಎನ್.ಡಿ. ಪಕ್ಷ ಹಿಂದಿನ ಚುನಾವಣೆಗೆ ಹೋಲಿಸಿದರೆ ಮತಗಳಿಕೆಯಲ್ಲಿ ಶೇ. 41.8 ರಿಂದ 33.49 ಕ್ಕೆ ಕುಸಿದಿದ್ದು, ಸೀಟುಗಳಲ್ಲಿ ಸಹ 152 ರಿಂದ 91 ಕ್ಕೆ ಕುಸಿದಿದೆ. ಪಾಸೊಕ್ ಮತಗಳಿಕೆ ಶೇ. 38.1 ರಿಂದ 43.9 ಕ್ಕೆ ಮತ್ತು ಸೀಟುಗಳ ಸಂಖ್ಯೆ 102 ರಿಂದ 160 ಕ್ಕೆ ಏರಿದೆ. ಮೂರನೇ ಶಕ್ತಿಯಾದ ಕೆ.ಕೆ.ಇ. ಎಂದು ಕರೆಯಲಾಗುವ ಗ್ರೀಕ್ ಕಮ್ಯುನಿಸ್ಟ್ ಪಕ್ಷ ಮತಗಳಿಕೆ (8.15 ರಿಂದ 7.54) ಮತ್ತು ಸೀಟುಗಳಲ್ಲಿ (22 ರಿಂದ 21) ಸ್ವಲ್ಪ ಕಡಿಮೆಯಾಗಿದೆ. ತೀವ್ರವಾದಿ ಬಲಪಂಥೀಯ ಪಕ್ಷದ ಮತಗಳಿಕೆ ಶೇ. 3.8 ರಿಂದ 5.6 ಕ್ಕೆ ಮತ್ತು ಸೀಟುಗಳ ಸಂಖ್ಯೆ 10 ರಿಂದ 15 ಕ್ಕೆ ಹೆಚ್ಚಿದೆ.

11 ವರ್ಷಗಳ ಕಾಲ ಅಧಿಕಾರ ನಡೆಸಿದ ಎನ್.ಡಿ. ಪಕ್ಷದ ಸರ್ಕಾರ ಜನ-ವಿರೋಧಿ ಬಲಪಂಥೀಯ ನೀತಿಗಳು ಮತ್ತು ವ್ಯಾಪಕ ಭ್ರಷ್ಟಾಚಾರಕ್ಕೆ ಕುಖ್ಯಾತವಾಗಿತ್ತು. ಅದರ ಅವಧಿಯ 2 ವರ್ಷಗಳ ಮೊದಲೇ ಚುನಾವಣೆ ನಡೆಸಿತ್ತು. ಎನ್.ಡಿ. ಸರ್ಕಾರ ಆರ್ಥಿಕ ಕುಸಿತದಿಂದ ಸಂತ್ರಸ್ತ ಜನರ ಸಮಸ್ಯೆಗಳ ಪರಿಹಾರಕ್ಕೆ ಏನೂ ಮಾಡದೆ ಉಂಟಾದ ವ್ಯಾಪಕ ಅತೃಪ್ತಿಯನ್ನು ಲೆಕ್ಕಿಸದೆ, ದೈತ್ಯ ಕಂಪನಿಗಳ 'ಬೇಲ್ ಔಟ್' ನಲ್ಲಿ ನಿರತವಾಗಿತ್ತು. ಇದಕ್ಕಾಗಿ ಜನ ಎನ್.ಡಿ. ಪಕ್ಷಕ್ಕೆ ಬುದ್ಧಿ ಕಲಿಸಿದ್ದಾರೆ. ಆದರೆ ಪಾಸೋಕ್ ಅಧಿಕಾರಕ್ಕೆ ಬಂದಿರುವುದರಿಂದ ನೀತಿಗಳಲ್ಲಿ ದೊಡ್ಡ ಬದಲಾವಣೆ ನಿರೀಕ್ಷಿಸುವಂತಿಲ್ಲ. ಈ ಎರಡು ಪಕ್ಷಗಳು ಆಳುವ ವರ್ಗಗಳ 'ಎ' ಟೀಂ 'ಬಿ' ಟೀಂ ನಂತಿದ್ದು, ಹಲವು ದಶಕಗಳಿಂದ ಅದೇ ನೀತಿಗಳನ್ನು ಪಾಲಿಸುತ್ತಾ ಬಂದಿವೆ. ಪಾಸೊಕ್ ಜನರ ಸಂಕಷ್ಟಗಳಿಗೆ ಸ್ವಲ್ಪ ಅನುಕಂಪ ತೋರಿಸುತ್ತದೆ ಅಂತ ಬಿಟ್ಟರೆ ಭಾರೀ ಏನು ವ್ಯತ್ಯಾಸ ಇಲ್ಲ.

ಆಳುವ ವರ್ಗಗಳ ಎ ಟೀಂ, ಬಿ ಟೀಂಗಳ ಅದಲಿ ಬದಲಿ

ಪೋರ್ಚುಗಲ್ ಚುನಾವಣೆಗಳಲ್ಲಿ ಆಳುತ್ತಿದ್ದ ಸೋಶಲಿಸ್ಟ್ ಪಕ್ಷ ಮತಗಳಿಕೆ ಮತ್ತು ಸೀಟುಗಳ ಸಂಖ್ಯೆಯಲ್ಲಿ ಸಾಕಷ್ಟು ಏಟು ತಿಂದರೂ ಅಧಿಕಾರ ಉಳಿಸಿಕೊಂಡಿದೆ. ಅದರ ಮತಗಳಿಕೆ ಶೇ. 45 ರಿಂದ ಶೇ. 36.5 ಕ್ಕೆ ಕುಸಿದಿದೆ. 230 ಸೀಟುಗಳ ಪಾರ್ಲಿಮೆಂಟಿನಲ್ಲಿ ಅದರ ಪಾಲು 121 ಸೀಟುಗಳಿಂದ 97 ಕ್ಕೆ ಕುಸಿದಿದೆ. ಅದು ನಿಚ್ಚಳ ಬಹುಮತ ಗಳಿಸಿಲ್ಲ. ಇನ್ನೊಂದು ಆಳುವ ವರ್ಗಗಳ ಪಕ್ಷ ಪಿ.ಎಸ್.ಡಿ. ಸ್ವಾಭಾವಿಕವಾಗಿಯೇ ಅದರ ಪ್ರಯೋಜನ ಪಡೆದಿದೆ. ಅದು ಶೇ. 29 ಮತ ಗಳಿಸಿ ತನ್ನ ಸೀಟುಗಳ ಸಂಖ್ಯೆಯನ್ನು 75 ರಿಂದ 81ಕ್ಕೆ ಹೆಚ್ಚಿಸಿಕೊಂಡಿದೆ. ಕಮ್ಯುನಿಸ್ಟ್ ಪಕ್ಷ ಗ್ರೀನ್ ಪಕ್ಷದ ಜತೆ ಕೂಟ ರಚಿಸಿ ಚುನಾವಣೆ ಸ್ಪರ್ಧಿಸಿದ್ದು ಒಂದು ಸೀಟು ಮತ್ತು ಶೇ. 0.3 ಮತಗಳಿಕೆ ಹೆಚ್ಚಿಸಿಕೊಂಡಿದೆ.

ಪೋರ್ಚುಗಲ್‌ನಲ್ಲೂ 1974 ರಿಂದ ಆಳುವ ವರ್ಗಗಳ 'ಎ' ಮತ್ತು 'ಬಿ' ಟೀಂ ನಂತಿರುವ ಸೋಶಲಿಸ್ಟ್ ಮತ್ತು ಪಿ.ಎಸ್.ಡಿ. ಪಕ್ಷಗಳು ಸರದಿಯಂತೆ ಅಧಿಕಾರ ವಹಿಸಿಕೊಂಡು ಅದೇ ನೀತಿಗಳನ್ನು ಅನುಸರಿಸುತ್ತಾ ಬಂದಿವೆ. ಎರಡೂ

ಪಕ್ಷಗಳ ವಿರುದ್ಧ ಜನ ತಮ್ಮ ಆಕ್ರೋಶ ಮತ್ತು
ವ್ಯಕ್ತ ಪಡಿಸಿದ್ದಾರೆ. ಸೋಶಲಿಸ್ಟ್ ಪಕ್ಷಕ್ಕೆ ಮ
ಮತ್ತು ನಿಚ್ಚಳ ಬಹುಮತ ಕೊಡದಿರುವ ಮ
ಪಿ.ಎಸ್.ಡಿ. ಗೆ ನಿಚ್ಚಳ ಬಹುಮತ ಕೊಡ
ಮೂಲಕ.

ಇತ್ತೀಚಿಗೆ ಚುನಾವಣೆ ನಡೆದಿರುವ ಜ
ಗ್ರೀಸ್, ಪೋರ್ಚುಗಲ್ ನಲ್ಲಿ ಜನ ಮುಖ್ಯ ರ
(ಆಳುವ ವರ್ಗಗಳ) ಪಕ್ಷಗಳಿಂದು ಅನ್ನಿಸಿಕೆ
ಪಕ್ಷಗಳ ಮತ್ತು ಅವರ ನೀತಿಗಳ ವಿರುದ್ಧ ಜನ
ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ ಈ
ದೇಶಗಳಲ್ಲೂ ಆಳುವ ವರ್ಗಗಳ ನೀತಿಗಳ
ಸತತ ದೃಢ ಹೋರಾಟ ಮತ್ತು ಬದಲಿ ನೀ
ಇಡುತ್ತಿರುವ ಕಮ್ಯುನಿಸ್ಟ್ ಪಕ್ಷಗಳನ್ನು
ಪ್ರಮಾಣದಲ್ಲಿ ಬೆಂಬಲಿಸಿಲ್ಲ. ಆಳುವ ವ
ಎರಡೂ ('ಎ' ಮತ್ತು 'ಬಿ') ಟೀಂ
ಅಧಿಕಾರದಿಂದ ಕಿತ್ತೆಸೆಯುವಷ್ಟು ಅವರ
ಪ್ರಬಲವಾಗಿಲ್ಲ. ಕಮ್ಯುನಿಸ್ಟ್ ಪಕ್ಷಗಳ
ಹೋರಾಟ ಮತ್ತು ನೀಡಿರುವ
ರಾಜಕೀಯದಿಂದ ಜನತೆ ಬಲಪಂಥೀಯ
ಫ್ಯಾಸಿಸ್ಟ್ ಪಕ್ಷಗಳತ್ತ ವಾಲುವುದು ತಪ್ಪಿದೆ.

ನವೆಂಬರ್ ಕ್ರಾಂತಿಯ ಪಾಠಗಳು...

ಟ 8 ರಿಂದ

ಮ ಮಾಡುವವರ ಮೇಲೆ, ಆಮೂಲಕ ತ್ಪಾದನಾ ಪ್ರಕ್ರಿಯೆಯಲ್ಲಿ ಸ್ವಲ್ಪ ಮಟ್ಟಿನ ಹತೋಟಿ, ಧಿಕಾರ ಹೊಂದಿರಬಹುದು.

ಆದರೆ ಬಂಡವಾಳಶಾಹಿ ಮುಂದುವರೆದಂತೆ ಇವು ಡಾ ಮಾಯವಾಗಿ ಕೆಲಸ ಮಾಡುವ ಎಲ್ಲರೂ ಂದೇ ಮಟ್ಟಕ್ಕೆ ಇಳಿಯುವ ಪ್ರಕ್ರಿಯೆಯೇ 'ಶ್ರಮ ೀವೀಕರಣ'. ಬೂರ್ಜ್ವಾ ಬುದ್ಧಿಜೀವಿಗಳು ೀಲಿಕಾಲರ್' ಮತ್ತು 'ಬಿಳಿಕಾಲರ್' ನೌಕರರ ಡುವಿನ ಅಂತರದ ಬಗ್ಗೆ ಸಾಮಾನ್ಯವಾಗಿ ಾತಾಡುತ್ತಾರೆ. ಆಧುನಿಕ ಸಮಾಜಗಳಲ್ಲಿ 'ನೀಲಿ ಲರ್' ಕಾರ್ಮಿಕರು ಮಾಯವಾಗಿ 'ಬಿಳಿಕಾಲರ್' ಕರರು ಹೆಚ್ಚಿನ 'ಕೆಲಸದ ಭದ್ರತೆ' ಪಡೆದು 'ಮಧ್ಯಮ ರ್ಗ' ಗಳಿಗೇರುತ್ತಾರೆ, ಈ ಮೂಲಕ ಮಾರ್ಕ್ಸ್ ಾತುಗಳು ಹುಸಿಯಾಗಿವೆ ಎಂದು ಪ್ರಚಾರ ಾಡಲಾಗುತ್ತಿದೆ. ಆದರೆ ಜಗತ್ತಿನಲ್ಲೆಲ್ಲ ಕಣ್ಣು ಯಿಸಿದರೆ 'ನೀಲಿ ಕಾಲರ್' ಎನ್ನಲಾಗುವ ರ್ಮಿಕ ವರ್ಗ ಮಾಯವಾಗಿಲ್ಲ ಎಂಬುದು ್ಪಷ್ಟವಾಗಿ ಕಾಣುತ್ತದೆ. ಭಾರತದಲ್ಲಂತೂ ಇಂತವರು ನ್ನೂ ಕೋಟ್ಯಂತರ ಸಂಖ್ಯೆಯಲ್ಲಿದ್ದಾರೆ.

ಭುತ್ವದ ಮಧ್ಯಪ್ರವೇಶ

ಮಾರ್ಕ್ಸ್ 1883 ರಲ್ಲಿ ಮರಣ ಹೊಂದಿದರು. ನಂತರ ಬಹಳಷ್ಟು ಬದಲಾವಣೆಗಳಾಗಿವೆ. ಆತ ಹಿಸಲಾರದಷ್ಟು ರೀತಿಯ ಬದಲಾವಣೆಗಳಾಗಿವೆ. ಂಡವಾಳಶಾಹಿ ತನ್ನನ್ನು ಹೊಸ ಬೆಳವಣಿಗೆಗಳಿಗೆ ಂದಿಸಿಕೊಳ್ಳುತ್ತಾ ತನ್ನೊಳಗಿನ ವೈರುಧ್ಯಗಳು ಗೊಳ್ಳಬೇಕಾದ ಕಾಲವನ್ನು (ಅಂದರೆ ಅದರ ತ್ಯವನ್ನು) ಮುಂದೂಡಿಕೊಂಡು ಬಂದಿದೆ. ಅದರ ವಿತಾವಧಿಯನ್ನು ವಿಸ್ತರಿಸುವಲ್ಲಿ ಪ್ರಭುತ್ವದ ಧ್ಯಪ್ರವೇಶ ಎಷ್ಟರ ಮಟ್ಟಿಗೆ ಸಾಧ್ಯವಾಗಬಹುದು ು ಬಗ್ಗೆ ಮಾರ್ಕ್ಸ್ ವಿಶ್ಲೇಷಿಸಲು ಸಾಧ್ಯವಿರಲಿಲ್ಲ. ಗೆ ಅದರ ಅಂತ್ಯವನ್ನು ಮುಂದೂಡುವಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದ 20 ನೇ ಶತಮಾನದ ಅರ್ಥಶಾಸ್ತ್ರಜ್ಞ ಎಂದರೆ ಜಾನ್ ಮೆನಾರ್ಡ್ ಕೀನ್ಸ್. ಖಾಸಗಿ ಉದ್ಯಮಿಗಳಿಗಾಗಿ ಬೃಹತ್ ಪ್ರಮಾಣದಲ್ಲಿ ಪ್ರಭುತ್ವದ (ಅಂದರೆ ಸಾರ್ವಜನಿಕ) ಹಣವನ್ನು ಹೂಡಿ ಬಂಡವಾಳಶಾಹಿ ವ್ಯವಸ್ಥೆಯನ್ನು ಉಳಿಸುವುದು ಅವರ ಗುರಿಯಾಗಿತ್ತು.

ಆದರೆ ನಂತರ ಬಂದ 'ಮೊನೆಟರಿಸಂ' ಅಥವಾ ಹಣ ಚಲಾವಣೆಯನ್ನೇ ಆಧರಿಸಿದ ಕ್ರಮಗಳ ಪ್ರತಿಪಾದಕರು ಮತ್ತು 'ನವ-ಉದಾರವಾದ' ಈ ಕೀನ್ಸ್‌ವಾದವನ್ನು ಬದಿಗೆ ತಳ್ಳಿ ಪ್ರಭುತ್ವ ಮಧ್ಯಪ್ರವೇಶಿಸಲೇ ಬಾರದು, ಎಲ್ಲವನ್ನೂ ಖಾಸಗಿ ಬಂಡವಾಳಿಗರಿಗೆ ಬಿಟ್ಟು ಬಿಡಬೇಕು ಎಂಬ ತತ್ವವನ್ನು ಜಾರಿಗೊಳಿಸಲಾರಂಭಿಸಿದರು. ಆದರೆ ಈಗ ಬಂಡವಾಳಶಾಹಿ ವ್ಯವಸ್ಥೆಗೆ ಪ್ರಭುತ್ವದ ಮಧ್ಯಪ್ರವೇಶ ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿದೆ. ಪ್ರಸ್ತುತ ಬಂಡವಾಳಶಾಹಿ ಬಿಕ್ಕಟ್ಟು ಇದನ್ನು ದೃಢಪಡಿಸಿದೆ.

ಇಲ್ಲಿ ಮಾರ್ಕ್ಸ್ 'ಪರಿಸರ ಸಮಸ್ಯೆ'ಯನ್ನೂ ಆಗಲೇ ಮುಂಗಂಡಿದ್ದರು ಎಂಬುದನ್ನೂ ಗಮನಿಸಬೇಕು. ಲಾಭ, ಸ್ವಯಂ ವಿಸ್ತರಣೆ ಮತ್ತು ಬಂಡವಾಳಶಾಹಿ ಶೇಖರಣೆಯ ಬೆನ್ನತ್ತಿರುವವರ ಮುಂದೆ ಯಾವುದೇ ಮಾನವೀಯ ಮೌಲ್ಯ, ಮಾನವ ಕುಲವನ್ನುಳಿಸುವ ಪ್ರಶ್ನೆಯೇ ಇರುವುದಿಲ್ಲ ಎಂದು ಅವರು ಹೇಳಿದ್ದರು.

ಇನ್ನೆಷ್ಟು ಕಾಲ ಕಾಯಬೇಕು?

ಈಗ ನಮ್ಮ ಮುಂದಿರುವ ಪ್ರಶ್ನೆ ಮಾನವೀಯ ಮೌಲ್ಯಗಳಿಲ್ಲದ ಈ ವ್ಯವಸ್ಥೆ ಅಳಿಯಲು ಮಾನವ ಕುಲ ಇನ್ನೆಷ್ಟು ಕಾಲ ಕಾಯಬೇಕು? 1998ರಲ್ಲಿ ನಾವು 'ಕಮ್ಯುನಿಸ್ಟ್ ಪ್ರಣಾಳಿಕೆ'ಯ 150 ನೇ ವಾರ್ಷಿಕೋತ್ಸವವನ್ನು ಆಚರಿಸಿದೆವು. ಇನ್ನೂ 150 ವರ್ಷ ಕಾಲ ಕಾಯಬೇಕೇ? ಬಂಡವಾಳಶಾಹಿ ಬದುಕುಳಿದರೆ ಆ ಪ್ರಶ್ನೆಯೆ ಉಳಿಯುವುದಿಲ್ಲ. ಏಕೆಂದರೆ ಆಗ ನಾವು ಒಂದೋ ಈ ವ್ಯವಸ್ಥೆಯ ರಾಕ್ಷಸೀ ಶೋಷಣೆ ಮತ್ತು ಪೋಲುತನದಿಂದ ಒಂದು ಮಹಾವಿನಾಶವನ್ನು ಕಾಣಬೇಕಾಗುತ್ತದೆ, ಇಲ್ಲವೇ ಮಾನವ ಕುಲ ಸಾಮಾಜಿಕ ಜೀವದ್ರವ್ಯವನ್ನು ನಿಯಂತ್ರಿಸುವ ಸಂಪೂರ್ಣ ಭಿನ್ನವಾದ ಒಂದು ದಾರಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಸಮಾಜವಾದವೋ ಅಥವಾ ಬರ್ಬರತೆಯೋ-ಆಯ್ಕೆ ನಿಮ್ಮದು ಎಂದು ಬಹಳ ಹಿಂದೆ ರೋಜಾ ಲಕ್ಸೆಂಬರ್ಗ್ ಕಮ್ಯುನಿಸ್ಟ್ ಆಂದೋಲನಕ್ಕೆ ಎಚ್ಚರಿಕೆ ನೀಡಿದ್ದರು.

ಪ್ರಭುತ್ವ ಕೆಲವರ ಸಂಪತ್ತನ್ನು, ವಿಶೇಷ ಸವಲತ್ತುಗಳನ್ನು ರಕ್ಷಿಸುತ್ತದೆ. ಯಾವುದೇ ಸರಕಾರ ವರ್ಗ ಸಂಘರ್ಷವನ್ನು ಸೀಮಿತಗೊಳಿಸಲು ಪ್ರಯತ್ನಿಸುತ್ತದೆ, ಕಾರ್ಮಿಕರ ಸಮರಧೀರ ಪ್ರತಿಭಟನೆಗಳನ್ನು ವಿರೋಧಿಸುತ್ತದೆ, ಆಮೂಲಕ ಅಂತಿಮವಾಗಿ ಬಂಡವಾಳಶಾಹಿಗಳ ಆಸ್ತಿಗಳನ್ನು, ಸವಲತ್ತುಗಳನ್ನು ರಕ್ಷಿಸಿಕೊಳ್ಳಲು ನೆರವಾಗುತ್ತದೆ.

ಸಾಮಾಜಿಕ ಕ್ರಾಂತಿಯ ಪರಿಕಲ್ಪನೆ

ಕ್ರಾಂತಿಯ ಮಾರ್ಕ್ಸ್‌ವಾದಿ ಪರಿಕಲ್ಪನೆಯಲ್ಲಿ ಸಾಮಾಜಿಕ ಜೀವನದ ಎಲ್ಲ ಆಯಾಮಗಳೂ ಆಳವಾದ ಪರಿವರ್ತನೆಗೊಳಗಾಗುತ್ತವೆ. ಒಮ್ಮೆ ಗಟ್ಟಿಯಾಗಿ ನೂಕಿದರೆ, ಅಥವಾ ಕೆಲವು ತಲೆಗಳನ್ನು ಕಡಿದು ಹಾಕಿದರೆ ಸಾಕು, ಎಲ್ಲವೂ ಒಂದೇ ಏಟಿಗೆ ಇತ್ಯರ್ಥವಾಗುತ್ತದೆ ಎಂಬ ಭಾರತದ ಮಾವೋವಾದಿಗಳ ವಿಚಾರ ಖಂಡಿತಾ ಮಾರ್ಕ್ಸ್‌ವಾದಿ ಪರಿಕಲ್ಪನೆಯಲ್ಲ. ಇದು ಹಿಂದೆ ಕೆಲಸ ಮಾಡಿಲ್ಲ. ಈಗಲೂ ಮಾಡುವುದಿಲ್ಲ. ಆದ್ದರಿಂದ ನಾವು ಸಾಮಾಜಿಕ ಕ್ರಾಂತಿಯ ಬಗ್ಗೆ ಮಾರ್ಕ್ಸ್ ಏನು ಹೇಳಿದ್ದಾರೆ ಎಂದು ನೆನೆಪಿಸಿಕೊಳ್ಳಬೇಕು.

ಮೂಲತಃ ಸಾಮಾಜಿಕ ಕ್ರಾಂತಿಯ ಈ ಪರಿಕಲ್ಪನೆ 1789ರ ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ಮೂಡಿಬಂತು. 1830ರ ದಶಕದಲ್ಲಿ, 1848ರ ವೇಳೆಗೆ ಇದು ಬಹಳ ಪ್ರಚಲಿತದಲ್ಲಿ ಬಂದಿತ್ತು. ಮಾರ್ಕ್ಸ್ ಸಹಜವಾಗಿಯೇ ಇದನ್ನೇ ಅಂಗೀಕರಿಸಿದರು.

ಒಂದು ತೀವ್ರಗಾಮಿ ಸಾಮಾಜಿಕ ಪರಿವರ್ತನೆಯಲ್ಲಿ ಸಾಮಾಜಿಕ ಜೀವದ್ರವ್ಯವನ್ನು ನಿಯಂತ್ರಿಸುವ ಹೊಸ ವಿಧಾನ ಸಮಾಜದ ಪ್ರತಿಯೊಂದು ಆಯಾಮವನ್ನೂ ಆವರಿಸಬೇಕು. ಈ ಅರ್ಥದಲ್ಲಿ ಒಂದು ಕ್ರಾಂತಿ ಕೇವಲ ನಿರ್ಮೂಲಗೊಳಿಸುವುದಿಲ್ಲ, ನೆಡುತ್ತದೆ ಕೂಡಾ. ಹೊಸ ಸೃಷ್ಟಿ ಹಳೆಯದರ ಲಯದ ಪ್ರಕ್ರಿಯೆಯ ಭಾಗವಾಗಿಯೇ ಬರುತ್ತದೆ. ತೀವ್ರಗಾಮಿಯಾಗುವುದೆಂದರೆ ವಿಷಯಗಳನ್ನು ಅದರ ಮೂಲದಲ್ಲಿ ಗ್ರಹಿಸುವುದು? ಎಂದೊಮ್ಮೆ ಮಾರ್ಕ್ಸ್ ಹೇಳಿದ್ದರು. ಇದು ಈಗಲೂ ಪ್ರಸ್ತುತ.

ಸಾಮಾಜಿಕ ಕ್ರಾಂತಿಯ ಮಾರ್ಕ್ಸ್‌ವಾದಿ ಪರಿಕಲ್ಪನೆ ಭಾರತದಲ್ಲೂ ಕ್ರಾಂತಿಕಾರಿ ಹೋರಾಟಕ್ಕೆ ಪ್ರಸ್ತುತವಾಗಿರುವ ಸಂಗತಿ. ಇದರಿಂದ ದೂರ ಸರಿದರೆ ಅದು ಕ್ರಾಂತಿಕಾರಿ ಹೋರಾಟಕ್ಕೆ ವಿಪತ್ಕಾರಿ.

ನವೆಂಬರ್ ಕ್ರಾಂತಿಯ ಪಾಠ

1991ರಲ್ಲಿ ಸೋವಿಯೆತ್ ಪಿನ್ನಡೆ ವಿಶ್ವ ಕಮ್ಯುನಿಸ್ಟ್ ಆಂದೋಲನದಲ್ಲಿ ಸೈದ್ಧಾಂತಿಕ ದಿಗ್ಭ್ರಮೆ ಉಂಟು ಮಾಡಿತೆಂಬುದು ನಿಜ. ಹಲವು ಕಮ್ಯುನಿಸ್ಟ್ ಪಕ್ಷಗಳು ಇನ್ನೂ ಅದರ ಆಘಾತದಿಂದ ಚೇತರಿಸಿಕೊಂಡಿಲ್ಲ. ಕೆಲವು ಸೋಶಲ್ ಡೆಮಾಕ್ರಟಿಕ್ ಸ್ವರೂಪ ಪಡೆದಿವೆ, ವರ್ಗ ಹೋರಾಟದ ಪರಿಕಲ್ಪನೆಯನ್ನು ತ್ಯಜಿಸಿ 'ಜ್ಞಾನೋದಯಗೊಂಡ ಬಂಡವಾಳಶಾಹಿ', 'ಮಾನವೀಯ ಮುಖದ ಜಾಗತೀಕರಣ' ಇತ್ಯಾದಿಗಳನ್ನು ನಂಬಲಾರಂಭಿಸಿವೆ. ವಾಸ್ತವವಾಗಿ ಇದರ ಅರ್ಥ ವಿಶ್ವ ಬಂಡವಾಳಶಾಹಿ ಅಭೂತಪೂರ್ವ ಬಿಕ್ಕಟ್ಟಿನಿಂದ ತತ್ತರಿಸುತ್ತಿರುವಾಗಲೇ ಕ್ರಾಂತಿಕಾರಿ ಬೆಳವಣಿಗೆಗಳಿಗೆ ಅಡ್ಡಿಯುಂಟು ಮಾಡಿ ಅಂತಿಮವಾಗಿ ಬಂಡವಾಳದ ಹಿತಾಸಕ್ತಿಗಳನ್ನು ನೆರವೇರಿಸುವುದು.

ಹೀಗೆ ಇಂದಿನ ಜಗತ್ತಿನಲ್ಲಿ ನವೆಂಬರ್ ಕ್ರಾಂತಿಯ ಪಾಠವೆಂದರೆ ಸಾಮಾಜಿಕ ಕ್ರಾಂತಿಯ ಮಾರ್ಕ್ಸ್‌ವಾದಿ ಪರಿಕಲ್ಪನೆಗೆ ಅಚಲವಾಗಿ ಬದ್ಧವಾಗಿರುವುದು ಮತ್ತು ಆಯಾಯ ದೇಶಗಳಲ್ಲಿ ಕ್ರಾಂತಿಕಾರಿ ಹೋರಾಟಗಳನ್ನು ಮುನ್ನಡೆಸುವುದು.

ಅಮೆರಿಕ ಅಪರಾಧಿ ನಂ. 1

2 ರಿಂದ

ಸುಳಿಗಳನ್ನೇ ಬದಲಿಸಬಲ್ಲದು ಕೂಡ. ಅಂತಹ ಾ ಯೋಜನೆಯು ಭಾರತದೊಳಗೆ ಹೆಚ್ಚಿನ ಾಬ್ದಾರಿಯುತ ಮತ್ತು ಸಾಮಾಜಿಕ ಾನತೆಯುಳ್ಳ ಅಭಿವೃದ್ಧಿ ಪಥದೆಡೆಗೆ ಒಯ್ಯಲು ಲ ಉತ್ತರದಾಯಿತ್ವವನ್ನು ಒದಗಿಸಬಲ್ಲುದು. ಬಹುತೇಕ ಗ್ರಾಮೀಣ ಪ್ರದೇಶಗಳ ಜನತೆಯಲ್ಲಿ ಅರ್ಧಕ್ಕೂ ಹೆಚ್ಚಿನ ಭಾರತೀಯ ುಂಬಗಳಿಗೆ ಆಧುನಿಕ ಇಂಧನ ಲಭ್ಯವಿಲ್ಲ. ಸಂಖ್ಯಾತ ಭಾರತೀಯ ಜನತೆಯ ಬಡ ಮಾನವ ದ್ಧಿಗೆ ಇಂಧನ ಅಸಮಾನತೆಯು ಒಂದು ಪ್ರಧಾನ ವೆನಿಸಿದೆ. ಸರ್ಕಾರದ ನೀತಿಗಳು ವಿಶೇಷವಾಗಿ 'ಜನತೆ' ಗಾಗಿ ಕೆಲಸ ಮಾಡುತ್ತವೆಂದು ಕೊಳ್ಳುವಂತಹವುಗಳನ್ನು ಇಂತಹ ವಿಭಾಗಗಳಿಗೆ ಇಂಧನ ಒದಗಿಸುವಲ್ಲಿ ನಿರ್ದಿಷ್ಟವಾಗಿ ರೂಪಿಸಬೇಕಿದೆ ಮತ್ತು ಇವು ಎಲ್ಲ ಬಡತನ ಾರ ಕಾರ್ಯಗಳ ಅಂತರ್ಗತ ಭಾಗವಾಗಬೇಕಿದೆ. ಇದು ಸಹಜವಾಗಿ ಮಲಿನಕಾರಕಗಳು ಹೆಚ್ಚಾಗುವಂತೆ ಮಾಡುವುದಿದ್ದು ಇದನ್ನು ಸಮಾಜದ ಮತ್ತು ಆರ್ಥಿಕತೆಯ ಶ್ರೀಮಂತ ವಿಭಾಗಗಳಿಗೆ ಸಂಬಂಧಿಸಿದ ಇಂಧನ ಸಂರಕ್ಷಣಾ ಕ್ರಮಗಳಿಂದ ಪರಿಹರಿಸಬೇಕು. ಕಾರ್ಪೋರೇಟ್ ಭಾರತವೂ ಕೂಡ ಪರಿಸರ, ಜನತೆಯ ಆರೋಗ್ಯ ಮತ್ತು ಸಾಮಾಜಿಕ ನ್ಯಾಯಕ್ಕೆ ಪೆಟ್ಟು ನೀಡದಂತಹ ಪಥದಲ್ಲಿ ಸಾಗಬೇಕು. ಸುಸ್ಥಿರ ಪರಿಸರ ಮತ್ತು ಸಾಮಾಜಿಕ ಸಮಾನತೆಯುಳ್ಳ ಅಭಿವೃದ್ಧಿ ಇವೆರಡೂ ಒಂದಕ್ಕೊಂದು ಅಂತರ್-ಸಂಬಂಧ ಹೊಂದಿವೆ. ಹವಾಮಾನ ನ್ಯಾಯ ಮತ್ತು ಸಾಮಾಜಿಕ ಸಮಾನತೆಯೆರಡನ್ನೂ ಉತ್ತೇಜಿಸುವ ಗುರಿಹೊಂದಿರುವ ದೇಶೀಯ ಮತ್ತು ಅಂತರಾಷ್ಟ್ರೀಯ ಕಾಳಜಿಗಳನ್ನು ಪರಿಗಣಿಸುವ ಸ್ಪಷ್ಟವಾದ ಮತ್ತು ಗುರಿ-ಕೇಂದ್ರಿತ ನೀತಿಗಳನ್ನು ಅಳವಡಿಸಿಕೊಳ್ಳಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಈ ಹಿನ್ನೆಲೆಯಲ್ಲಿ, ಕೆಳಕಂಡ ಬೇಡಿಕೆಗಳನ್ನು ಸಿಪಿಐ(ಎಂ) ಸರ್ಕಾರದ ಮುಂದಿಡುತ್ತದೆ:

- ಕ್ಯೋಟೋ ಮತ್ತು ಯುಎನ್ಎಫ್‌ಸಿಸಿಸಿ ಚೌಕಟ್ಟುಗಳನ್ನು ಬುಡಮೇಲು ಮಾಡಲು ಅಮೇರಿಕಾ ಮತ್ತು ಇತರೆ ಮುಂದುವರೆದ ರಾಷ್ಟ್ರಗಳ ಒತ್ತಡವನ್ನು ಭಾರತ ದೃಢವಾಗಿ ವಿರೋಧಿಸಬೇಕು ಮತ್ತು ಅಭಿವೃದ್ಧಿ ಹೊಂದಿರುವ ಮತ್ತು ಹೊಂದುತ್ತಿರುವ ರಾಷ್ಟ್ರಗಳಿಗಾಗಿ ಎಲ್ಲರೂ ಹೊರಬೇಕಾದ ಆದರೆ ವಿವಿಧ ಪ್ರಮಾಣದ ಜವಾಬ್ದಾರಿಗಳ ನೀತಿ ಪರ ನಿಲ್ಲಬೇಕು.
- ಚಾರಿತ್ರಿಕವಾಗಿ ಮಲಿನಕಾರಕಗಳಿಂದ ಉಂಟಾಗಿರುವ ಹಾನಿಗೆ ಪರಿಹಾರವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಹಣಕಾಸು ಮತ್ತು ತಂತ್ರಜ್ಞಾನ ವರ್ಗಾವಣೆ ನೆರವು ನೀಡಬೇಕೆಂದು ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳ ನಿರ್ಬಂಧಗಳಿಂದ ತಂತ್ರಜ್ಞಾನ ವರ್ಗಾವಣೆಯನ್ನು ಬಿಡುಗಡೆಗೊಳಿಸುವಂತೆ ಭಾರತವು ಒತ್ತಾಯ ಹಾಕುವುದನ್ನು ಮುಂದುವರೆಸಬೇಕು.
- ಭಾರತವು ವಾಯುಮಾಲಿನ್ಯಕಾರಕಗಳ ನಿಯಂತ್ರಣ ಮತ್ತು ಕಡಿತಕ್ಕಾಗಿ ಏಕಪಕ್ಷೀಯ ಕ್ರಮ ಕೈಗೊಳ್ಳದೆ, ಅಮೇರಿಕಾ ಮತ್ತು ಇತರ ಅಭಿವೃದ್ಧಿ ಹೊಂದಿರುವ ದೇಶಗಳು ಐಪಿಸಿಸಿ ಶಿಫಾರಸು ಮಾಡಿರುವ ಗುರಿಯನ್ನಯ ಹೊರಸೂಸುವಿಕೆಯ ತೀವ್ರತರ ಕಡಿತವನ್ನು ಅನುಸರಿಸುವ ಷರತ್ತಿನ ಮೇರೆಗೆ ಭಾರತ ಕ್ರಮಕ್ಕೆಗೊಳ್ಳಬೇಕು.
- ಭಾರತವು ಜಿ-5 ಗುಂಪಿನ ದೊಡ್ಡ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಮತ್ತು ಜಿ-77 ವಿಶೇಷವಾಗಿ ಕಡಿಮೆ ಅಭಿವೃದ್ಧಿ ಹೊಂದಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ಸಣ್ಣ ದ್ವೀಪ ರಾಷ್ಟ್ರಗಳೊಂದಿಗೆ ಕೆಲಸ ಮಾಡಬೇಕು ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಐಕ್ಯತೆಯನ್ನು ಕಾಪಾಡಬೇಕು.
- ಭಾರತದ ಹವಾಮಾನ ನೀತಿಗಳು ಭಾರತೀಯ ಬಡಜನತೆಯ ಹಿತಾಸಕ್ತಿಗಳನ್ನು ಕಾಪಾಡಲು ಮತ್ತು ಹವಾಮಾನ ಬದಲಾವಣೆಯ ದುಷ್ಪರಿಣಾಮಗಳಿಂದ ಅವರನ್ನು ಸಂರಕ್ಷಿಸುವ ಸಲುವಾಗಿ ಭಾರತವು ಜಾರಿಗೊಳಿಸುವ ಕ್ರಮಗಳ ಕುರಿತು ಮತ್ತು ದೇಶದೊಳಗಿನ ಇಂಧನ ಅಸಮಾನತೆಯನ್ನು ಕಡಿಮೆಗೊಳಿಸಲು ಕ್ರಿಯಾಶೀಲವಾಗಿ ಮುನ್ನಡೆಯಬೇಕು.

'ಒಂದೇಟು ಹೊಡೆದುಬಿಡು ಮಾಮ !'

ತುಮಕೂರು ಜಿಲ್ಲೆಯ ಗ್ರಾಮೀಣ ಭಾಗದ ಗಿರಿಜನ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದ ತುಂಬಾಡಿ ರಾಮಯ್ಯ ಅವರ ಆತ್ಮಕಥೆ 'ಮಣೆಗಾರ'ದ ಆಯ್ದ ಭಾಗ ಇದು. ಹಸಿವು ಮನುಷ್ಯನನ್ನು ಕಾಡುವ ಪರಿ, ನಮ್ಮ ಸಾಮಾಜಿಕ ವ್ಯವಸ್ಥೆಯ ಸ್ವರೂಪ ಈ ಮೂಲಕ ಗ್ರಹಿಸಲು ಇದು ಸಹಾಯಕ

ಕೊರಟಗೆರೆಯಲ್ಲಿ ನಾನು ಹೈಸ್ಕೂಲು ಓದುತ್ತಿದ್ದೆ. ತುಂಬಾಡಿಗೊಲ್ಲಹಳ್ಳಿಯಿಂದ ಆರು ಮೈಲಿ ದೂರದ ಕೊರಟಗೆರೆಗೆ ಪ್ರತಿದಿನ ನಡೆದುಹೋಗಬೇಕಾಗಿತ್ತು. ನಾನು ಸ್ಕೂಲಿಗೆ ಹೋಗುವ ಮುಂಚೆ ಹೊತ್ತಿನಂತೆ ಎದ್ದು ಕೊಟ್ಟಿಗೆಯ ಕಸಬಾಚಿ ತಿಪ್ಪೆಗೆ ಹಾಕಿ, ಹೊಲದ ಕಡೆ ಹೋಗಿ ದನಗಳಿಗೆ ಹುಲ್ಲು, ಕೊಟ್ಟಿಗೆಗೆ ಹಾಕಲು ಸೊಪ್ಪು ತಂದುಹಾಕಿ, ಕೊರಟಗೆರೆ ದಾರಿ ಹಿಡಿಯಬೇಕಾಗಿತ್ತು. ಇಷ್ಟೆಲ್ಲ ಮುಗಿಸಿ ಸ್ಕೂಲಿಗೆ ಹೋಗುವಾಗ, ಬಹಳಷ್ಟು ದಿನ ಹೊಟ್ಟೆಗಿಲ್ಲದೆ ಉಪವಾಸ ಹೋಗಬೇಕಾಗಿತ್ತು. ಒಂದೊಂದು ದಿನ ಬೇಯಿಸಿದ ಸೊಪ್ಪು, ಸೀಕಲ್ಗಾಳು ತಿಂದು ಹೋಗುತ್ತಿದ್ದೆ. ಸ್ಕೂಲು ಮುಗಿಸಿಕೊಂಡು ಕೊರಟಗೆರೆಯಿಂದ ವಾಪಸ್ಸು ಬರೋದು ಸಂಜೆ ಆರೇಳು ಗಂಟೆಯಾಗುತ್ತಿತ್ತು. ಹಸಿದು ಬಂದು ಮನೆಯಲ್ಲಿ ನೋಡಿದರೆ, ಅಮ್ಮ ಮಾಡಿಟ್ಟಿರುತ್ತಿದ್ದ ಹಿಟ್ಟನ್ನು ನನ್ನ ಅಣ್ಣಂದಿರೊ, ತಮ್ಮಂದಿರೋ ತಿಂದು ಮುಗಿಸಿರುತ್ತಿದ್ದರು. ಅಥವಾ ಮಡಕೆಯಲ್ಲಿ ಹಿಟ್ಟು ಇದ್ದರೂ ಹಳಸಿ ನೀರಾಗಿರುತ್ತಿತ್ತು. ಆದರಿಂದಾಗಿ ಕೂಲಿ, ನಾಲಿಗೋ ಹೋಗಿದ್ದ ಅಮ್ಮ ಬಂದು ರಾತ್ರಿ ಹಿಟ್ಟು ಮಾಡುವವರೆಗೂ ಹಸಿದುಕೊಂಡೇ ಇರುತ್ತಿದ್ದೆ.

ಒಂದು ದಿನ ಕೊರಟಗೆರೆಯಿಂದ ನಾಲ್ಕು ಗಂಟೆಗೇ ಸ್ಕೂಲು ಮುಗಿಸಿಕೊಂಡು ಮನೆಗೆ ಬಂದಿದ್ದೆ. ಬಂದವನೇ ಹಿಟ್ಟಿನ ಸೋರೆ ನೋಡಿದೆ. ಖಾಲಿ ಕಂಡಿತು. ಹೊಟ್ಟೆ ತಕತಕ ಅಂತಿತ್ತು. ಯಾವ ಮಡಕೆಯಲ್ಲಾದರೂ ತಿನ್ನುವುದಕ್ಕೆ ಏನಾದರೂ ಇದೆಯೇನೊ ಅಂತ ತಡಕಿದರೆ ಏನೂ ಸಿಗಲಿಲ್ಲ. ಬೇಸಿಗೆ ಕಾಲ. ತುಂಬಾಡಿಕೆರೆ ತುಂಬಿದ್ದರಿಂದ ಊರಿನ ಸುತ್ತ ಕಡ್ಲೆಗಿಡ ಹಾಕಿದ್ದರು. ನಮ್ಮ ಹಟ್ಟಿಯ ಸ್ವಲ್ಪ ದೂರದಲ್ಲೇ ವಡ್ಡರ ವೆಂಕಟಪ್ಪನ ಹೊಲ. ಅವರ ಹೊಲ ಸ್ವಲ್ಪ ತಗ್ಗಿನಲ್ಲಿದ್ದುದರಿಂದ ಹೊಲದಲ್ಲಿ ಕೂತರೆ ಯಾರಿಗೂ ಕಾಣಿಸುತ್ತಿರಲಿಲ್ಲ. ಅವರ ಕಡ್ಲೆಗಿಡ ಇದ್ದ ಹೊಲಕ್ಕೆ ಸೀದಾ ಹೋದವನೆ ಕೊನೆ ಸೀಳಿನಲ್ಲಿ ಕುಳಿತುಕೊಂಡು ಗಿಡದಲ್ಲಿದ್ದ ಕಡ್ಲೆಕಾಯನ್ನು ಒಂದೊಂದೇ ದೂಗೆದು ತಿನ್ನಲು ಮುಂದಾದೆ. ಆಗ ನನಗಿದ್ದ ಹಸಿವು ಸುತ್ತಲಿದ್ದುದನ್ನೆಲ್ಲಾ ಮರೆಸಿತ್ತು. ಬಳ್ಳಿ ಗಿಡವಾದ್ದರಿಂದ ಗಿಡ ಮುರಿಯದೆ ಕಡ್ಲೆಕಾಯಿ ಬಿಡಿಸಿ ತಿಂದು, ಬೇರನ್ನು ಮೊದಲಿನಂತೆ ನೆಲಕ್ಕೆ ಊರಿದರೆ, ಗಿಡಕ್ಕೆ ಏನೂ ಆಗಿಲ್ಲವೇನೋ ಎಂಬಂತೆ ಕಾಣುತ್ತಿತ್ತು. ಹೀಗೆ ನಾಲ್ಕೈದು ಗಿಡಬಿಡಿಸಿ ಕಾಯಿ ತಿಂದಿರಬೇಕು, ಏನೋ ಶಬ್ದವಾದಂತಾಗಿ ಕತ್ತೆತ್ತಿ ನೋಡಿದೆ. ವಡ್ಡರ ವೆಂಕಟಪ್ಪ (ಅವರನ್ನು ಮಾಮ ಎಂದು ಕರೆಯುತ್ತಿದ್ದೆ) ನನ್ನ ಮುಂದೆ ಯಮದೂತನಂತೆ ನಿಂತಿದ್ದರು. ಅವರನ್ನು ನೋಡಿದೊಡನೆಯೇ ನನ್ನ ಜಂಘಾಬಲವೆಲ್ಲವೂ ಉಡುಗಿಹೋಯಿತು. ನಿಧಾನವಾಗಿ ಎದ್ದುನಿಂತೆ. ಇನ್ನೇನು ಒದೆ ಬೀಳುತ್ತವೆಂದು ಉಚ್ಚೆಹುಯ್ದುಕೊಳ್ಳುವುದಕ್ಕೆ ರೆಡಿಯಾಗುತ್ತಿದ್ದೆ. (ನಾನು ಎಸ್‌ಎಸ್‌ಎಲ್‌ಸಿ ವರೆಗೂ ಯಾರಾದರೂ ಹೊಡೆದರೆ ಉಚ್ಚೆ ಹುಯ್ದುಕೊಳ್ಳುತ್ತಿದ್ದೆ). ಆದರೆ ನಾನು ನಿರೀಕ್ಷಿಸಿದಂತೆ ವೆಂಕಟಪ್ಪ ಮಾಮ ಹೊಡೆಯಲಿಲ್ಲ. 'ಬಾ ಹೊಲೇರ ಮುದ್ದಹನುಮಪ್ಪನ ಹತ್ತಿರ ನ್ಯಾಯ ಒಪ್ಪುಸ್ತೀನಿ. ನೀನ್ ಮಾಡಿದ್ದ ಸರಿಯೋ!' ಅಂದರು. ಅದಕ್ಕೆ ನಾನು 'ಒಂದೇಟು ಹೊಡೆದು ಬಿಡು ಮಾಮ! ಅವ್ರ ಹತ್ತಿರ ಹೋಗೋದು ಬ್ಯಾಡ, ಅವಮಾನವಾಗ್ತ್ಯತೆ' ಅಂತ ಅಂಗಲಾಚಿ ಬೇಡಿಕೊಂಡರೂ ಕೇಳಲಿಲ್ಲ. ನನ್ನ ಕೈಹಿಡಿ[...] ಎಳೆಯುತ್ತಾ ಊರಕಡೆ ಹೊರಟೇಬಿಟ್ಟ.

ಸಣ್ಣ ಹುಡುಗನಾದ ನನ್ನನ್ನು ಕಂಡರೆ ಹೊಲೆ[...] ಮುದ್ದಹನುಮಪ್ಪನವರಿಗೆ ಆದ್ಯಾಕೊ ಬಹಳ ಪ್ರೀ[...] ಅವರ ಮುಂದೆ ವಡ್ಡರ ವೆಂಕಟಪ್ಪನವರು, ನಾ[...] ಕದ್ದು ಕಡ್ಲೆಗಿಡ ತಿಂದದ್ದನ್ನು ನ್ಯಾಯ ಒಪ್ಪಿಸಿದರ[...] ನನಗೆ ಸತ್ತಷ್ಟು ಅವಮಾನವಾಗಿ ತಲೆತಗ್ಗಿಸಿಕೊಂ[...] ನಿಂತುಬಿಟ್ಟೆ. ಮುದ್ದಹನುಮಪ್ಪನವರು 'ಹೋ[...] ಬಿಡು ವೆಂಕಟಪ್ಪ, ಹುಡುಗ ಇಸ್ಕೂಲಿಗೆ ಹೋಗಿ[...] ವತರೆ ಉಂಡುಹೋಗಿದ್ದನೊ ಇಲ್ಲವೋ, ಹೊ[...] ಹಸೀತಿತ್ತು ಅಂತ ಕಾಣ್ತದೆ. ಎರಡು ಕಾ[...] ತಿಂದವನೆ' ಎಂದು ಹೇಳಿ, ನನಗೆ 'ಇನ್ನೊಂ[...] ದಿನ ಹಿಂಗೆ ಮಾಡೀಯ!' ಎಂದು ತಾಕೀ[...] ಮಾಡಿದರು.

ಹಾಗೆಂದ ಮೇಲೆ ವೆಂಕಟಪ್ಪನವರು ನ[...] ಕೈಬಿಟ್ಟರು. ಅವರು ಕೈಬಿಟ್ಟದ್ದೇ ತಡ, ನಾ[...] ಓಡಿಹೋಗಿ ಮನೆ ಸೇರಿಕೊಂ[...] ಅವಮಾನದಿಂದಾಗಿ ಹೊಟ್ಟೆಹಸಿತಿದ್ರೂ, ಹಿ[...] ಸೇರಲಿಲ್ಲ. ಮಲಗಿದರೆ ನಿದ್ರೆ ಕೂಡ ಬರಲಿ[...] ರಾತ್ರಿಯೆಲ್ಲಾ ಇದೇ ತಳಮಳ.

ಕವಿತೆ

ಎಲ್ಲಿದೆ ಅನ್ನ, ಎಲ್ಲವೂ ಚಿನ್ನ!

(ಕೆಲಸವಿಲ್ಲದವರ ಹಾಡು)



"ಹೂ ಆ ಹೂ ಆ ಹೂ ಆ ಹೂ ಆ
ಅಹಮಹಮನ್ನಂ ಅಹಮನ್ನಾದೋ
ಅಹಮನ್ನಾದ:" ಇದುವೆ ಸುನಾದ
ಸಾಮವೇದದಾ ಸಾಮವೆ ಆಹಾ!
ಪ್ರಾಣದ ಗೀತ ಮಧುಸಂಗೀತ
ಹೇಳಲಿ ಸತ್ಯವಿ, ಕೇಳಲು ಈ ಕಿವಿ
ಹುಟ್ಟಾ ತೆರೆದಿವೆ, ಹಸಿದಿಹವಿನ್ನೂ,
ಭವಿತವ್ಯತೆಯೇ 'ತಥಾಸ್ತು' ಎನ್ನು;
ಎನ್ನೇ ಎನ್ನು ಎನುತಿದೆ ಪ್ರಾಣ
ಉಳಿಯುವವರೆಗೆ ಕಂಠತ್ರಾಣ
ಆದರಿನ್ನು ತಿನ್ನುವುದೇನನ್ನ?
ಅನ್ನವೆಲ್ಲವೂ ಆಯಿತು ಚಿನ್ನ!
ನಾನೇ ನನ್ನನು ತಿನ್ನುವ ಅನ್ನ!
ತಿನ್ನಲಿ ಏನು ನಾ ನನ್ನನ್ನ?
ಅನ್ನ..ಽ ಅನ್ನ..ಽ ಅನ್ನ..ಽ ಅನ್ನ..ಽ
ದೇವರ ಕಾಟವೊ ಮಾನವರಾಟವೊ
ಹತ್ತಿ ಬಿತ್ತಿ ಬೆಳಕೊಂಡೆವು ಹಾಳು
ತಿನ್ನಲು ಬೆಳೆಯದು ತುಸು ಕಡಿಕಾಳು
ಬಕ್ಕರಿಸುವುದೋ ಹೆಂಟೆಯ ಕೂಳು?
ಬತ್ತಿತು ಅನ್ನ ಹೊತ್ತಿತು ಚಿನ್ನ
ಚಂಚಲ ಲಕ್ಷ್ಮಿಯ ಕಟಾಕ್ಷದನ್ನ

ಹುಟ್ಟಿದ ಕೂಡಲೆ ಹಾರಿತೊ ಅಣ್ಣ.
ಮಾನವಮೂರ್ತಿ ಮತಿಸಂಪನ್ನ
ಹೊಟ್ಟೆಗೆ ಹಾಕಿದೆ ಚಿನ್ನದ ಕನ್ನ
ಹುಟ್ಟಿತಲ್ಲಿಯೇ ಹೊಟ್ಟೆಯ ಬನ್ನ
ಚಿನ್ನದ ಭಸ್ಮಾಸುರನ ಹರಕೆಯಿರೆ
ತತ್‌ಕ್ಷಣ ಬರುವುದು ಸಾವಿಗೆ ಅಕ್ಕರೆ
ಮಿಡಾಸ ಕೈಯನು ಹಚ್ಚಿದನೆಮಗೋ
ಎಡೆಮಾಡಿದನೊ ನಿವೇದಿಸಿ ಯಮಗೋ
ಅನ್ನಪೂರ್ಣೆಗಿದು ಪೂರ್ಣಾಹುತಿಯೋ?
ಜೀವದ ಗತಿ ಹತಿಯಿಲ್ಲದ ಮೃತಿಯೋ?
ಅನ್ನ..ಽ ಅನ್ನ..ಽ ! ಕಡಿ ಹೊನ್ನನ್ನ.

ಕೃತಯುಗ ಬರಲಿದೆ ಎನ್ನುವ ಪ್ರಾಣಿ
ಕಾಲಭೈರವನು ಕೃಪಾಣಪಾಣಿ
ಬರುತಿಹ ತೆರೆದು ಮೂರೂ ಕಣ್ಣ
ಬಾರೈ ಬಣ್ಣದ ಮಾತಿನ ಅಣ್ಣ!
ಸುಖಸಾಮ್ರಾಜ್ಯದ ಕನಸಿಗ ನೀನು
ಅಟ್ಟಿ ಮುರಿಯುವೀ ಕುಣಿತವಿದೇನು?
ಧಿಕತೋಂ ಧಿಕತ್ಯೆ ನಡೆದಿದೆ ನೃತ್ಯ
ಕಟ್ಟಿದ ಜಗವನು ಕೆಡಿಸುವ ಕೃತ್ಯ.
ಹೊಟ್ಟೆ ತೋಡೆ ಹೊರಟಿತು ಬೇತಾಳ
ಮುಂದೆ ಕಳುಹಿದನೊ ಪ್ರಳಯದ ಕಾಳ
ಬರವ ತಿಳುಹಿಸಲು ಓಲೆಯ ಆಳ!
ಕುಣಿಯುತಲಿಹನವ ನಿಲ್ಲದೆ ತಾಳ.
ಹಾಡಿನ ನುಡಿ ನುಡಿ "ತಿನಲೇನನ್ನ"
ಮೇಲೆ ಪಲ್ಲವಿಯು "ಅನ್ನ..ಽ ಅನ್ನ!"
ಎಲ್ಲಿದೆ ಅನ್ನ? ಎಲ್ಲವೂ ಚಿನ್ನ.

ಏತರಾಸೆಯನೊ ಹೇಗೋ ಹಚ್ಚಿ
ಆಡುತಾಡುತಲೆ ಹಿಡಿದರು ಕಚ್ಚಿ
ತಲೆಯಲಿ ಮಾಟದ ಮುಳ್ಳನು ಚುಚ್ಚಿ
ನೆಲಮಾಳಿಗೆಯೊಳು ಕತ್ತಲೆ ಹೊಚ್ಚಿ
ಸೆರೆ ಹಿಡಿದರು ಎಲೆ ಚಿನ್ನದ ಹಕ್ಕಿ
ಬೊಕ್ಕಸದುಕ್ಕಿನ
ಬಾಗಿಲವಿಕ್ಕಿ
ಒಗೆದರು
ಕೂಡಲೇ
ರೆಕ್ಕೆಯ ಕಿತ್ತು
ಸುಮ್ಮನೆ ನೋಡುವೆ ಸುತ್ತೂ ಮತ್ತು
ಹಕ್ಕಿಯೆ ನೀ ಸೆರೆಯಲಿ ಸಿಕ್ಕಿರಲು
ಧರ್ಮದ ಕೊರಳಿಗೆ ಅನ್ನದ ಉರಲು
ಅನ್ನ..ಽ ಅನ್ನ...ಽ ಪ್ರಾಣದ ಕೂಗು

ಪ್ರಳಯಕೆ ಔತಣ ಹಾಗೂ ಹೀಗೂ
ಈ ಹಸಿವೆಯ ಕೊಲ್ಲುವ ಸುತ್ರಾಣ
ಎಲ್ಲಿದೆ ಎಲ್ಲಿದೆ ಬಿಲ್ಲೂ ಬಾಣ?
ಚಿನ್ನದ ಸೆರೆಯನು ಮೊದಲೇ ಬಿಡಿಸಿ!
ಅನ್ನ ಕಲ್ಪವೃಕ್ಷವ ಚಿಗುರಿಡಿಸಿ
ಅಲ್ಲಿಯವರೆಗೂ ಅನ್ನ..ಽ ಅನ್ನ..ಽ!
ಒಂದೇ ಹಾಡು ಕೇಳಲೆ ಚಿನ್ನ.

■ ದ.ರಾ.ಬೇಂದ್ರೆ
(ಅಂಬಿಕಾತನಯದತ್ತ)

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH